
ಕೊಡಗು ಸಂಗಾತಿ

ಏಪ್ರಿಲ್ 1 ರಿಂದ 30, 2004 ಪಾಕ್ಷಿಕ ಪತ್ರಿಕೆ (ಸುಗ್ಗಿ 18-30 , ಪಗ್ನು 1-17)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ RNI No. : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಲಿ ಪ್ರಕಟಿತ

KA / SK / MYS / 88 / 2003-05, ಸಂಪುಟ : 8 ಸಂಚಿಕೆ : 1-2 ಪುಟಗಳು : 24 ಬೆಲೆ : 12-00 ರೂ.



: ಲೇಖನ ಒಳಪುಟದಲ್ಲಿ

ಸಮಾಜೋದ್ಧಾರಕ್ಕೆ ಬದ್ಧವಾದ ನಾಥ ಪಂಥದ ಪ್ರಮುಖ ಮಠವೇ ಆದಿಚುಂಚನಗಿರಿ ಮಹಾಸಂಸ್ಥಾನ ಮಠ.

ಹಾಲಿ ಮಠಾಧೀಶ್ವರರು : ಯುಗ ಯೋಗಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು

ಕೊಡಗು ಸಂಗಾತಿ 8ನೇ ವರ್ಷಕ್ಕೆ ಪಾದಾರ್ಪಣೆ. ಹಿತೈಷಿ ಓದುಗರೆಲ್ಲರಿಗೂ ನಮನಗಳು.

ಪೇರಿಯನ ಕಪ್ 2004



10 ಕುಟುಂಬ18 ಗೋತ್ರದ ಗೌಡ ಜನಾಂಗದ ಕೌಟುಂಬಿಕ ಕ್ರಿಕೆಟ್ ಪಂದ್ಯಾಟ.
ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತೆ ಪೇರಿಯನ ಕುಟುಂಬಸ್ತರ
ಸಂಯುಕ್ತಾಶ್ರಯಲ್ಲಿ ನಡ್ದದೆ.

ಉದ್ಘಾಟನಾ ಸಮಾರಂಭ

ಇದೇ ಮೇ ತಿಂಗಳ 3-16ರ ತನಕ ಮಡಿಕೇರಿಯಲ್ಲಿರ್ರು ಮ್ಯಾನ್ಸ್ ಕಾಂಪೌಂಡ್ ಮೈದಾನಲಿ ಜನಾಂಗದ ನಾಲ್ಕನೇ ವರ್ಷದ ಕ್ರಿಕೆಟ್ ಆಟದ "ಪೇರಿಯನ ಕಪ್' ನಡ್ದದೆ. ಸುಮಾರ್ 200 ಕ್ಕೂ ಹೆಚ್ಚಿನ ತಂಡಗಳಿಂದ ಈ ಬಾರಿ ಆಕರ್ಷಕ ಪಥ ಸಂಚಲನ ಉಟ್ಟು. ಈ ಮಧ್ಯೆ ಸಾಂಸ್ಕೃತಿಕ ಕಾರ್ಯಕ್ರಮಗ ನಡ್ದವೆ. ಸಮಸ್ತ ಗೌಡ ಬಾಂಧವು ಬಂದ್ ಭಾಗವಹಿಸಕ್ಕು ಮತ್ತೆ ಪ್ರೊತ್ಸಾಹಿಸಿ ಸಹಕರಿಸಕ್ಕು. ಸಹಬಾಳ್ವೆಯ ಸಂಘಟನೆಯೇ ನಮ್ಮ ಧ್ಯೇಯವಾಗಿಟ್ಟು. ಬಾಂದವುಕ್ಕೆಲ್ಲಾ ಹೃದಯ ತುಂಬಿ ಸ್ವಾಗತ ಉಟ್ಟು. ಹೆಚ್ಚಿನ ಸಂಖ್ಯೆಲಿ ಕೂಡ್ ಕುಟುಂಬ ಸಮೇತರಾಗಿ ಭಾಗವಹಿಸಕ್ಕು. ಇಂತಹ ಸುವರ್ಣಾವಕಾಶನ ತಪ್ಪಿಸಿಕಣಿಕಾದ್. ತಂಡಗಳ ಹೆಸ್ರ್‌ನ 25-4-2004 ರ ಒಳಗೆ ಈ ಕೆಳ್ಗಿನ ದೂರವಾಣಿ ಸಂಖ್ಯೆಗಳ್ಲಿ ನೋಂದಾಯಿಸಿ ಕಣಕ್ಕ್.

08272/229906, 224109 ಮತ್ತ 9448128529

ಪ್ರಕಟಣೆ: ತುಂತಜೆ ಗಣೇಶ್, ಅಧ್ಯಕ್ಷರ್ ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತೆ ಆಡಳಿತ ಮಂಡಳಿಯವು ಹಂಗೆನೆ ಪೇರಿಯನ ಕುಟುಂಬಸ್ತರ ಪಟ್ಟೆದಾರರ್ ಮತ್ತೆ ಕುಟುಂಬಸ್ತರ್.

ಪ್ರಕಟಣೆ : ಗೌಡ ಸಮಾಜ, ವಿರಾಜಪೇಟೆ

ವಿರಾಜಪೇಟೆ (ಬೊಯಿಕೇರಿ)ಯಲ್ಲಿ ನೂತನವಾಗಿ ಶ್ರೀ ಕುರುಂಜಿ ಜಾನಕಿ ವೆಂಕಟ್ರಮಣ ಗೌಡ ಸಮುಧಾಯ ಭವನವು ಇತ್ತೀಚೆಗೆ ಉದ್ಘಾಟನೆಗೊಂಡು ಸಾರ್ವಜನಿಕರ ಅನುಕೂಲಕ್ಕಾಗಿ ಲಭ್ಯವಿದೆ. ಮದುವೆ, ನಾಮಕರಣ, ನಿಶ್ಚಿತಾರ್ಥ, ಇನ್ನಿತರ ಸಮಾರಂಭಗಳಿಗೆ ಕಡಿಮೆ ದರದಲ್ಲಿ ಬಾಡಿಗೆಗೆ ಸೌಕರ್ಯವುಳ್ಳ ಎಲ್ಲಾ ತರಹದ ಸೌಲಭ್ಯಯೊಂದಿಗೆ ದೊರಕುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ. ಗೌಡ ಸಮಾಜ ಕಛೇರಿ : **255382** ಮತ್ತು ಬಾರಿಕೆ ಮನೋಜ್ ಕುಮಾರ್, ಇಗ್ಗುತಪ್ಪ ಕೋಲ್ಡ್ ಸ್ಟೋರೇಜ್, ಖಾಸಗಿ ಬಸ್ ನಿಲ್ದಾಣ, ವಿರಾಜಪೇಟೆ ದೂರವಾಣಿ **256591**

ಕಾರ್ಯನಿರ್ವಾಹಕರ ಹುದ್ದೆ ಖಾಲಿ ಇದೆ.

ಕೊಡಗು ಸಂಗಾತಿ ಪತ್ರಿಕೆಯ ಮಡಿಕೇರಿ ಶಾಖೆಯಲ್ಲಿ ಕಾರ್ಯ ನಿರ್ವಹಿಸಲು, ಕಾರ್ಯ ನಿರ್ವಾಹಕರೊಬ್ಬರು ಬೇಕಾಗಿದ್ದಾರೆ. ಕನಿಷ್ಠ ಪಿಯುಸಿ/ಡಿಗ್ರಿ ಓದಿದವರಾಗಿರಬೇಕು. ಲೇಖನ, ಸಂದರ್ಶನ, ಬರವಣಿಗೆ, ವಸೂಲಾತಿ ಮಾಡುವ ಸಾಮರ್ಥ್ಯವಿರಬೇಕು. ಒಳ್ಳೆಯ ಮಾತುಗಾರನಾಗಿರಬೇಕು. ಸೂಕ್ತ ಸಂಭಾವನೆ ನೀಡಲಾಗುವುದು. ಆಸಕ್ತರು ಕೂಡಲೇ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಮೈಸೂರು - 0821/2404290, ಮಡಿಕೇರಿ -08272/228047 ಯಾರು ಬೇಕಾದರು ಸಂಪರ್ಕಿಸಬಹುದು.

ವಿಳಾಸ: ಕೊಡಗು ಸಂಗಾತಿ, 21/4 ಪಾಂಡನ ಕಾಂಪೌಂಡ್ಸ್, ಸುಬೇದಾರ್ ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ವಿ. ಸೂ. : ವಾರದ ಸೋಮವಾರ ಮತ್ತು ಶುಕ್ರವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಘಂಟೆಯ ತನಕ ಬೈತಡ್ಕ ಜಾನಕಿಯವರು ಸಧ್ಯ ಕಾರ್ಯನಿರ್ವಹಿಸುತ್ತಿರುವರು. ***ಸಂಪಾದಕಿ.***

ವಿರಾಜಪೇಟೆಲಿ ಚಂದಾ ನವೀಕರಿಸಿಕೆ ಸುವರ್ಣಾವಕಾಶ

ಇದೇ ತಿಂಗಳ 14-4-2004 ರಲ್ಲಿ ವೀರಾಜಪೇಟೆ ತಾಲ್ಲೂಕಿನ ಗೌಡ ಸಮಾಜದ ಉದ್ಘಾಟನೆ ನಡ್ದದೆ. ಆ ಸಮಾರಂಭಕ್ಕೆ ಕೊಡಗು ಸಂಗಾತಿ ಗೌರವ ಸಂಪಾದಕರ್ ಬಂದವೆ. ಆಗ ಸಂಗಾತಿದ್ ವಾರ್ಷಿಕ ಚಂದಾ ಹಣನ ನವೀಕರಿಸಿಕಣಕ್ಕ್. ನಿಮ್ಮೊಟ್ಟಿಗೆ ನಿಮ್ಮ ನೆಂಟ್ರ್ ನಾಡ್‌ಗಳ್ನ ಸಹ ಸದಸ್ಯರಾಗಿ ಸೇರ್ಪಕ್. ನಮ್ಮವರ ಏಕೈಕ ಪತ್ರಿಕೆ ಆಗಿದ್ದ್ ಉಳ್ಸಿ ಬೆಳ್ಸದು ನಿಮ್ಮ ಕರ್ತವ್ಯ ಆಗಿಟ್ಟು. ನಮ್ಮ ಕಾರ್ಯ ನಿರ್ವಾಹಕರಾಗಿರುವ ಬಾರಿಕೆ ಮನೋಜ್‌ಕುಮಾರ್‌ರವರನ ಸಹ ಬೇಟಿಯಾಕ್. ದಯವಿಟ್ಟು ಬಾಕಿ ಉಳಿಸಿ ಕಣಿಕಾಗದ್. ಸಹಕಾರವಿರಲಿ. ವಿರಾಜಪೇಟೆ, ದೂರವಾಣಿ : 08274/256591

ಪ್ರಕಟಣೆ

ಜನಪ್ರಿಯ "ಸರ್ಪಗಂಧ" ಧಾರವಾಹಿಯ ಹೆಸರಾಂತ ಸಾಹಿತಿ ಬರಹಗಾರ "ಕೌಂಡಿನ್ಯ' ರಚಿತ ಧಾರಾವಾಹಿಯೊಂದು ಸಂಗಾತಿಯ 3 ಪುಟಗಳಲ್ಲಿ 24 ತಿಂಗಳು ಮೂಡಿಬರಲಿದೆ. ಪ್ರಾಯೋಜಕರು ಇದ್ದಲ್ಲಿ ಸಂಪರ್ಕಿಸಿ. ದಂಪತಿಗಳ ಫೋಟೋ ಸಹಿತ 24 ತಿಂಗಳು ಪ್ರಕಟಿಸಲಾಗುವುದು. ಮೊದಲು ಬಂದವರಿಗೆ ಪ್ರಥಮ ಆದ್ಯತೆ . ತ್ವರಿತವಾಗಿ ಸಂಪರ್ಕಿಸಿ.

ವಿಳಾಸ : 0821-2404290 C/o ಕೊಡಗು ಸಂಗಾತಿ

2004, ಏಪ್ರಿಲ್ 1 ರಿಂದ 30ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	**ಕೊಡಗು ಸಂಗಾತಿ**, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. **ಫೋನ್: 0821/2404290** ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್‌ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94483-90855**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ : ಚಿಹ್ನೆ, ಹಸೆಮಣೆ ಪುಸ್ತಕ / ಚಾಂಪಾ ಶುಭಾಶಯ ಕಾರ್ಡ್ಸ್ / ಕುರುಂಜಿಯವರ ಕ್ಯಾಸೆಟ್ಸ್, ಅಮರಶ್ರೀ ಸ್ಮರಣ ಸಂಚಿಕೆ ಇತ್ಯಾದಿ ಲಭ್ಯ.	**ಕೊಡಗು ಸಂಗಾತಿ** C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ಬೈತಡ್ಕ ಜಾನಕಿ ಬೆಳ್ಯಪ್ಪ ಫೋನ್ : 228047 ಪಾಂಡನ ರತಿ ಚಂದ್ರಶೇಖರ್ **ಫೋನ್ : 228380**
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ **ಫೋನ್ : 08274/256591**
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್ : 08276/273370**
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ. ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ),

ಕೊಡಗು ಸಂಗಾತಿಯನ್ನು ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಲು ಮರೆಯದಿರಿ.

ಸಂಪಾದಕೀಯ : ಭಾರತೀಯ ರಾಜಕೀಯದಲ್ಲಿ ಜಾತ್ಯಾತೀತ ರಾಜಕೀಯ.

ಜಾತ್ಯಾತೀತವೆಂಬ ಶಬ್ಧಕ್ಕೆ ರಾಜಕೀಯದಲ್ಲಿ ಅರ್ಥವೇ ಇಲ್ಲದಂತಾಗಿದೆ. ರಾಜಕೀಯ ಭಾಷಣ ಮಾಡುವಾಗ ಪ್ರತೀ ರಾಜಕೀಯ ಪಕ್ಷಗಳು ಜಾತ್ಯಾತೀತವಾಗಿರ ಬೇಕೆಂಬುದು ಹೇಳಿಕೊಳ್ಳುತ್ತವೆ. ಆದರೆ ಆ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಬ್ರಾಹ್ಮಣರಿಗೆ ಎಷ್ಟು ಸೀಟು? ಒಕ್ಕಲಿಗರಿಗೆ ಎಷ್ಟು ಸೀಟು? ಲಿಂಗಾಯಿತರಿಗೆ ಎಷ್ಟು ಸೀಟು? ಮುಸಲ್ಮಾನರಿಗೆ, ಕ್ರೈಸ್ತರಿಗೆ ಎಷ್ಟು ಸೀಟುಗಳು ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಸೀಟುಗಳನ್ನು ಹಂಚುತ್ತಾರೆ. ಗೆದ್ದ ಮೇಲೆ ಪುನಃ ಮಂತ್ರಿಗಳನ್ನು ಆರಿಸುವಾಗಲೂ ಇದೇ ರೀತಿ ಮಾಡುತ್ತಾರೆ. ಹಾಗಾದರೆ ಜ್ಯಾತ್ಯಾತೀತ ಎಂಬ ಶಬ್ಧ ಬರೆ ಸಂವಿಧಾನದಲ್ಲಿ ಮಾತ್ರ ವಿವರಣೆಯಲ್ಲಿದೆ, ಹೊರತು ಕಾರ್ಯಗತವಾಗಿ ಯಾವ ರಾಜಕೀಯ ಪಕ್ಷವೂ ಇಲ್ಲಿಯವರೆಗೆ ಕಟ್ಟುನಿಟ್ಟಾಗಿ ಪಾಲಿಸಲಿಲ್ಲ. ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು ಎಂಬ ಗಾದೆ ಯಂತಾಗಿದೆ ನಮ್ಮ ರಾಜಕೀಯ ಪಕ್ಷಗಳ ಜಾತ್ಯಾತೀತ ಸಿದ್ಧಾಂತ. ಎಲ್ಲಿಯವರೆಗೆ ಜಾತಿ ಪದ್ಧತಿ ನಿರ್ಮೂಲ ವಾಗುವುದಿಲ್ಲವೋ ಅಲ್ಲಿಯವರೆಗೆ ಜಾತ್ಯಾತೀತ ಎಂಬ ಶಬ್ಧಕ್ಕೆ ರಾಜಕೀಯದಲ್ಲಿ ಅರ್ಥ ವಿಲ್ಲದ ಮಾತೆಂದು ಸಂಗಾತಿಯ ಅಭಿಪ್ರಾಯ.

(ಜಾತ್ಯಾತೀತ ಎಂದರೆ ಜಾತಿಗಳನ್ನು ಮೀರಿದ, ಜಾತಿಗೆ ಲಕ್ಷ್ಯ ಕೊಡದ ರಾಜಕಾರಣ ಎಂದರ್ಥ)

ಕೊಡಗು ಸಂಗಾತಿ 8 ನೇ ವರ್ಷಕ್ಕೆ ಪಾದಾರ್ಪಣೆ

ಕೊಡಗು ಸಂಗಾತಿ 1-4-1997 ರಲ್ಲಿ ಪ್ರಾರಂಭ ಆಗಿ 1-4-2004 ಕ್ಕೆ 8 ನೇ ವರ್ಷಕ್ಕೆ ಕಾಲಿಟ್ಟಿದೆ. ಆದರೆ ಅದರ ಪ್ರಗತಿ ಮಾತ್ರ 1-4-97 ರಷ್ಟೇ ಇದೆ. ಅಂದಿನಿಂದ ಇಂದಿನವರೆಗೆ ಸಂಗಾತಿಯ ಓದುಗಾರರಿಗೆ ಸಂಗಾತಿಗೆ ಪಾವತಿಸುವ ಚಂದಾವಸೂಲಾತಿಯಲ್ಲಿ ಯಾವುದೇ ರೀತಿಯಲ್ಲಿ ಪ್ರಗತಿ ಕಾಣುತ್ತಿಲ್ಲ. ಕೊಡಗು ಸಂಗಾತಿಯ ವಾರ್ಷಿಕ ಚಂದ ಕೇವಲ 150 ರೂಪಾಯಿ. ಕೊಡಗು ಸಂಗಾತಿಯಲ್ಲಿ ಬರುವ ಲೇಖನಗಳು ಗೌಡ ಜನಾಂಗಕ್ಕೆ ಮೀಸಲಾಗಿರುವುದರಿಂದಲೇ ಮಾತ್ರ ಚಂದಾ ಹಣ ಬರಬೇಕೆ ಹೊರತು ಜನಸಾಮಾನ್ಯರಿಂದ ಚಂದಾ ಕೇಳಲು ಸಾಧ್ಯವಿಲ್ಲದಿರುವಾಗ ಸಂಗಾತಿಯ ಪ್ರಕಟಣೆ ಗೌಡ ಜನರ ವಾರ್ಷಿಕ ಚಂದದಿಂದಲೇ ಸಾಧ್ಯ. ಈ ವರ್ಷ ಜನವರಿಯಿಂದ ಚಂದಾವನ್ನೂ ಕೇವಲ 44 ಜನರು ಮಾತ್ರ ಕಳುಹಿಸಿದ್ದಾರೆ. ಈ ರೀತಿ ಆದರೆ ಸಂಗಾತಿ ಪತ್ರಿಕೆಯನ್ನು ಮುಂದುವರಿಸುವ ದಾರಿ ಯಾವುದೆಂದು ಪತ್ರಿಕೆಯ ವ್ಯವಸ್ಥಾಪಕರ ಚಿಂತೆಯಾಗಿದೆ. ಈ ಪರಿಸ್ಥಿತಿಯಲ್ಲಿ ಕೊಡಗು ಸಂಗಾತಿ ಪತ್ರಿಕೆಯನ್ನು ಮುಂದುವರಿಸಬೇಕೆ ಯಾ ಬೇಡವೇ ಎಂಬ ಜಿಜ್ಞಾಸೆ ಉಂಟಾಗುವುದು ಸಹಜ.

ಚಂದಾದಾರರಿಂದ ಸುಮಾರು ರೂ.ಮೂರುವರೆ ಲಕ್ಷಕ್ಕೂ ಮಿಕ್ಕಿ ಬಾಕಿ ಬರಬೇಕಾಗಿದೆ.

ಈ ವಿಷಯಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಜನಾಂಗದ ಪ್ರತಿಯೊಬ್ಬ ಸದಸ್ಯರಿಗೂ ಸಂಗಾತಿಯ ಕಳಕಳಿಯ ಮನವಿ ಏನೆಂದರೆ ಪ್ರತಿ ಸದಸ್ಯನೂ ಸಂಗಾತಿಯ ಅಭಿವೃದ್ಧಿಗಾಗಿ ತಪ್ಪದೆ ಸಹಕರಿಸಬೇಕಾಗಿ ವಿನಯದಿಂದ ಈ ಸಂಪಾದಕೀಯದ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

ಗೌಡ ಜನಾಂಗಕ್ಕೆ ಒಂದ್ ಬರಹಗಾರ ಕೂಟ ಬೇಕ್

ಕೊಡಗ್, ಕನ್ನಡ ಜಿಲ್ಲೆ ಮತ್ತೆ ಇತರೆ ಕಡೆಗಳ್ಲಿತ್ತೇಳಿ ನಮ್ಮವು ಸುಮಾರ್ ಐದ್ ಲಕ್ಷಕ್ಕ್ ಮೀರಿ ಒಳೋತ ತಿಳ್ದ್ ಬಂದುಟ್ಟು. ಹಿಂಗಿರ್‌ಕಾಕನ ನಾವ್ಗೇ ನಂಮದೆ ಆದ ಬರಹಗಾರರ ವೇದಿಕೆ ಬೇಕ್. ಈ ನಿಟ್ಟ್‌ಲಿ ಸ್ವಲ್ಪ ಕೆಲ್ಸನ ಕೊಡಗ್ ಸಂಗಾತಿ ಮಾಡ್ತಾ ಉಟ್ಟು. ಆದ್ರೆ ಇದ್ ಸಾಲ್ದ್. ಬ್ಯಾರೆ ಕಡೆ ಎಲ್ಲಿಸ ನಮ್ಮವರದ್ದೇ ಆದ ಪತ್ರಿಕೆಗ ಇಲ್ಲೆ. ಕನ್ನಡ ಜಿಲ್ಲೆಲಿ ಪಯಸ್ವಿನಿ ಮತ್ತೆ ಸುದ್ದಿ ಪತ್ರಿಕೆಗ ಇದ್ದರು ಸ ಅವು ಸುದ್ದಿ ಮಾಧ್ಯಮ ಗಳಾಗಿಟ್ಟುತ್ತೇಳಕ್ಕ್. ಕೊಡಗ್ ಸಂಗಾತಿ ಒಂದ್ ಸಾಹಿತ್ಯ ಪುರವಣಿ ತರಲಿ ಬರ್ತಾ ಇರ್‍ದು. ಇದ್ ಎಲ್ಲಾ ತರದ ವಿಷಯನ ಅಡ್ಕ ಮಾಡ್ತ ಉಟ್ಟು. ಹಾಂಗಾಗಿ ನಾವ್‌ಗ ಎಲ್ಲಾ ಕೂಡಿಕಂಡ್ ಒಂದ್ ಬರಹಗಾರರ ಕೂಟನ ಮಾಡಿಕಂಬನೊ. ಈ ಕೂಟಕ್ಕೆ ಯಾರ್‍ಯಾರಿಗೆ ಸೇರಿಕ್ಕೆ ಇಷ್ಟ ಉಟ್ಟೊ ಅವ್ ಎಲ್ಲವು ಕೊಡಗ್ ಸಂಗಾತಿಗೆ ಅಡ್ರೆಸ್ ಮತ್ತೆ ದೂರವಾಣಿ ಸಂಖ್ಯೆನ ಅಂಚೆ ಕಾರ್ಡ್ ಮೂಲ್ಕ ಬರ್ದ್ ಕೊಟ್ಟರೆ ನಾವ್ಗೆ ಮುಂದೆ ಹೋಕೆ ಸುಲ್ಪ ಆದೆತ್ತೇಳಿ ನಂಮ ಗ್ಯಾನ. ನಾವೆಲ್ಲಾ ಕೂಡಿ ಒಟ್ಟಿಗೆ ಒಗ್ಗಟ್ಟಿಂದ ಮುಂದೆ ಹೋಯಿ. ನಾವ್ಗೆ ನಮ್ಮ ಕುಲಗುರು ವೆಂಕಟರಮಣ ಮತ್ತೆ ತಾಯಿ ಶಾರದೆ ಒಳ್ಳೆದ್ ಮಾಡಲಿತ್ತೇಳಿ ಈ ಸಂದರ್ಭಲಿ ಕೇಳಿಕಂಬನೋ.

ದೂರವಾಣಿ : 0821/2404290

ಪಟ್ಟಡ ಪ್ರಭಾಕರ.

ಒಕ್ಕಲಿಗರ ಭೈರವನು ಗೌಡರ ಕೆಂಚಿರಾಯನು ಒಂದೇ ನಾಣ್ಯದ ಎರಡು ಮುಖಗಳು

ಕೊಡಗಿನ ಬಗತ್‌ಸಿಂಗ್ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಶಾಶ್ವತ ನೆನಪಿಗೆ ಸ್ಮಾರಕ ಗಣ್ಯರ ಸಭೆಯಲ್ಲಿ ತೀರ್ಮಾನ



ಉದ್ಘಾಟನೆ: ಶ್ರೀ ಜಿ. ರಾಜೇಂದ್ರ, ಶ್ರೀ ಗುಡ್ಡೆಮನೆ ರಮೇಶ್, ಶ್ರೀ ಟಿ. ಪಿ. ರಮೇಶ್, ಶ್ರೀ ದೇವಿಪ್ರಸಾದ್, ಶ್ರೀ ಎಂ. ಯು ಅಚ್ಚಣ್ಣ. ಶ್ರೀ ಬೈತಡ್ಕ ದೇವಯ್ಯ, ಶ್ರೀ ಬೇಕಲ್ ರಮಾನಾಥ್ ನವರನ್ನೂ ಚಿತ್ರದಲ್ಲಿ ಕಾಣಬಹುದು

ದಿನಾಂಕ 29-2-04 ರಂದು ಸಮಿತಿವತಿಯಿಂದ ನಡೆದ ವಿಶೇಷ ಸಭೆಯಲ್ಲಿ ಹುತಾತ್ಮ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಸಂಸ್ಮರಣಾ ಸಮಿತಿಯ ವತಿಯಿಂದ ಕರೆಯ ಲಾಗಿದ್ದ ಗುಡ್ಡೆಮನೆ ಅಪ್ಪಯ್ಯಗೌಡರ ಸ್ಮಾರಕ ನಿರ್ಮಾಣದ ಕುರಿತಾದ ಪೂರ್ವಭಾವಿ ವಿಶೇಷ ಸಭೆಯು ಸುರ್ಧೀರ್ಘವಾಗಿ ನಡೆದು ಸರ್ವಜನಾಂಗದವರಿದ್ದು ವಿವಿಧ ಗಣ್ಯರ ಅಭಿಪ್ರಾಯ ಸಂಗ್ರಹದೊಂದಿಗೆ ತಾತ್ಕಾಲಿಕ ಸಮಿತಿಯ ರಚನೆಯೊಂದಿಗೆ ಮುಕ್ತಾಯಗೊಂಡಿತು.

ಮೊದಲಿಗೆ ಬಾಲಭವನದ ಕಾವೇರಿ ಕುಟೀರದ ಮಕ್ಕಳಿಂದ ಪ್ರಾರ್ಥನೆ ನಡೆದ ಬಳಿಕ ಸಭೆಯು ಗುಡ್ಡೆಮನೆ ಅಪ್ಪಯ್ಯಗೌಡರೂ ಸೇರಿದಂತೆ ಇತರ ಸ್ವಾತಂತ್ರ್ಯ ಹುತಾತ್ಮರಿಗೆ ಒಂದು ನಿಮಿಷದ ಮೌನವಾಚರಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಪ್ರಾಸ್ತವಿಕವಾಗಿ ಮಾತನಾಡಿದ ಸಮಿತಿ ಸಂಚಾಲಕ ಗುಡ್ಡೆಮನೆ ರಮೇಶ್ 1970 ರಿಂದ ಈಚೆಗೆ ಗುಡ್ಡೆಮನೆ ಅಪ್ಪಯ್ಯಗೌಡರ ಕುರಿತಾದ ಪ್ರಾಮಾಣಿಕ ಪ್ರಯತ್ನದ ವಿವಗಳು, ಮನವಿಗಳು ಹಾಗೂ ಅವರ ನೆನಪಿನಲ್ಲಿ ನಡೆದ ಕಾರ್ಯಕ್ರಮಗಳನ್ನು ಸಭೆಯ ಮುಂದೆ ಮಂಡಿಸಿದರು. 167 ವರ್ಷಗಳ ಹಿಂದೆ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸ್ವಾತಂತ್ರ್ಯ ಕಹಳೆ ಮೊಳಗಿಸಿದ್ದರೂ ಅಂತಹ ದೇಶಾಭಿಮಾನಿಯೋಧನಿಗೆ ಸಲ್ಲಬೇಕಾದ ಗೌರವ ಸಲ್ಲಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ತಾಯಿನಾಡಿನ ರಕ್ಷಣೆಗೆ ಹೋರಾಡಿ ಬ್ರಿಟಿಷರಿಂದ ನೇಣುಗಂಬಕ್ಕೆ ಏರಲ್ಪಟ್ಟ ಈ ಅಮರ ನಾಯಕನಿಗೆ ಸ್ಮಾರಕ ನಿರ್ಮಿಸುವ ಚಿಂತನೆ ನಡೆದಿದ್ದರೂ ಇದುವರೆಗೆ ಕೈಗೂಡಲಿಲ್ಲ ಎಂದ ಅವರು ಈ ಹಿನ್ನಲೆಯಲ್ಲಿ ಸ್ಮಾರಕ ನಿರ್ಮಿಸುವತ್ತ ದಾಪುಗಾಲು ಹಾಕಲು ಸರ್ವ ಜನಾಂಗಗಳ ವಿಚಾರವಂತ ಮತ್ತು ಬುದ್ಧಿಜೀವಿಗಳನ್ನೊಳಗೊಂಡ ಸಭೆಯನ್ನು ಕರೆದಿರುವುದಾಗಿ ತಿಳಿಸಿದರು.

ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ 'ಶಕ್ತಿ' ಪತ್ರಿಕೆ ಸಂಪಾದಕ ಹಾಗೂ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರೂ ಆದ ಜಿ. ರಾಜೇಂದ್ರ ಅವರು ಮಾತನಾಡಿ ರಾಷ್ಟ್ರಕ್ಕಾಗಿ ತ್ಯಾಗ ಮಾಡುವುದಕ್ಕಿಂತ ಬೇರೆ ಸೇವೆಯಿಲ್ಲ ಸಮರದಲ್ಲಿ ಸಕ್ರೀಯವಾಗಿದ್ದ ಗುಡ್ಡೆಮನೆ ಅಪ್ಪಯ್ಯಗೌಡರ ಹೆಸರನ್ನು ಜನ ಮಾನಸದಲ್ಲಿ ಕಾಪಿಡಲು ಬಹುಶಃ ಭರತ ಮಾತೆಯೇ ಈ ಸುಸಂದರ್ಭವನ್ನು ಸೃಷ್ಟಿಸಿರಬಹುದು ಎಂದು ಮಾರ್ಮಿಕವಾಗಿ ನುಡಿದರಲ್ಲದೆ ಅಪ್ಪಯ್ಯಗೌಡರ ಹೆಸರು ಅಜರಾಮರವಾಗಿ ಉಳಿಯಬೇಕೆನ್ನುವ ಸಂಸ್ಮರಣಾ ಸಮಿತಿಯ ಆಶ್ರಯ ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಲ್ಲೊಬ್ಬರಾದ ಶ್ರೀ ದೇವಿ ಪ್ರಸಾದ್ ಅವರು ಮಾತನಾಡಿ 1837 ನೇ ಇಸವಿಯ ಚಾರಿತ್ರಿಕ ಘಟನೆ ಹಾಗೂ ಗುಡ್ಡೆಮನೆ ಅಪ್ಪಯ್ಯಗೌಡರ ಮತ್ತು ಸಂಗಡಿಗರ ಕುರಿತು ವಿವರಿಸಿದರು. ಬಹುಶಃ ಕೊಡಗಿನವರ ಸಂಪೂರ್ಣ ಸಹಕಾರವಿದ್ದಿದ್ದರೆ 1837 ರ ಘಟನೆಯು ಬ್ರಿಟಿಷ್ ಆಡಳಿತ ವನ್ನು ಕೊನೆಗೊಳಿಸುತ್ತಿತ್ತೋ ಏನೋ ಎಂದರು. ಈ ನಿಟ್ಟಿನಲ್ಲಿ ಇದೊಂದು ಗೌಡರ ಗದ್ದಲ ಎಂಬ ರೀತಿಯಲ್ಲಿ ಬ್ರಿಟಿಷ್ ಚರಿತ್ರಾಕಾರರು ಉಲ್ಲೇಖಿಸಿದ್ದಕ್ಕೂ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯತ್ ಮಾಜೀ ಅಧ್ಯಕ್ಷೆ, ಹಾಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷೆರಾಗಿರುವ ಶ್ರೀಮತಿ ಕೆ. ಪಿ. ಚಂದ್ರಕಲಾ ಅವರು ಸ್ಮಾರಕ ನಿರ್ಮಾಣದ ಪ್ರಥಮ ದೇಣಿಗೆಯಾಗಿ ರೂ. 10,000/- ಅನ್ನೂ ನೀಡುವ ಭರವಸೆ ನೀಡಿದ್ದಾರೆಂದು ಸಂಚಾಲಕ ಗುಡ್ಡೆಮನೆ ರಮೇಶ್ ಇದೇ ಸಂದರ್ಭದಲ್ಲಿ ಪ್ರಕಟಿಸಿದರು.

ಗುಡ್ಡೆಮನೆ ಅಪ್ಪಯ್ಯಗೌಡರ ಮತ್ತು ದಂಗೆಯ ಬಗ್ಗೆ ಸಂಶೋಧನೆ ನಡೆಸುತ್ತಿರುವ ವಕೀಲ ಕುಡೆಕಲ್ಲು ವಿಧ್ಯಾದರ ಅವರು ಮಾತನಾಡಿ ಬ್ರಿಟಿಷರು ನಮ್ಮ ಇತಿಹಾಸವನ್ನು ತಿರುಚಿ ಹಾಕುವ ಪ್ರಯತ್ನ ನಡೆಸಿದ್ದು, ಇತಿಹಾಸ ನಿಜವಾದ ಪುನರ್ ಮೌಲ್ಯಮಾಪನ ಆಗಬೇಕಾಗಿದೆ ಎಂದು ನುಡಿದರಲ್ಲದೆ ಹಾಗೂ ಸಮಿತಿಯ ಏಳು ಪ್ರಮುಖ ಬೇಡಿಕೆಗಳನ್ನು ಸಭೆಯಲ್ಲಿ ಮಂಡಿಸಿದರು.

-ಗುಡ್ಡೆಮನೆ ರಮೇಶ್,

ಕೊಡಗಿನ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಸುಭೇದಾರ್ ಅಪ್ಪಯ್ಯಗೌಡರ ಸ್ಮಾರಕ ಆದಷ್ಟು ತ್ವರಿತವಾಗುವುದೊಳಿತು. ಆಗಲೇ ನಾಡಿಗೆ ಕಿರೀಟ ಪ್ರಾಯ.

ಡಿಲ್ಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಡಾ. ಪುರುಷೋತ್ತಮ ಬಿಳಿಮಲೆ ಆಯ್ಕೆ



ದಿಲ್ಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸಾಹಿತಿ, ವಿಮರ್ಶಕ ಮೂಲತಃ ಸುಳ್ಯದವ ರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ಮುಂದಿನ ಎರಡು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಅವರು ಕಳೆದ ಏಳು ವರ್ಷಗಳಿಂದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ಕೆ. ಆರ್. ನಾಗರಾಜ ಅವರನ್ನು ಕುತೂಹಲ ಕೆರಳಿಸಿದ ಚುನಾವಣೆಯಲ್ಲಿ ಕೇವಲ ಐದು ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನವೂ ಸೇರಿದಂತೆ ಒಟ್ಟು 15 ಸ್ಥಾನಗಳಿಗೆ ಫೆ. 22 ರಂದು ನಡೆದ ಚುನಾವಣೆಯಲ್ಲಿ ಬಿಳಿಮಲೆ ತಂಡವು ಒಟ್ಟು 12 ಸ್ಥಾನಗಳನ್ನು ಗೆದ್ದುಕೊಂಡು ಸಂಘದ ಮೇಲೆ ಪೂರ್ಣ ಹಿಡಿತ ಸಾಧಿಸಿದೆ.

"ಅರ್ಧಕ್ಕೇರಿರುವ ಕಟ್ಟಡದ ಕೆಲಸವನ್ನು ತ್ವರಿತವಾಗಿ ಪೂರೈಸುವುದು, ಸಂಘದಿಂದ ದೂರ ಹೋಗಿರುವ ಕನ್ನಡಿಗರನ್ನು ಮತ್ತೆ ಸಂಘದ ಕಡೆ ತರುವುದು, ವಿಕೇಂದ್ರಿಕೃತ ಚಟುವಟಿಕೆಗಳ ಮೂಲಕ ದಿಲ್ಲಿಯಾದ್ಯಂತ ಕರ್ನಾಟಕ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ತಮ್ಮ ಗುರಿ' ಎಂದು ಬಿಳಿಮಲೆ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಹೆಸರಾಂತ ಜಾನಪದ ವಿದ್ವಾಂಸ, ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆಯವರ ನೇತೃತ್ವದ ತಂಡ ದೆಹಲಿಯಲ್ಲಿ ಕನ್ನಡವನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯುವಲ್ಲಿ ಸಮರ್ಥವಾಗುತ್ತದೆ ಎಂಬ ಆಶಯ ನಮ್ಮದು.

- ಸಂಗಾತಿ

ಸುಳ್ಯದಲ್ಲಿ ಮಕ್ಕಳ ಧ್ವನಿ ಗೋಷ್ಠಿಯಲ್ಲಿ ಅಭಿರುಚಿ ಅಧ್ಯಯನ, ಅವಲೋಕನ ಮತ್ತು ಅಭಿವ್ಯಕ್ತಿ : ಯು. ಸು. ಗೌ. ವಾಣಿಕುಮಾರ್ ವಿಶ್ಲೇಷಣೆ

ಯುವಜನತೆ ಎಲ್ಲರೂ ಸಾಮಾನ್ಯವಾಗಿ ಸಾಹಿತ್ಯ ಲೋಕಕ್ಕೆ ಪ್ರವೇಶಿಸುತ್ತಾರೆ. ಆದರೆ ಸಾಹಿತ್ಯಲೋಕ ಎಲ್ಲರನ್ನೂ ಎತ್ತಿ ಹಿಡಿಯು ವುದಿಲ್ಲ. ಕೆಲವರನ್ನು ಬಿಟ್ಟು ಬಿಡುತ್ತದೆ ಎಂದು ಕವಿ, ಉಪನ್ಯಾಸಕ ಯು. ಸು. ಗೌ.ಸುಳ್ಯದಲ್ಲಿ ಇತ್ತೀಚೆಗೆ ನಡೆದ ಗೋಷ್ಠಿಯಲ್ಲಿ ಹೇಳಿದರು.

ಮಕ್ಕಳ ಧ್ವನಿ ಸಮ್ಮೇಳನದ ಅಂಗವಾಗಿ ನಡೆದ ಮಕ್ಕಳ ಕಥಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನೀವು ಬರೆಯುವುದಾದರೆ 'ಅ'ಕಾರದಿಂದ ಪ್ರಾರಂಭಿಸಬೇಕು ಅಂದರೆ ಬರೆಯುವುದರಲ್ಲಿ ಅಭಿರುಚಿ, ಅವಲೋಕನ, ಅಧ್ಯಯನ, ಅಭಿವ್ಯಕ್ತಿ ಇರಬೇಕು ಎಂದು ಕಿವಿಮಾತು ಹೇಳಿದರು.

ಸುಮಾರು 12 ಮಂದಿ ಎಳೆಯ ಕಥೆಗಾರರು ತಮ್ಮ ಕತೆಗಳನ್ನು ಪ್ರಸ್ತುತ ಪಡಿಸಿದರು. ಅಕ್ಷರ ಸಿ. ದಾಮ್ಲೆ, ಹರ್ಷಿತಾ ಕೆ. ಎಸ್. ಬೆಳ್ಳಾರೆ, ರಾಜೇಶ್ವರಿ ಎ. ಅಯ್ಯನಕಟ್ಟೆ, ಅನುಷ ಕೆ. ಸುಳ್ಯ, ಮಹೇಶ ಕೆ. ಬೆಳ್ಳಾರೆ, ವಿನ್ಯಾಸ್ ಪಿ. ಕಣಿಯೂರು, ಧನುಷ್ ಡಿ. ಬಿ. ಬೆಳ್ಳಾರೆ, ಅವಿನಾಶ್ ಭಟ್ ಸುಳ್ಯ, ಸಹನಾ ಎ. ಅರಂಬೂರು, ಸುಹಾಸ್ ಎಸ್. ಆರ್. ದೊಡ್ಡತೋಟ, ಅಂಜು ಇ. ಪಿ. ಅರಂಬೂರು, ಎಂ. ಪ್ರದೀಪ್ ಮಡ್ತಿಲ, ಕಥಾವಾಚನ ಮಾಡಿದರು. ಸುಳ್ಯದ ನೆಹರೂ ಸ್ಮಾರಕ ಮಹಾ ವಿದ್ಯಾಲಯದ ವಿದ್ಯಾರ್ಥಿನಿಯರಾದ ಮಂಜುಳಾ ಡಿ. ಮತ್ತು ಅದಿತಿ ಮಾನಸ ಟಿ. ಎಸ್. ನಿರೂಪಿಸಿದ ಕಾರ್ಯಕ್ರಮದಲ್ಲಿ ಜ್ಞಾನಗಂಗಾ ಶಾಲೆಯ ಚಿರಂಜೀವಿ ರಂಜನ್ ವಂದಿಸಿದರು.

ಭಾವಗಾನ : ಮಕ್ಕಳ ಧ್ವನಿ ಸಮ್ಮೇಳನದ ಅಂಗವಾಗಿ ವಿವಿಧ ಸಾಹಿತ್ಯಿಕ ಸ್ಪರ್ಧೆ ಹಾಗೂ ವಿದ್ಯಾರ್ಥಿಗಳಿಂದ ಭಾವಗಾನ ಕಾರ್ಯಕ್ರಮ ನಡೆಯಿತು. ಶ್ರೀಮತಿ ಸ್ವಾತಿ ಆಚಾರ್ ಕಾರ್ಯಕ್ರಮ ನಿರ್ವಹಿಸಿದರು.

-ಸಂಗಾತಿ

ಒಳ್ಳೆ ಕನ್ಸ್

ಗಂಡ: ಅಲ್ಲನೆ ನೆನ್ನೆ ರಾತ್ರೆಲಿ ಕನ್ಸ್‌ಲಿ ನಿನ್ನ ಸುಂದರ ಸ್ನೇಹಿತೆ ಬಂದಿತ್ತ್‌ತ ಹೇಳ್ದೆ.
ಹೆಣ್: ಒಬ್ಬಳೇ ಬಂದಿತ್ತ್ ಕಂಡದೆತ ನೆಗಾಡಿಕಂಡ್ ಹೇಳ್ತ್.
ಗಂಡ: ಅರೆ...ಅದ್ ನಿಂಗೆ ಹೆಂಗೆ ಗೊತ್ತಾತ್‌ತ ಆಶ್ಚರ್ಯಲಿ ಕೇಳ್ತ್.
ಹೆಣ್: ಹೆಂಗೆತ್ತೇಳಿರೆ ಅವುಳ ಗಂಡ ನಿನ್ನೆ ರಾತ್ರಿ ಕನ್ಸ್‌ಲಿ ನನ್ನ ಒಟ್ಟಿಗೆ ಇತ್ತಲ
ಗಂಡ: ನೀ ಹೇಳ್ದು ಒಂದು ನಂಗೆ ಗೊತ್ತಾದುಲೇನೇ
ಹೆಣ್: ಅದೆಲ್ಲಾ ನಿಮ್ಗೆ ಅರ್ಥ ಆಕಿಲ್ಲೆ.

-ಚೀಯಪ್ಪನ ಚರಣ್

ಹೇ ಮನುಷ್ಯ ನೀ ಯೋಚಿಸು !

ಕ್ರೋಧವು ಬುದ್ಧಿಯನ್ನು ತಿನ್ನುತ್ತದೆ

ಅಹಂಕಾರವು ಜ್ಞಾನವನ್ನು ತಿನ್ನುತ್ತದೆ

ಲಂಚವು ಗೌರವವನ್ನು ತಿನ್ನುತ್ತದೆ

ಚಿಂತೆಯು ಆಯುಷ್ಯವನ್ನು ತಿನ್ನುತ್ತದೆ

ಪ್ರಾಯಶ್ಚಿತವು ಪಾಪವನ್ನು ತಿನ್ನುತ್ತದೆ

ಸಂಗ್ರಹ : ನೂತನ್ ಕೋಳುಮುಡಿಯನ, ಗಾಳಿಬೀಡು.

ಅರೆಭಾಷೆಯಲ್ಲಿ ಉತ್ತಮವಾದ ಚಿಕ್ಕ ಕತೆಗಳನ್ನು ಪ್ರಕಟಿಸಲು ಸಂಗಾತಿ ಸಿದ್ಧವಿದೆ. ಕಳ್ಸಿ. (ಮಿತಿ ಒಂದು ಪುಟ)

ಗೌಡ ಜನಾಂಗಕ್ಕೆ ರಾಜಕೀಯ ಪ್ರಾತಿನಿಧ್ಯಕ್ಕೆ ಗೌಡ ಸಂಘ ಒತ್ತಾಯ

ಸುಳ್ಯ, ಪುತ್ತೂರು, ಬೆಳ್ತಂಗಡಿ, ಮಡಿಕೇರಿ, ಸೋಮವಾರ ಪೇಟೆ ತಾಲ್ಲೂಕುಗಳಲ್ಲಿ ಬಹು ಸಂಖ್ಯಾತರಾಗಿರುವ ಗೌಡ ಜನಾಂಗದ ಪ್ರತಿನಿಧಿಗಳಿಗೆ ಮುಂಬರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ದಕ್ಷಿಣಕನ್ನಡ ಮತ್ತು ಕೊಡಗು ಅಭಿವೃದ್ಧಿ ಸಂಘ ಒತ್ತಾಯಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಅಧ್ಯಕ್ಷ ಎಂ. ಪಿ. ಉಮೇಶ್ ಮಂಗಳೂರು ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಂತೆ ಸುಳ್ಯ, ಪುತ್ತೂರು, ಮಡಿಕೇರಿ, ಸೋಮವಾರ ಪೇಟೆ ಅಲ್ಲದೆ ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಬಹುಸಂಖ್ಯಾತ ಗೌಡ ಜನಾಂಗದ ಮತದಾರರಿದ್ದು ಅಲ್ಲೊಂದು ಇಲ್ಲೊಂದು ವಿಧಾನಸಭಾ ಕ್ಷೇತ್ರದ ಪ್ರಾತಿನಿಧ್ಯ ಮಾತ್ರ ನೀಡಿ ಜನಾಂಗವನ್ನು ರಾಜಕೀಯವಾಗಿ ಕಡೆಗಣಿಸುತ್ತಿರುವುದು ಕಂಡು ಬರುತ್ತಿದೆ ಎಂದು ತಿಳಿಸಿದ್ದಾರೆ.

ನಮ್ಮ ಒತ್ತಾಯ ಸಾಂವಿಧಾನಿಕ ಹಕ್ಕನ್ನು ಪಡಕೊಳ್ಳುವುದೇ ಹೊರತು ನಾವು ಯಾವತ್ತು ಜಾತೀಯತೆಯನ್ನು ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

***ಸಂಘಟಿತ ಜನಾಂಗ*:** ಗೌಡ ಜನಾಂಗ ತಾಲ್ಲೂಕು ಜಿಲ್ಲಾ ಮಟ್ಟದಲ್ಲಿ ಸಂಘಟಿತರಾಗುತ್ತಿದೆ. ಜಿಲ್ಲಾ ಮಟ್ಟದ ಗೌಡ ಸಮಾವೇಶಗಳು ನಡೆದಾಗ ಪಾಲ್ಗೊಂಡ ಮುಖ್ಯಮಂತ್ರಿ ಸಹಿತ ವಿವಿಧ ರಾಜಕೀಯ ಧುರೀಣರು ನಮ್ಮ ಸಂಘಟನೆಯ ರಾಜಕೀಯ ಬೇಡಿಕೆಗಳ ಬಗ್ಗೆ ಒಲವು ತೋರಿಸುತ್ತಾರೆ. ಇದನ್ನು ಈಡೇರಿಸಬೇಕು ಎಂದು ಸುಳ್ಯ ನಗರದ ಎಂ. ಪಿ. ಉಮೇಶ್, ಉದ್ಯಮಿ ಒತ್ತಾಯಿಸಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಗೌಡ ಜನಾಂಗಕ್ಕೆ ಆದ್ಯತೆ ಕೊಟ್ಟು ಮೇಲ್ಕಾಣಿಸಿದ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಲ್ಲಿ ಅವರ ಸಂಪೂರ್ಣ ಬೆಂಬಲಕ್ಕೆ ಗೌಡ ಜನಾಂಗ ಕಂಕಣಬದ್ಧವಾಗಿದೆ. ಪ್ರಾತಿನಿಧ್ಯ ದೊರಕದೇ ಇದ್ದಲ್ಲಿ ಜನಾಂಗದ ಅಧಿಕೃತ ಅಭ್ಯರ್ಥಿ ನಿಲ್ಲಿಸಲು ಚಿಂತನೆ ನಡೆಸುತ್ತೇವೆ ಎಂದು ಎಂ. ಪಿ. ಉಮೇಶ್ ಇತ್ತೀಚೆಗೆ ಹೇಳಿದ್ದಾರೆ.

-ಸಂಗಾತಿ

ಸರ್ವಜ್ಞ

ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ
ಬಲ್ಲಿದರು ಇದ್ದು ಬಲವಿಲ್ಲ, ಸಾಹಿತ್ಯವೆಲ್ಲರಿಗಿಲ್ಲ ಸರ್ವಜ್ಞ ||
ಜ್ಞಾನ ಸಾಗರ ಅಗಾಧವಾದದ್ದು, ಅದರ ಆಳವನ್ನು
ತಿಳಿದವರೇ ಇಲ್ಲ. ತಿಳಿದಿದ್ದವರು ಇದ್ದರೂ ಅವರ ಸಂಖ್ಯೆ
ಅತ್ಯಲ್ಪ. ಹಾಗೇ ತಿಳಿದವರಿದ್ದರೂ ಸಮಾಜಕ್ಕೆ ಅವರಿಂದ
ಬಲವಿಲ್ಲ, ಸಾಹಿತ್ಯ ವೆಂದರೆ ಹಿತವನ್ನುಂಟುಮಾಡುವ
ಜ್ಞಾನದ ಆಗರ ಇದು ಎಲ್ಲರಿಗೂ ಸಿಗುವಂತದಲ್ಲ.

-ಸಂಗಾತಿ

ಗಾಳಿಬೀಡುವಿನಲ್ಲಿ ವಿಶ್ವ ಮಹಿಳಾ ದಿನಾಚರಣೆ



9-3-2004 ರಂದು ಗಾಳಿಬೀಡು ಗ್ರಾಮದಲ್ಲಿ ವಿಶ್ವಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಮುಂದುವರಿದ ಶಿಕ್ಷಣ ಕೇಂದ್ರ ಹಾಗೂ ಸ್ಥಳೀಯ ಸ್ವಸಹಾಯ ಸಂಘ, ಸ್ತ್ರೀಶಕ್ತಿ, ರಾಜೀವ್ ಗಾಂಧಿ ಯುವಶಕ್ತಿ ಸಂಘಗಳ ಮುಂದುವರಿಕಾ ಕೇಂದ್ರ ಬಿಂದುವಾದ ಮಹಿಳಾ ಸಮಾಜದಲ್ಲಿ ಬಹಳ ವಿಜೃಂಭಣೆಯಿಂದ ನಡೆಸಲಾಯಿತು.

ಸಭಾಧ್ಯಕ್ಷತೆಯನ್ನು ಶ್ರೀ ನಿಧಿ ಸ್ವಸಹಾಯ ಸಂಘದ ಅಧ್ಯಕ್ಷಿಣಿಯಾದ ಕೋಳುಮುಡಿಯನ ರುಕ್ಮಿಣಿ ಅನಂತ್ ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ವ್ಯವಸಾಯ ಶಿಕ್ಷಣ ಅಧಿಕಾರಿ ಡಾ. ಶಂಕರಗೌಡ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಹೆಚ್. ವೈ. ಅಭಿನಂದನ್, ಚಿ. ಕೊ. ಬ್ಯಾಂಕ್ ವ್ಯವಸ್ಥಾಪಕ ನಾರಾಯಣ ಭಟ್ ಉಪಸ್ಥಿತರಿದ್ದರು.

ರುಕ್ಮಿಣಿಯವರು ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರು ಪುರುಷರಷ್ಟೆ ಸಮಾನರು ಮಹಿಳೆಯರಿಗೆ ಸರ್ಕಾರವು 33%ಆದ್ಯತೆ ನೀಡಿದ್ದರೂ ಮಹಿಳೆಯರ, ಶೋಷಣೆ, ಅತ್ಯಾಚಾರ, ವರದಕ್ಷಿಣೆ, ಅಲ್ಲದೆ ಸಂಘಗಳ ಏಳಿಗೆ ಬಗ್ಗೆ ಸ್ವಚ್ಛತೆ, ಆಚಾರ ವಿಚಾರ ಸಂಸ್ಕೃತಿ, ಪರಿಸರ, ಮಾಲಿನ್ಯ ಇವುಗಳ ಬಗ್ಗೆ ಮಾತನಾಡಿದರು. ಅಚ್ಚಪಟ್ಟೀರ ರಮೇಶರವರು ಮುಂದುವರಿಕಾ ಶಿಕ್ಷಣದ ಪ್ರಾಯೋಜಕರಾದ ಕೊಂಬಾರನ ಗಣಪತಿಯವರು ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಇದರ ಅಂಗವಾಗಿ ಮಹಿಳೆಯರಿಂದಲೇ ತಯಾರಿಸಲ್ಪಟ್ಟಿಸಿದ್ದ ಕರಕುಶಲ ವಸ್ತುಗಳು, ತಿಂಡಿ ಪ್ರದರ್ಶನ, ಹೊಲಿಗೆ ಇವುಗಳನ್ನು ದರ್ಶನ ಮಾಡಲಾಯಿತು. "ಆಧುನಿಕ ಯುಗದಲ್ಲಿ ಮಹಿಳೆಯರ ಪಾತ್ರ" ಎಂಬುದನ್ನು ಸ್ಪರ್ಧೆ ಮೂಲಕ ಏರ್ಪಡಿಸಲಾಯಿತು. ಹಾಡುಗಾರಿಕೆ, ನೃತ್ಯ ಇವುಗಳ ಸ್ಪರ್ಧೆ ಸಹ ಇತ್ತು. ಥ್ರೋಬಾಲ್, ಪಂದ್ಯಾಟ, ಮಹನೀಯರಿಗೆ ಹಗ್ಗ ಜಗ್ಗಾಟ ಪಂದ್ಯಾಟವನ್ನು ಸಹ ಏರ್ಪಡಿಸಲಾಗಿತ್ತು. ಕಾವೇರಿ ನಾಡ ಕುಣಿತ, ಕೋಲು ಕೋಲೆ ಸುಗ್ಗಿಯ ಕೋಲೆ ನೃತ್ಯವು ನೆರೆದವರ ಮನರಂಜಿಸಿತು.

ಕೊನೆಯದಾಗಿ ದುರ್ಗಾ ಸ್ವ. ಸಹಾಯ ಸಂಘ ಪ್ರತಿನಿಧಿ ಮೀನಾಕ್ಷಿ ಪ್ರಾರ್ಥಿಸಿ, ಕೆ. ಎ. ಸಂಕೇತ್ ಸ್ವಾಗತಿಸಿದರೆ ಪ್ರೇರಕ ಕೊಂಬಾರನ ಗಣಪತಿಯವರು ವಂದಿಸಿದರು.

-ಕೊಂಬಾರನ ಗಣಪತಿ

ಹತ್ತು ಕುಟುಂಬ ಹದಿನೆಂಟು ಗೋತ್ರದ ಜನರಲ್ಲಿ ರಾಜಕೀಯ ಧ್ರುವೀಕರಣವಾಗುವುದು ಸಮಾಜಕ್ಕೆ ಹಿತ.

ಪತ್ರ ವಿಭಾಗ -1

ನಮ್ಮ ಪ್ರೀತಿಯ ಕೊಡಗು ಸಂಗಾತಿ ಸಂಪಾದಕವುಕ್ಕೆ :-

ತುಂಬು ಹೃದಯದ ಧನ್ಯವಾದ ಹೇಳ್ತಾ ಒಳೋ. ಕೊಡಗು ಸಂಗಾತಿ ಬರ್‍ತಾ ಬರ್‍ತಾ ಬಾರೀ ಲಾಯ್ಕಾಗಿ ಬರ್‍ತಾ ಉಟ್ಟು. ನಮ್ಮೆಲ್ಲರ ದೇವತಾ ಮಾನವ, ಅಮರಶಿಲ್ಪಿ ಸುಳ್ಯದ ನಿರ್ಮಾಪಕ ಡಾ. ಕುರುಂಜಿ ವೆಂಕಟ್ರಮಣ ಗೌಡರ ಬಗ್ಗೆ ಸವಿವರ ಆಗಿ ಕೊಡಗು ಸಂಗಾತಿಲಿ ಎಲ್ಲವುಕ್ಕೆ ತಿಳಿಸಿದಕ್ಕೆ ಧನ್ಯವಾದನ ನಾವು ಹೇಳ್ತಾ ಒಳೋ. ನಾವು ಎಲ್ಲಾ ಅಲ್ಲೆ ಸುಳ್ಯದ ಶಾರದ ಕಾಲೇಜಿಲಿ ಓದಿದ್ದ್, ಮತ್ತೆ ಅವ್ರ ಸರ್‍ಳ ಬದ್ಕ್, ಶಿಸ್ತ್, ಜೀವನ ಕ್ರಮ, ಬಡವರ ಬಗ್ಗೆ ಕಾಳ್ಜಿ ಅವು ತುಂಬ್ ಹೃದಯದ ಪ್ರೀತಿ ವಾತ್ಸಲ್ಯ ನಾವ್ ಯಾವತ್ತ್ ಮರಿಯಕ್ಕೆ ಆದುಲ್ಲೆ. ಅವ್ ನಾವ್ಗೆ ಒಬ್ಬ ದೇವತಾ ಮಾನವರಂಗೆ ಕಾಂಬತ್ತಿದ್ದೊ. ಅವ್ರ ಬಗ್ಗೆ ಪೂರ್ಣ ಆಗಿ ತಿಳ್ಸಿದ್ದಕ್ಕೆ ಮತ್ತೆ ಅವ್ರ ತರ ದೇಶದ ಒಂದೊಂದ್ ಮೂಲೆಲಿ ಇಂತಹ ಸೌಜನ್ಯ ಮೂರ್ತಿಗ ಹುಟ್ಟಲಿತ್ತೇಳಿ ಅವ್ರ 75 ನೇ ವರ್ಷದ ಹುಟ್ಟು ಹಬ್ಬಕ್ಕೆ ನಾವ್ ಈ ಮೂಲ್ಕ ಕುಲಗುರು ವೆಂಕಟರಮಣ ದೇವ್ರುನ ಬೇಡಿಕಂಡವೆ.

ಬೇಡಿಕಂಬವು : ಮುಜಲುಗದ್ದೆ ಮನೆ ಹರಿಣ, ಗೋಪಾಲ್, ಚೇತನ್, ಬೆಂಗಳೂರು.

ಪತ್ರ ವಿಭಾಗ -2

ಮಾರ್ಚ್ ತಿಂಗಳ 'ಕೊಡಗು ಸಂಗಾತಿ'ಲಿ ಒಂದು ಹೊಸ ವಿಷಯ ಓದಿನೋಡಿ ಬಾಳ ಕುಶಿಯಾತ್. ಅದೇ ರಾಮ ಜನ್ಮಭೂಮಿ ಚಿತ್ರಗ. ನಾನಂತೂ ಇಲ್ಲಿಗೆ ಮುಟ್ಟ ಯಾವ ಪತ್ರಿಕೆ, ಸಂಚಿಕೆಗಳಲ್ಲಿ ಓದಿ ನೋಡದ ವಿಚಾರ. ಅಯೋಧ್ಯೆಲಿ ನೆಲ ಎಳ್ಳ್‌ಕನ ಸಿಕ್ಕಿದ ಪುರಾತನ ಗುರುತುಗಳ ವಿಚಾರ ತೀರಾ ಊಹಾ ಪೋಹಾ ಆಗಿರ್ದುತ ಜನರ ಮನಸ್ಸ್‌ಲಿ ಇದ್ದ ಸಂಶಯ ಕೊಡಗು ಸಂಗಾತಿ ನೋಡ್ದ ಮೇಲೆ ನಿವಾರಣೆ ಆತ್. 14 ಚಿತ್ರಗ ಮತ್ತೆ ಅದರೆಲ್ಲದರ ವಿವರಣೆಲಿ ಹೊಸ ಜ್ಞಾನ ಕೊಟ್ಟ್, ಇತಿಹಾಸದ ಮೇಲೆ ಹೊಸ ಬೆಳಕ್ ಚೆಲ್ಲಿಯೊಳರಿ. ಈ ಎಲ್ಲಾ ಚಿತ್ರಗಳ ಸಂಗ್ರಹಿಸಿ 'ಸಂಗಾತಿ ಪ್ರಕಟ ಪಡ್ಸಿದರಿಂದ ಸಂಗಾತಿನ ಮೌಲ್ಯ ಹತ್‌ಪಟ್ಟ್ ಜಾಸ್ತಿಯಾಗುಟ್ಟುತ್ತ ಹೇಳ್ಳೆ.

ಅಭಿನಂದನೆ,

ತಮ್ಮ ವಿಶ್ವಾಸಿ,
ಬಾಚರಣಿಯಂಡ ಅಪ್ಪಣ್ಣ

ಮಾನ್ಯರೇ,

ಸಂಚಿಕೆ 23-24 ರ್‌ಲಿ 'ಕೊತ್ತಿಗೆ ಗಂಟೆ ಕಟ್ಟುದು ಯಾರ್?" ಕವನ ಪೊರ್ಲಾಗಿಟ್ಟು. ಭಾಷೆ ಯಾರೊಬ್ಬರ ಸೊತ್ತು ಅಲ್ಲ. ಯಾರ್ ಬೇಕಾರೂ ಭಾಷೆನ ಕಲಿಯಕ್, ಬರೆಯಕ್. ಬಾಚರಣಿಯಂಡ ಅಪ್ಪಣ್ಣನವು ಬರ್‍ದ ಈ ಕವನ ಕನ್ನಡಲಿ ಗದ್ಯರೂಪಲಿ ನಾ ಓದಿದ ನೆನಪು. ಅದರ ಅರೆಭಾಷೆಲಿ ಸುಂದರ ರೂಪಲಿ ಪದ್ಯ ರಚಿಸಿ ಜನರ ಮುಂದೆ ಇಸಿದ ಶ್ರೀ ಅಪ್ಪಣ್ಣನವುಕೆ ಧನ್ಯವಾದಗ.

-ಬಾರಿಯಂಡ ಆರ್. ಜೋಯಪ್ಪ, ಮದೆ.

ಕೆದಂಬಾಡಿ ಕಪ್ ಕ್ರಿಕೆಟ್ ಪಂದ್ಯಾಟ ಏಪ್ರಿಲ್ 27 ರಿಂದ ಪ್ರಾರಂಭ

ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಕುಟುಂಬಗಳ ನಡುವಣ ಬಾಂಧವ್ಯ ವೃದ್ಧಿಸುವ ಸಲುವಾಗಿ ಕಳೆದ ಏಳು ವರ್ಷಗಳಿಂದ ಚೆಟ್ಟಿಮಾನಿಯ ಕೆದಂಬಾಡಿ ಕುಟುಂಬವು ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾಟಗಳನ್ನು ನಡೆಸುತ್ತಾ ಬಂದಿದ್ದು, ಈ ಬಾರಿಯೂ 8 ನೇ ವರ್ಷದ ಪಂದ್ಯಾಟವನ್ನು ಏ. 27 ರಿಂದ ಮೇ. 3 ರವರೆಗೆ ಚೆಟ್ಟಿಮಾನಿಯ ಕೆದಂಬಾಡಿ ಐನ್ ಮನೆ ಬಳಿಯಿರುವ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು 'ಕೆದಂಬಾಡಿ ಕಪ್' ಸಮಿತಿಯ ಮಾಜಿ ಅಧ್ಯಕ್ಷ ಕೆ. ಯು ಪ್ರಸನ್ನ ಕುಮಾರ್ ತಿಳಿಸಿದ್ದಾರೆ. ಇತ್ತೀಚೆಗೆ ಮಡಿಕೇರಿಯ ಪತ್ರಿಕಾಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕಳೆದ ಬಾರಿ ಈ ಪಂದ್ಯಾಟದಲ್ಲಿ ಒಟ್ಟು 70 ಗೌಡ ಕುಟುಂಬಗಳು ಭಾಗವಹಿಸಿದ್ದು, ಆತಿಥ್ಯ ವಹಿಸಿದ್ದ ಕೆದಂಬಾಡಿ ಕುಟುಂಬವೇ ಪಾರಿತೋಷಕವನ್ನು ಪಡೆದುಕೊಂಡಿತ್ತು. ಈ ಬಾರಿ 80 ರಿಂದ 85 ಕುಟುಂಬಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ವಿವರಣೆಯಿತ್ತರು.

ಕಳೆದ ವರ್ಷದಂತೆ ಈ ಬಾರಿಯೂ ಕೂಡ ಗೌಡ ಮಹಿಳಾ ಕುಟುಂಬಗಳಿಗೆ ಥ್ರೋಬಾಲ್ ಪಂದ್ಯಾಟ ಏರ್ಪಡಿಸಲಾಗಿದ್ದು, ಸುಮಾರು 50 ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದ ಅವರು ಪಂದ್ಯಾಟದಲ್ಲಿ ವಿಜೇತರಾದವರಿಗೆ ನಗದು ಹಾಗೂ ಟ್ರೋಫಿಗಳನ್ನು ವಿತರಿಸಲಾಗುವುದು ಎಂದರು.

ಕ್ರಿಕೆಟ್‌ನಲ್ಲಿ ವಿಜೇತಗೊಂಡ ತಂಡ ರೂ. 5,000 ನಗದನ್ನು ಬಹುಮಾನವಾಗಿ ಪಡೆಯಲಿದ್ದರೆ, ರನ್ನರ್ಸ್ ತಂಡಕ್ಕೆ ರೂ. 3,000 ಥ್ರೋಬಾಲ್ ವಿನ್ನರ್ಸ್ ತಂಡಕ್ಕೆ ರೂ.3,000 ಹಾಗೂ ರನ್ನರ್ಸ್ ತಂಡಕ್ಕೆ ರೂ. 2,000 ನಗದನ್ನು ಬಹುಮಾನವಾಗಿ ನೀಡಲಾಗುವದು ಎಂದು ಪ್ರಸನ್ನ ಅವರು ಮಾಹಿತಿಯಿತ್ತಿದ್ದಾರೆ.

ಆಸಕ್ತ ಗೌಡ ಕುಟುಂಬ ತಂಡಗಳು ಏ. 12 ರ ಒಳಗಾಗಿ ಮಡಿಕೇರಿಯ ಪೂಜಾ ಆರ್ಕೇಡ್‌ನಲ್ಲಿರುವ ಮಧು ಮೋಟಾರ್ಸ್ ಕಛೇರಿ ಇಲ್ಲವೇ ಚೆಟ್ಟಿಮಾನಿಯ ಕೆದಂಬಾಡಿ ಕುಟುಂಬದ ಸದಸ್ಯರಲ್ಲಿ ತಮ್ಮ ಹೆಸರನ್ನು ನೋಂದಾಯಿಸುವಂತೆ ತಿಳಿಸಿದ ಅವರು, ತಾ. 15 ರಂದು ಪಂದ್ಯದ ವೇಳಾಪಟ್ಟಿ ಪ್ರಕಟ ಗೊಳ್ಳಲಿದ್ದು, ಅಂದು ಎಲ್ಲಾ ತಂಡಗಳ ನಾಯಕರು ಸ್ಥಳದಲ್ಲಿ ಹಾಜರಿರಬೇಕು ಎಂದು ತಿಳಿಸಿದ್ದಾರೆ.

ಗೋಷ್ಠಿಯಲ್ಲಿ ಕೆದಂಬಾಡಿ ಕಪ್ ಸಮಿತಿಯ ಅಧ್ಯಕ್ಷ ಕೆ. ಎಂ. ಬೆಳ್ಯಪ್ಪ, ಕಾರ್ಯದರ್ಶಿ ಎಕೆ. ಎಸ್. ದೇವಯ್ಯ ಹಾಗೂ ಮಾಜಿ ಅಧ್ಯಕ್ಷ ಕೆ. ಬಿ. ಪೂಣಚ್ಚ ಉಪಸ್ಥಿತರಿದ್ದರು.

-ಸಂಗಾತಿ

ಪಶುಗಳಿಗೂ ಮನುಷ್ಯರಿಗೂ ಇರುವ ವ್ಯತ್ಯಾಸ - ಅಹಂ ಬಿಟ್ಟಾಗ ಮಾತ್ರ !

ಶಿಕ್ಷಣದಿಂದ ಮಾತ್ರ ಮನುಷ್ಯನ ಅಭಿವೃದ್ಧಿ : *ಪ್ರೊ. ಕುರುಂಜಿ ಗಂಗಾಧರ ಗೌಡ*

ಮುಪ್ಪೇರ್ಯದಲ್ಲಿ ಗ್ರಾಮ ಗೌಡ ಸಮಾವೇಶ

ಜಗತ್ತಿನ ಜೀವ ಸಂಕುಲವಾದ ಮನುಷ್ಯ ಶಿಕ್ಷಣ ಪಡೆದು ವ್ಯಕ್ತಿತ್ವ ಬೆಳೆಸಿಕೊಂಡಾಗ ಮಾತ್ರ ಅಭಿವೃದ್ಧಿ ಆಗುವುದಕ್ಕೆ ಸಾಧ್ಯ ಎಂದು ಶಿಕ್ಷಣ ತಜ್ಞ ಅರಂತೋಡು ನೆಹರು ಸ್ಮಾರಕ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ. ಆರ್ ಗಂಗಾಧರ್ ಅಭಿಪ್ರಾಯಪಟ್ಟರು. ಅವರು ಸುಳ್ಯ ಸಮೀಪ ಮುಪ್ಪೇರ್ಯದಲ್ಲಿ ಫೆ. 15 ರಂದು ನಡೆದ ಗ್ರಾಮ ಗೌಡ ಸಮಾವೇಶದ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಿದ್ದರು.

ಸಭೆಯಲ್ಲಿ ಆಶೀರ್ವಚನ ನೀಡಿದ ಮಂಗಳೂರಿನ ಆದಿಚುಂಚನಗಿರಿ ಶಾಖಾ ಮಠದ ಸ್ವಾಮೀಜಿ ಶ್ರೀ ಧರ್ಮಪಾಲ ನಾಥ ಸ್ವಾಮೀಜಿ ವ್ಯಕ್ತಿಗಳಲ್ಲಿ ಪರಸ್ಪರ ಸ್ನೇಹ ಪ್ರೀತಿ ಭಾತೃತ್ವ ದಿಂದ ಮಾತ್ರ ಒಬ್ಬರು ಇನ್ನೊಬ್ಬರನ್ನು ಗೆಲ್ಲಬಹುದು, ಹೊರತು ಯುದ್ಧದಿಂದ ಅಲ್ಲ ಎಂದರು. ತಮ್ಮ ಮಕ್ಕಳಿಗೆ ವಿಧ್ಯಾಭ್ಯಾಸ ನೀಡಿ ಪ್ರೋತ್ಸಾಹಿಸಿ ಅವರ ಜೀವನದಲ್ಲಿ ಯಶಸ್ಸು ತೋರಿಸಲಿ ಎಂದು ಆಶೀರ್ವಚನ ನೀಡಿದರು.

ಗ್ರಾಮ ಗೌಡ ಸಮಾವೇಶವನ್ನು ದ. ಕ. ಜಿಲ್ಲಾ ಹಾಗೂ ಕೊಡಗು ಗೌಡ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ಎಂ. ಪಿ. ಉಮೇಶ್ ಉದ್ಘಾಟಿಸಿ ಶುಭ ಹಾರೈಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸುಳ್ಯ ಗೌಡರ ಯುವ ಸೇವಾ ಸಂಘದ ಅಧ್ಯಕ್ಷ ಕೆ. ಸಿ. ಸದಾನಂದ ಗೌಡ ವಹಿಸಿದ್ದರು. ಅತಿಥಿಗಳಾಗಿ ಸುಳ್ಯ ಗೌಡರ ಯುವ ಸೇವಾ ಸಂಘದ ಸ್ಥಾಪಕಾಧ್ಯಕ್ಷ ನಿತ್ಯಾನಂದ ಮುಂಡೋಡಿ, ಬಾಳಿಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸರಸ್ವತಿ ಮರಂಗಳ, ಜಾಕೆ ಮಾಧವ ಗೌಡ ಮಾತನಾಡಿದರು. ವೇದಿಕೆಯಲ್ಲಿ ಕುಂಟಿಕಾನ ಲಕ್ಷ್ಮಣ ಗೌಡ, ವೆಂಕಟ್ರಮಣ ಸೊಸೈಟಿಯ ಅಧ್ಯಕ್ಷ ಪಿ. ಸಿ. ಜಯರಾಮ, ಮಹಾತ್ಮ ಗಾಂಧಿ ಮಲ್ನಾಡ್ ಪ್ರೌಢಶಾಲೆ ಕೊಡಿಯಾಲ ಬೈಲ್ ಸಂಚಾಲಕ ಚಂದ್ರಾ ಕೋಲ್ಚಾರ್, ಗೌಡರ ಯುವ ಸೇವಾ ಸಂಘ ಸುಳ್ಯ ಇದರ ಉಪಾಧ್ಯಕ್ಷ ಲಕ್ಷ್ಮೀನಾರಾಯಣ ನಡ್ಕ, ನಿರ್ದೇಶಕ ಕೂಸಪ್ಪ ಗೌಡ ಮುಗುಪ್ಪು, ಪ್ರಧಾನ ಕಾರ್ಯದರ್ಶಿ ಪಿ. ಎಸ್. ಗಂಗಾಧರ್, ಗ್ರಾಮ ಹಿರಿಯ ಗೌಡರಾದ ವೆಂಕಪ್ಪ ಗೌಡರ ಕಾಯರ ಉಪಸ್ಥಿತರಿದ್ದರು. ಕೆ. ಎಸ್. ಸುಮ ಪ್ರಾರ್ಥನೆಗೈದರು. ತಾಲ್ಲೂಕು ಸಂಘ ಪದಾಧಿಕಾರಿಗಳಾದ ಕೆ. ಸಿ. ನಾರಾಯಣ ಗೌಡ. ಎ. ವಿ. ತೀರ್ಥರಾಮ, ದಿನೇಶ್ ಮಡಪ್ಪಾಡಿ, ಕೆ. ವಿ. ಹೇಮನಾಥ್, ಎಸ್. ಆರ್. ಸೂರಯ್ಯ ಭಾಗವಹಿಸಿದ್ದರು.

ಮುಪ್ಪೇರ್ಯ ಗ್ರಾಮ ಗೌಡ ಸಮಿತಿ ಅಧ್ಯಕ್ಷ ಕೆ.ಪಿ. ಶೇಖರ್ ಸ್ವಾಗತಿಸಿ ಸಂಚಾಲಕರಾದ ಗಂಗಾಧರ್ ಗೌಡ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೂಸಪ್ಪ ಗೌಡ ಮುಪ್ಪೇರಿಯ ವಂದಿಸಿದರು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

-ಸಂಗಾತಿ

ಶುಭಾಶಯಗಳು

ಈ ಹಿಂದೆ ಆಚರಿಸಿದ 2003 ನೇ ವರ್ಷದ ವಾರ್ಷಿಕೋತ್ಸವ ಎಷ್ಟು ಬೇಗನೆ ಕಾಲ ಉರುಳುತ್ತೋ ಎಂದು ಆಶ್ಚರ್ಯ. ಬಂದೇ ಬಿಟ್ಟಿತ್ತು 2004 ನೇ ಇಸವಿಯ ಹೊಸ ವರ್ಷದ ದಿನಗಳು. ಗತಿಸಿ ಹೋದ ಕೆಲವೊಂದು ಘಟನೆಗಳು ಮರೆವ ಮುನ್ನ ಬಂದೇ ಬಿಟ್ಟಿತ್ತು. ಯುಗಗಳು 2004 ರ ಹೊಸ ವರ್ಷ

ನಮ್ಮ ಮುಕ್ಕೋಟಿ ಜನರಿಗೆ ಮತ್ತು ನಮ್ಮ ಗೌಡ ಜನಾಂಗದವರಿಗೂ, ಗುರು ಹಿರಿಯರಿಂದ ನಾನು ಬೇಡುವ ಆಶೀರ್ವಾದ, ಮತ್ತುಬಂದು, ಬಳಗ, ಗೆಳೆಯ, ಗೆಳತಿಯರಿಂದ ಸ್ನೇಹ ಬಯಸುವ ಮತ್ತು ಕೊಡಗು ಸಂಗಾತಿಯ ಲೇಖಕ ಲೇಖಕಿಯರು ಹಾಗೂ ಗೌರವ ಸಂಪಾದಕ ಬಳಗದವರಿಗೆ ಸಂಪಾದಕೀಯರಿಗೆ ಮತ್ತು ಕಾರ್ಯಕರ್ತರಿಗೆ ಕೊಡಗು ಸಂಗಾತಿಯೂ ಎಲ್ಲಾ ರೀತಿಯಲ್ಲಿ ಉಜ್ವಲವಾಗಿ ಬೆಳಗಿ ಜನರ ಪ್ರೀತಿಗೆ ಪಾತ್ರರಾಗಲೆಂದು 8 ನೇ ವರ್ಷಕ್ಕೆ ಪಾದವಿರಿಸಿದ ಸಂಗಾತಿಗೆ ಶುಭ ಹಾರೈಸುವ.

ನಿಮ್ಮ ಹಿತೈಷಿ
ಅಜಡ್ಕ ರಾಣಿ ಬಾಲಕೃಷ್ಣ ಕುಶಾಲನಗರ

ಪ್ರಭಾವ

ಸಾಲ ಕೊಡುವವನು ಬಂದಾಗ
ಸಾಯುವವನು ಎದ್ದು ನಿಂತ।
ಸಾಲ ವಸೂಲಿ ಮಾಡುವವನು ಬಂದಾಗ
ಬದುಕಿದ್ದವನು ಸತ್ತ।
ಎಲ್ಲೂ ಸಿಗದಿದ್ದಾಗ ಸಾಲ
ಒಡವೆ ಪಾತ್ರೆ ಅಡವಿಟ್ಟ।
ಅದೂ ಬರಿದಾದಾಗ
ಕಳ್ಳನಾಗಿ ಕೊನೆಗೆ ವೀರಪ್ಪನಾಗುವ।

ಜೀವನ

ಜೀವನವೆಂಬುವುದು ಸಾಗರದಂತೆ
ಕಷ್ಟಗಳು ಅಲೆಗಳಂತೆ
ಸುಖಗಳು ಉಬ್ಬರವಿಳಿತದಂತೆ
ನಾವು, ನೀವು ಅದರೊಳಗಿರುವ ಜೀವಿಗಳಂತೆ

-ಶುಭ, ಅರಕೆರೆ

ಚಂದ್ರನಲ್ಲಿ ಒಬ್ಬ ಮಾನವ ಇದ್ದಾನೆಂದು ಊಹಿಸಿಕೊಂಡು ದಕ್ಷಿಣಾರ್ಧ ಗೋಳದಿಂದ ನೋಡಿದರೆ ಆತ ತಲೆಕೆಳಗಾಗಿ ಕಾಣಿಸುತ್ತಾನೆ.

ಹೆಮ್ಮೆಯ ಸಂಗಾತಿಗೆ ಶುಭಾಶಯಗಳು

'ಕೊಡಗು ಸಂಗಾತಿ', ಪಟ್ಟಡ ಪ್ರಭಾಕರ, ಶೀಲಾಮಣಿ ದಂಪತಿಗಳ ಕನಸಿನ ಕೂಸು. ಗೌಡ ಜನಾಂಗದ ಹೆಮ್ಮೆಯ ಕಣ್ಮಣಿ. ಇದೀಗ ಏಳು ವರ್ಷಗಳನ್ನು ತುಂಬಿಕೊಂಡು ಎಂಟನೇ ವರ್ಷಕ್ಕೆ ಕಾಲಿಡುತ್ತಿದ್ದಾಳೆ. ವರುಷದಿಂದ ವರುಷಕ್ಕೆ ಹರುಷದಿಂದ, ಸುಖ, ಸಂಪತ್ತು ಆಯುರಾರೋಗ್ಯಗಳನ್ನು ತುಂಬಿಕೊಂಡು ಶತ ಶತಮಾನದವರೆಗೆ ದಿಗ್‌ದಿಗಂತದ ತನಕ ಬೆಳಗಲಿ ಎಂದು, ಅವಳಿಗೆ ಶ್ರೀಮತಿ ಬಿಟ್ಟೀರ ಚೊಂದಮ್ಮ ಶಂಭು ದಂಪತಿಗಳೂ ತಮ್ಮ ಕುಟುಂಬದವರೂ ತುಂಬು ಮನಸ್ಸಿನಿಂದ ಹಾರೈಸುತ್ತಾ ಶುಭಾಶಯಗಳನ್ನು ಕೋರುತ್ತಿದ್ದೇವೆ.

ಈ ಶುಭ ಸಂದರ್ಭದಲ್ಲಿ ಶೀಲಾಮಣಿ ದಂಪತಿಗಳ ಕೆಚ್ಚೆದೆಯ ಸಾಹಸಕ್ಕೆ ಅಭಿನಂದನೆಗಳನ್ನು ಅರ್ಪಿಸುತ್ತಾ ಪತ್ರಿಕೆಯ ಅಭಿವೃದ್ಧಿಗಾಗಿ ಎರಡು ಹಿತನುಡಿಗಳನ್ನು ಹೇಳಲು ಇಚ್ಛಿಸುತ್ತೇನೆ.

ಪತ್ರಿಕಾರಂಗದಲ್ಲಿ ತಾವು ಈ ಏಳು ವರ್ಷಗಳು ಅವಿರತವಾಗಿ ಏಕಾಂಗಿಯಾಗಿ ಹಲವಾರು ಏಳು ಬೀಳುಗಳೊಂದಿಗೆ ಸಿಹಿ ಕಹಿಯನ್ನು ಉಂಡಿದ್ದೀರಿ. ನಿಮ್ಮ ಅನುಭವದ ಮುಂದೆ ನಾನು ಕೇವಲ ತೃಣ, ಆದರೂ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತಿದ್ದೇನೆ. 1. ಈಗಿನ ಕಾಲದ ಜನರು ತಳುಕು ಬಳುಕಿಗೆ ಮನಸೋಲುವಂತಹವರು. ಆದ್ದರಿಂಕ ಪತ್ರಿಕೆಯ ಮುಖ ಪುಟ ಅರ್ಥಗರ್ಭಿತವೂ, ವರ್ಣರಂಜಿತವೂ ಆಗಿದ್ದರೆ ಒಳ್ಳೆಯದು. 2. ಸ್ಥಿರ ಶಿರ್ಷಿಕೆಗಳು ಹೆಚ್ಚಬೇಕು. 3. ಪತ್ರಿಕೆಯ ಪುಟಗಳು ಕನಿಷ್ಠ ಪಕ್ಷ 50 ಪುಟಗಳಿಗಾದರೂ ಹೆಚ್ಚಬೇಕು. 4. ಒಂದು ಸಣ್ಣ ಕತೆ, ಒಂದು ಧಾರಾವಾಹಿ ಕಾದಂಬರಿ ಕಡ್ಡಾಯವಾಗಿ ಬರಬೇಕು. ಹಲವು ಉಪಯುಕ್ತ ಲೇಖನಗಳೂ, ಪದಬಂಧಗಳೂ ಹೀಗೆ ಹಲವು ಜನರ ಅಭಿರುಚಿಗಳು ಹಲವು ರೀತಿ ಅವುಗಳನ್ನು ಪೂರೈಸುವ ಒಂದು ಪರಿಪೂರ್ಣ ಪತ್ರಿಕೆಯಾಗಿ ಕೊಡಗು ಸಂಗಾತಿ ಹೊರಬರಬೇಕು. ಹೇಳುವುದು ಸುಲಭ, ಮಾಡುವುದು ಕಷ್ಟವೆಂದು ಬಲ್ಲೆ, ಆದರೆ ಪ್ರಯತ್ನ ಪಟ್ಟರೆ ಅಸಾಧ್ಯವಾದದ್ದು ಏನೂ ಇಲ್ಲ. ಈ ನಿಟ್ಟಿನಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ, ದಿನದಲ್ಲಿ 2 ಗಂಟೆಗಳ ಕಾಲ ಮುಡಿಪಾಗಿ ಇಡಲು ಸಿದ್ಧರಿರುವ ನಿವೃತ್ತ ಹಿರಿಯರನ್ನು, ಸ್ವಯಂ ಸೇವಾ ಕರ್ತರನ್ನಾಗಿ ಸೇವೆ ಸಲ್ಲಿಸಲು ಆಹ್ವಾನಿಸಿರಿ. ಹತ್ತರಲ್ಲಿ ಒಬ್ಬರಾದರೂ ಖಂಡಿತಾ ಮುಂದೆ ಬಂದು ಸಹಕರಿಸಬಹುದು. ಇದರಿಂದ ನಿಮ್ಮ ಹೆಗಲಿನ ಭಾರ ಸ್ವಲ್ಪ ಕಡಿಮೆಯಾಗಬಹುದು.

ಇನ್ನು ಕೊಡಗು ಸಂಗಾತಿ ಅಭಿಮಾನಿ ಓದುಗರಲ್ಲಿ ವಿನಂತಿಗಳು. ನಮ್ಮ ನಿಮ್ಮೆಲ್ಲರ ಸಹಕಾರದಿಂದ ಇಂದು ಕೊಡಗು ಸಂಗಾತಿ ಗೌಡ ಜನಾಂಗದ ಹೆಮ್ಮೆಯ ಪತ್ರಿಕೆಯಾಗಿ ಮುಂದುವರೆಯುತ್ತಿದೆ. ಆದರೆ ಹೇಗೆ? ಎಂದುತಿಳಿಯಲು ಪ್ರಯತ್ನ ಮಾಡಿದ್ದೀರಾ? ಪತ್ರಿಕೆ ನಡೆಯಲು ಮುಖ್ಯವಾಗಿ ಪೇಪರ್, ಪ್ರಿಂಟಿಂಗ್ ಪ್ರೆಸ್ಸ್, ಇಂಕ್, ಲೇಖನ, ಕತೆ, ಕವನ, ಮುಂತಾದ ಬರವಣಿಗೆಗಳೂ ಜಾಹೀರಾತುಗಳು ಇವುಗಳು ಕಚ್ಚಾ ಸಾಮಾಗ್ರಿಗಳು ಈ ಕನಿಷ್ಟ ಸಾಮಾಗ್ರಿಗಳೊಂದಿಗೆ, ದೇಶದಾದ್ಯಂತ ಹರಡಿರುವ ಓದುಗ ವೃಂದದವರಿಗೆ ಪತ್ರಿಕೆಯನ್ನು ಕಳುಹಿಸಲು ತಗಲುವ ಖರ್ಚು ವೆಚ್ಚಗಳೂ ಇವನ್ನೆಲ್ಲಾ ಸರಿಯಾಗಿ ಪೂರೈಸಬೇಕಾದರೆ ನಾವು ಅಂದರೆ ಓದುಗರು ನಿಯಮಿತವಾಗಿ ಪತ್ರಿಕೆಯ ನಿಗದಿಸಲ್ಪಟ್ಟ ಬಾಬ್ತನ್ನು ಕೊಟ್ಟು (ಸರಿಯಾದ ಸಮಯಕ್ಕೆ) ಪುಸ್ತಕ ಸರಿಯಾದ ರೀತಿಯಲ್ಲಿ ನಡೆಸಲು ಸಹಕರಿಸಬೇಕು.

ಕಳ್ಳ ಓದುಗರಾಗಬೇಡಿ, ಪಕ್ಕದ ಮನೆಯ ಅಥವಾ ನೆರೆಮನೆಯ ಪುಸ್ತಕಕ್ಕೆ ಹೊಂಚುಹಾಕಿ ಎರವಲು ಪಡೆದು ಅವರಿಗಿಂತ ಮುಂಚೆ ಓದಿ ಕೈ ಕೊಡವಿಕೊಳ್ಳಬೇಡಿ. ಇಂತಹ ನಾಚಿಕೆಗೇಡಿನ ಓದುಗರು ನಮ್ಮಲ್ಲಿ ಹಲವರು ಇದ್ದಾರೆ. ಮದುವೆಯಾದ ಮರುಕ್ಷಣವೇ ಬೇರೆ ಹೋಗಲು ಹವಣಿಸುವ ನಮ್ಮ ಜನಾಂಗದವರು, ಇಂತಹ ಪುಸ್ತಕ ತರಿಸುವ ಕಾರ್ಯದಲ್ಲಿ ಮಾತ್ರ ಹಿಂದೇಟುಹಾಕುತ್ತಾರೆ. ಕೇವಲ 150 ರೂ. ಕೊಟ್ಟು ಪುಸ್ತಕ ತರಿಸಲಾರದ ಬಡತನ ಇಂದು ಅರೆಭಾಷಿಗರಲ್ಲಿ ಇಲ್ಲವೆಂಬುದು ಸತ್ಯ.

ಕೊಡಗು ಸಂಗಾತಿ ತರಿಸಿದರೆ ನಮ್ಮ ಮನೆಲಿ ಯಾರೂ ಓದವೂ ಇಲ್ಲೆ ಅಕ್ಕ, ಯಾರಿಗೂ ಕನ್ನಡ ಬಾದುಲೆ ಅಕ್ಕ, ಇದು ಹಲವರ ಅಹಂ. ಎಂತಹ ಅಪಮಾನ ಇವರು ಕನ್ನಡಾಂಬೆಗೆ ಮಾಡುತ್ತಿದ್ದಾರೆ. ನೋಡಿ, ಪತ್ರಿಕೆಯಲ್ಲಿ ಏನಿದೆ ಎಂದು ಓದುವುದು ಇದು ಹಲವರ ಅಂಬೋಣ. ಈ ಹಲವರೇ ಕೇಳಿ ಪತ್ರಿಕೆಯಲ್ಲಿ ಏನಿಲ್ಲ? ಇಂದು ಜಗತ್ತಿನ ಮೂಲೆ ಮೂಲೆಗೂ ಗೌಡ ಜನಾಂಗದ ಮನೆ ಮನೆಯ ವಿಶೇಷ ಸುದ್ದಿಗಳು ತಲುಪುತ್ತಿರುವುದು, ಗೌಡ ಜನಾಂಗದ ಹೆಮ್ಮೆಯ ಏಕೈಕ ಪತ್ರಿಕೆಯಾದ ಕೊಡಗು ಸಂಗಾತಿಯಿಂದ ಎಂಬುದನ್ನು ಮರೆಯಬೇಡಿ. ಅಂತಹ ಸಂಗಾತಿಗೆ ನೀವು ಸಲ್ಲಿಸುತ್ತಿರುವುದಾದರೂ ಏನು? ಹೊನ್ನ ಕಿರೀಟವೆ? ಇಲ್ಲ ಕೇವಲ 150 ರೂಪಾಯಿ ವರ್ಷಕ್ಕೆ ಅಷ್ಟೆ. ಈ ಕನಿಷ್ಟ ಬೆಲೆಯನ್ನು ತೆತ್ತಾದರೂ ಈ ಸಂಗಾತಿಯನ್ನು ನಿಮ್ಮವಳನ್ನಾಗಿಸಿಕೊಳ್ಳಿ. ದುಡ್ಡು ಕೊಟ್ಟು ತರಿಸಿದ ಪತ್ರಿಕೆಯನ್ನು ಗಂಡುಗಲಿಗಳಂತೆ ಎದೆ ತಟ್ಟಿ ಓದಿ. ಯಾರಿಗೆ ಕನ್ನಡ ಬರುವುದಿಲ್ಲವೋ ಅವರಿಗೆ ಓದಿ ತಿಳಿಸಿ. ಓದುವ ಅಭ್ಯಾಸ ಮಾಡಿಸಿ. ಓದುವ ಹವ್ಯಾಸ ಹಲವಾರು ದುಃಶ್ಚಟಗಳಿಂದ ಮಾನವನನ್ನು ಪಾರು ಮಾಡುತ್ತದೆ. ಕೊಡಗು ಸಂಗಾತಿ ಬೇರೆ ಪತ್ರಿಕೆಗಳಿಗಿಂತ ಕಳಪೆಯಲ್ಲ. ದೊಡ್ಡಸ್ತಿಕೆ ನಾವ್ಗೇ ಬೇಡ. ಚಿರಾಯುವಾಗಲಿ."ಬರುವಾಗ ನಾವೇನು ಈ ಜಗತ್ತಿಗೆ ತಂದಿಲ್ಲ, ಹೋಗುವಾಗಲೂ ಏನನ್ನೂ ಕೊಂಡು ಹೋಗುವುದಿಲ್ಲ"

ಇತಿ ನಿಮ್ಮ ನೆಚ್ಚಿನ ಸಂಗಾತಿ ಅಭಿಮಾನಿ

-ಬಿಟ್ಟೀರ ಚೊಂದಮ್ಮ, ಬೆಂಗಳೂರು

ವಿ. ಸೂ: ನಿಮ್ಮ ಅನಿಸಿಕೆಗೆ ಸ್ವಾಗತಾರ್ಹ. ಯಾವುದಕ್ಕೂ ಚಂದಾದಾರರು ಕಾಲ ಕಾಲಕ್ಕೆ ನಿಗದಿತ ವೇಳೆಗೆ ತಮ್ಮ ಚಂದಾ ಪಾವತಿಸಿದರೆ ಸಂಗಾತಿ ಖಂಡಿತ ನಿಮ್ಮೆಲ್ಲರ ಸೇವೆಗೆ ಸದಾ ಸಿದ್ಧ.
ವಂದನೆಗಳು. - ಸಂಪಾದಕಿ.

ಓರ್ವ ವ್ಯಕ್ತಿ ಉತ್ತಮ ಕೆಲಸಗಳನ್ನು ಸಾಧಿಸಲು ಗುರಿ, ಹಠ, ಶ್ರದ್ಧೆ, ಶ್ರಮ, ಸಮಯ, ಪ್ರಜ್ಞೆ, ತನು, ಮನ, ಧನ ಬೇಕು.

'ಕೊಡಗು ಸಂಗಾತಿ' ಸಂಗ್ರಹ ಯೋಗ್ಯ ಕೃತಿ ಏಳು ವರ್ಷದ ಪೂರೈಕೆಯಲ್ಲಿ ಅನಿಸಿಕೆಗಳು

ನೀರಿಗೆ ಯಾರು ಬೇಕಾದರೂ ಕಲ್ಲು ಎಸೆಯಬಹುದು. ಆಗ ಅಲೆ ಉಂಟಾಗುತ್ತದೆ. ಆದರೆ ಆ ಅಲೆಯನ್ನು ಎಸೆದವನಿಂದ ನಿಲ್ಲಿಸಲು Do; KAψ? ಅವನಿಂದಲೇ ಅಲ್ಲ, ಯಾವ ಕಂಪ್ಯೂಟರ್ ಕಂಟ್ರೋಲರ್‌ಗೂ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ! ಅದೇ ಪ್ರಕೃತಿಯ 'ಗುಟ್ಟು'. ಹಾಗೆಯೆ ಬರಹಗಾರನೂ ಕೂಡ! ಬರಹಗಾರನ ಚಿಂತನೆಯನ್ನು ಅಥವಾ ಬರವಣಿಗೆಯನ್ನು ಯಾವನಿಂದಲೂ ನಿಲ್ಲಿಸಲು ಸಾಧ್ಯವಿಲ್ಲ. ಅಭಿಪ್ರಾಯ ಸ್ವಾತಂತ್ರ್ಯ ಪ್ರತಿಯೊಬ್ಬನ ಹಕ್ಕು. ಆದರೆ ಅಭಿಪ್ರಾಯ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ದೃಷ್ಟಿಯಂತೆ ಸೃಷ್ಟಿ, ಸೃಷ್ಟಿಯಂತೆ ದೃಷ್ಟಿಯಲ್ಲ. ಮೋಡವನ್ನು ನಾವು ನಮ್ಮದೇ ಕಲ್ಪನೆಯಿಂದ ನೋಡಿದರೆ ಅದು ಅದೇ ಆಕಾರವನ್ನು ತಾಳುತ್ತದೆ. ಇನ್ನೊಬ್ಬನಿಗೆ ಅದರ ವರ್ಣನೆ ಮಾಡಿ ಹೇಳುವುದು ಸಾಧ್ಯವೆ? ಹಾಗೆ ಒಂದು ಪತ್ರಿಕೆಯಿರಬಹುದು, ಒಂದು ಪುಸ್ತಕ ಇರಬಹುದು. ಅದನ್ನು ಅಂತರ್‌ದೃಷ್ಟಿಯಿಂದ ನೋಡಿದರೆ ಮಾತ್ರ ಅದರ ಅಂತರ್ ಸೌಂದರ್ಯದ ಲಾಭ ಸಿಗುತ್ತದೆ ಎಂಬ ವಿಚಾರ ಮಾನ್ಯ ಓದುಗರಲ್ಲಿರಬೇಕು.

ಖಾಲಿ ಪಾತ್ರೆ ಹೆಚ್ಚು ಸದ್ದು ಮಾಡುತ್ತದೆ. ಹಾಗೆ ತಿಳುವಳಿಕೆ ಇಲ್ಲದವರು ಕೊಂಕು ಮಾತಾಡುವುದೇ ಹೆಚ್ಚು !! ಅಂತಹವರ ಬಗ್ಗೆ ತಿರಸ್ಕಾರ ಬೇಡ. ಕನಿಕರವಿರಲಿ. ಇಂದಲ್ಲ, ನಾಳೆ ಸರಿಯಾದಾರು.

ನೂರೆಂಟು ಏಳುಬೀಳುಗಳನ್ನು ಕಂಡು, ನಿಲ್ಲದೆ ಮುನ್ನಡೆದು ಎಂಟನೇ ವರ್ಷದ ಬೇವು ಬೆಲ್ಲವನ್ನು ಸವಿಯುತ್ತಿರುವ 'ಕೊಡಗು ಸಂಗಾತಿ' ಗೆ ಯುಗಾದಿಯ ಶುಭಾಶಯಗಳು.

ಸಾಮಾನ್ಯವಾಗಿ ಹಳೆಯ ಪತ್ರಿಕೆಗಳನ್ನು ತೂಕಕ್ಕೆ ಹಾಕಿ ಕಾಸನ್ನು ಕಿಸೆಗೆ ಹಾಕುವುದುಂಟು. ಆದರೆ 'ಕೊಡಗು ಸಂಗಾತಿ'ಯನ್ನು ಹಾಗೆ ತೂಕಕ್ಕೆ ಹಾಕುವಂತಿಲ್ಲ. ಅದು 'ಸಂಗ್ರಹ ಯೋಗ್ಯ' ಕೃತಿ ಎಂಬುದನ್ನು ಮರೆಯುವಂತಿಲ್ಲ. ಯಾವುದಾದರೂ ಮಾಹಿತಿ ಬೇಕೆಂದಲ್ಲಿ ಈ ಪುಸ್ತಕವನ್ನು ತಿರುವಿ ಹಾಕಬೇಕಾಗುತ್ತದೆ. ಹಾಗೆಂದು ಇದೇ ಪತ್ರಿಕೆ ಪೂರ್ತಿ ಮಾಹಿತಿಯನ್ನು ಕೊಡುತ್ತದೆಯೆಂದಲ್ಲ. ತನ್ನ ಇತಿಮಿತಿಯಲ್ಲಿ ಮಾಹಿತಿಯನ್ನು ನೀಡುತ್ತಿದೆ. ಈ ನಿಟ್ಟಿನಲ್ಲಿ ಈ ಪತ್ರಿಕೆ ಇನ್ನೂ ಸಾಕಷ್ಟು ಕೆಲಸ ಮಾಡಬೇಕಿದೆ. ಹಾಗಾಗಿ ಸಾಕಷ್ಟು ಸಹಾಯವನ್ನು ಮಾನ್ಯ ಸಾಹಿತ್ಯಾಸಕ್ತರಿಂದ ಪತ್ರಿಕೆ ನಿರೀಕ್ಷಿಸುತ್ತಿದೆ.

ಕೊಡಗು ಸಂಗಾತಿಯ ಮೂಲಕ ಹಲವಷ್ಟು ಮಂದಿಗೆ ಸಾಕಷ್ಟು ಪ್ರಚಾರ ದೊರಕಿದೆ. ಬರಹಗಾರರಿಗೆ ವೇದಿಕೆ ಒದಗಿಸಿದೆ. ಅರೆಭಾಷೆ ಮತ್ತು ಸಂಸ್ಕೃತಿಗೆ ಒತ್ತು ಕೊಟ್ಟಿದೆ. ಇನ್ನೂ ಸಾಕಷ್ಟು ಬರಹಗಾರರು ಇದ್ದಾರೆ. ಆದರೆ ಅವರು ಕಾರ್ಯಪ್ರವೃತ್ತರಾಗಿಲ್ಲ. 'ತುಕ್ಕು ಹಿಡಿದು ಮೂಲೆ ಸೇರಬೇಡ, ಸವೆದು ಹಾಳಾಗು ಎಂಬ ಹಿರಿಯರ ಮಾತು ಎಷ್ಟೊಂದು ಅರ್ಥಪೂರ್ಣ ಅಲ್ಲವೆ ?

ಜಾಹೀರಾತಿಲ್ಲದೆ ಎಂಟನೇ ವರ್ಷಕ್ಕೆ ಈ ಪತ್ರಿಕೆ ಕಾಲಿಟ್ಟಿದೆ ಎಂದರೆ ಇದರ ಹಿಂದಿನ ಸಾಹಸವನ್ನು ಮೆಚ್ಚಲೇಬೇಕು. ವೈಯಕ್ತಿಕನಿಂದನೆ, ದೋಷಾರೋಪಣೆಗಾಗಿ ಈ ಪತ್ರಿಕೆ ಇರುವುದಲ್ಲ. ಪ್ರತಿಭೆಯ ವಿಕಾಸಕ್ಕೆ, ಸಂಸ್ಕೃತಿ, ಆಚಾರ ವಿಚಾರಗಳನ್ನು ತಿಳಿಹೇಳುವ ಕೈ ತಾಂಗವೇ ಈ ಪತ್ರಿಕೆ.

ಕೊಡಗು ಸಂಗಾತಿ ಪತ್ರಿಕಾ ಬಳಗ ಹಾಗೂ ಲೇಖಕರು ಮತ್ತು ಸಮಸ್ತ ಮಾನ್ಯ ಓದುಗರೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.

-ಬಾರಿಯಂಡ ಆರ್. ಜೋಯಪ್ಪ, ಮಡೆ.

"ಕೊಡಗು ಸಂಗಾತಿ" ನಮ್ಮ ಅನಿಸಿಕೆಗಳು

ಕೊಡಗು ಸಂಗಾತಿ ತನ್ನ ಏಳು ವರ್ಷಗಳ ಪ್ರಕಟಣೆ ಸಾಂಗವಾಗಿ ಮುಗಿಸಿ ತನ್ನ ಎಂಟನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವುದು ಅತೀ ಸಂತೋಷ ತಂದಿರುವುದು. ಹಾಗೆ ನಮ್ಮ ಹೃತ್ಪೂರ್ವ ಶುಭಾಶಯಗಳು. ಪತ್ರಿಕೆಯ ಎಲ್ಲಾ ಏಳು ವರ್ಷಗಳ ಮುದ್ರಣಗಳನ್ನು ಪುಟ ಬಿಡದೆ ಓದಿಕೊಂಡು ಬಂದಿರುವ ನಾವು ದಂಪತಿಗಳಿಗೆ ನಮ್ಮ ಅನಿಸಿಕೆಗಳನ್ನು ಹೇಳಲು ಬಯಸುತ್ತೇವೆ.

ಈ ಪತ್ರಿಕೆಯಲ್ಲಿ ಪ್ರಕಟಗೊಂಡ ವಿಷಯಗಳು ಚಿಕ್ಕದಾಗಿದ್ದು ಚೊಕ್ಕವಾಗಿ ಅರ್ಥಪೂರ್ಣವಾಗಿ ಮೂಡಿಬರುತ್ತಿರುವುದು. ಉತ್ತಮ ದರ್ಜೆಯ ಕಾಗದ ಉಪಯೋಗದಲ್ಲಿ ಇಲ್ಲದಿದ್ದರೂ ಮುದ್ರಣ ದೋಷರಹಿತವಾಗಿರುವುದಲ್ಲದೆ ಓದಲು ಸ್ಪಷ್ಟವಾಗಿರುವುದು.

ಯಾವುದೇ ಒಂದು ಪತ್ರಿಕೆ ತನ್ನ ವೈಶಿಷ್ಟ್ಯತೆಯನ್ನು ತೋರುವುದು ತನ್ನ ಸಂಪಾದಕೀಯದಲ್ಲಿ ಮಾತ್ರ. ಈ ಪತ್ರಿಕೆಯು ಬರೆಯುತ್ತಿರುವ ಸಂಪಾದಕೀಯ ಚಿಕ್ಕದಾದರೂ ಸಮಯಕ್ಕೆ ಸರಿಯಾದ ವಿಷಯಗಳನ್ನು ಆರಿಸಿ ಪರಿಪೂರ್ಣ ಅರ್ಥ ಕೊಡುವಂತೆ ಪ್ರಕಟಿಸುತ್ತಿರುವುದು. ಒಳ ಪುಟಗಳಲ್ಲಿ ವ್ಯಕ್ತಿ ಪರಿಚಯ ಶುಭ ವಿವಾಹ, ಜನನ-ಮರಣ, ಪ್ರತಿಭಾವಂತ ಗಣ್ಯರ ಜೀವನ ಚರಿತ್ರೆ, ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಮತ್ತು ಕ್ರೀಡಾ ಪಟುಗಳ ಭಾವ ಚಿತ್ರ ಸಮೇತ ಪ್ರಕಟಣೆ ಆಗುತ್ತಿರುವುದು ಅಲ್ಲದೆ ವಿದ್ಯಾವಂತ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗಾವಕಾಶದ ವಿಷಯಗಳು, ಊರು ನಾಡಿನ ಪರಿಚಯ, ಆಗಿಂದಾಗೆ ಪರಿಣಿತ ವೈದ್ಯರಿಂದ ಆರೋಗ್ಯ ಕಾಪಾಡಿಕೊಳ್ಳಲು ವಹಿಸಬೇಕಾದ ಹಿತನುಡಿಗಳು ಚೆನ್ನಾಗಿ ಮೂಡಿಬರುತ್ತಿರುವುದು ಜನೋಪ ಕಾರಿಗಳಾಗಿವೆ.

ಜನಾಂಗದ ಪ್ರಾಚೀನತನವನ್ನು ಹುಡುಕಿ ಹೆಕ್ಕಿ ತೆಗೆದು ಎಲ್ಲವರ ತಿಳುವಳಿಕೆಗೆ ತರುತ್ತಿರುವುದು ಒಂದು ಅತ್ಯುತ್ತಮ ಕೆಲಸ. ಇದಕ್ಕಾಗಿ ನಾವು ಶ್ರೀಮಾನ್ ಪೂಜಾರಿರ ಮೊಣ್ಣಪ್ಪನವರನ್ನು ಶ್ರೀಮಾನ್ ದೇವಿಪ್ರಸಾದರವರನ್ನು ಮತ್ತು ಇತರ ಜನಸಾಮಾನ್ಯರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

ಪ್ರತಿಯೊಂದು ಒಳ ಪುಟಗಳ ಕೆಳಭಾಗದಲ್ಲಿ ಮುದ್ರಿಸಲ್ಪಡುತ್ತಿರುವ ಗಾದೆ ಮತ್ತು ಹಿತವಚನಗಳು ಮೆಚ್ಚಿಗೆ ತರುವಂತಹುದೇ ಆಗಿರುವುದು. ಧಾರಾವಾಗಿ ಮತ್ತು ಸಣ್ಣ ಕಥೆಗಳು ತಪ್ಪದೆ ಮೂಡಿಬರುವಂತೆ ಮುದ್ರಣಗೊಂಡರೆ ಇನ್ನಷ್ಟು ಮೆರುಗು ಸಿಗುವುದೆಂದು ನಮ್ಮ ಅನಿಸಿಕೆಗಳು. ಇವುಗಳಲ್ಲದೆ ಇನ್ನೂ ಹಲವಾರು ವಿಷಯಗಳು ಪ್ರಕಟಗೊಳ್ಳುತ್ತಿರುತ್ತದೆ.

ಇಂತಹ ಸುವಿಚಾರಗಳನ್ನು ಮುದ್ರಿಸಿ ಪುಸ್ತಕ ರೂಪದಲ್ಲಿ ಸದಸ್ಯರ ಮನೆ ಮನೆಗೆ ತಲುಪಿಸುತ್ತಿರುವುದು ಜನ ಸಾಮಾನ್ಯರಿಗೆ ಊಣಬಡಿಸಿದಂತೆ . ಹೀಗೆ ಮನೆ, ಮನೆಗಳಿಗೆ ಅಂಚೆ ಮೂಲಕ ತಲುಪುತ್ತಿದ್ದರೂ ಕೆಲವು ಜನರು ಚಂದದ ಹಣವನ್ನು ಸರಿಯಾದ ಸಮಯಕ್ಕೆ ಪಾವತಿ ಮಾಡದಿರುವುದು ವಿಷಾದಕರ ಸಂಗತಿ. ಜೊತೆಯಲ್ಲಿ ಅನರ್ಥ ಟೀಕೆ ಮಾಡುವುದು ಶೋಭೆ ತರುವಂತಹದಲ್ಲ. ಬದಲು ಪುಸ್ತಕದ ಪ್ರಗತಿಪರ ಟೀಕೆ ಟಿಪ್ಪಣಿಗಳು ಪುಸ್ತಕದ ಅಭಿವೃದ್ಧಿಗೆ ಸಹಕಾರವಾಗಬಹುದು. ಇನ್ನು ಮುಂದಕ್ಕಾದರು ಕೀಳರಿಮೆಯ ಭಾವನೆಗಳನ್ನು ತೋರ್ಪಡಿಸದೆ ಜನಾಂಗದ ಏಕೈಕ ವಾಹಿನಿಯಾದ 'ಕೊಡಗು ಸಂಗಾತಿ' ಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ಪ್ರಗತಿ ಪಥದತ್ತ ಸಹಕಾರ ನೀಡುವುದು ನಮ್ಮ ಜನಾಂಗ ಬಾಂಧವರ ಕರ್ತವ್ಯ ಎಂಬುದು ನಮ್ಮ ಅಂತರಾಳದ ಅನಿಸಿಕೆ.

ಕೊಡಗು ಸಂಗಾತಿ ಉಳಿಯಬೇಕು ಮತ್ತು ಬೆಳೆಯಬೇಕು. ಕೊಡಗು ಸಂಗಾತಿ ಇನ್ನೂ ಹಲವಾರು ಯುಗಾದಿಗಳನ್ನು ಕಾಣಲಿ ಎಂದು ನಾವು ದಂಪತಿಗಳು ಯುಗಾದಿ ಹಬ್ಬದ ಶುಭಾಶಯಗಳೊಂದಿಗೆ ಆಶೀರ್ವದಿಸುತ್ತೇವೆ.

ಬರೆದವರು: ಕೂಡಕಂಡಿ ಅಪ್ಪಾಜಿ ಮತ್ತು ಪೂವಮ್ಮ
ದಂಪತಿಗಳು, ಮಡಿಕೇರಿ.

ಸಂಗಾತಿಯ ಬಾಕಿಗಾಗಿ ಜ್ಞಾಪನ ಪತ್ರ ಹಾಕಿದ್ದಾಗಿಯೂ, ನೀಡದಿದ್ದಲ್ಲೂ ಸಂಗಾತಿಗೆ ಸೋಲು ಖಚಿತ. ಚಿಂತಿಸಿ.

ಹುಚ್ಚೆದ್ದು ಏರುತ್ತಿರುವ ಚುನಾವಣಾ ಕಾವು, ಇಲ್ಲಿ ತಮ್ಮವರನ್ನು ಎದುರಿಸುವುದೇ ದೊಡ್ಡ ಚಿಂತೆ.

ಕೊಡಗಿನಲ್ಲಿ ಈ ವರ್ಷ ಸೂರ್ಯನ ಪ್ರಖರತೆ ಸ್ವಲ್ಪ ಜಾಸ್ತಿಯೇ ಎನ್ನಬಹುದು. ಸೂರ್ಯನ ತಾಪ ಏರಿದಂತೆ, ಚುನಾವಣಾ ತಾಪವೂ ಮಿತಿ ಮೀರುತ್ತಿದೆ. ಮೆಕವಲ್ಲಿ ಎಂಬ ರಾಜ ಶಾಸ್ತ್ರಜ್ಞ ರಾಜಕಾರಣಿಗಳಿಗೆ ಹೇಳಿದ ಮಾತಿದು "ನೀನು ಅಧಿಕಾರಕ್ಕೆ ಬಂದ ಮೇಲೆ ಮಾಡಬೇಕಾದ ಮೊದಲ ಕೆಲಸವೆಂದರೆ ನಿನ್ನನ್ನು ಅಧಿಕಾರಕ್ಕೇರಿಸಿದವನನ್ನು ಮೊದಲು ನಾಶಮಾಡುವುದು, ಏಕೆಂದರೆ ಅವನಿಗೆ ಅಧಿಕಾರಕ್ಕೇರುವುದು ಹೇಗೆ ಎಂಬುದು ಗೊತ್ತಿರುತ್ತದೆ." ಮೆಕವಲ್ಲಿಯ ಸಲಹೆಗಿಂತ ಕೊಡಗಿನ ರಾಜಕಾರಣಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅಧಿಕಾರಕ್ಕೆ ಬರುವ ಮೊದಲೇ ತಮ್ಮ ಪಕ್ಷದವರನ್ನು ಮಟ್ಟ ಹಾಕಲು ಮುಂದಾಗಿದ್ದಾರೆ. ಕೊಡಗಿನಲ್ಲಿ ಕಾಂಗ್ರೆಸ್, ಬಿ. ಜೆ.ಪಿ. ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ನಡುವೆ ತ್ರಿಕೋನ ಸ್ಪರ್ಧೆಗೆ ವೇದಿಕೆ ಸಜ್ಜುಗೊಂಡಿದೆ. ಆದರೆ ಈ ಮೂರು ಪಕ್ಷಗಳಲ್ಲಿ ತಮ್ಮ ತಮ್ಮ ಅಭ್ಯರ್ಥಿಗಳ ವಿರುದ್ಧ ಕಾರ್ಯ ನಿರ್ವಹಿಸಲು ಅದೇ ಪಕ್ಷಗಳ ಕಾರ್ಯಕರ್ತರ ಗುಂಪು ಟೊಂಕ ಕಟ್ಟಿ ನಿಂತಿರುವುದು ಕೊಡಗಿನ ರಾಜಕೀಯದಲ್ಲಿ ಈ ಬಾರಿ ಕಂಡು ಬರುತ್ತಿರುವುದು ವಿಲಕ್ಷಣ ವಿಶೇಷವಾಗಿದೆ.

ಪತ್ರಿಕೆಗಳಲ್ಲಿ ದಿನಕ್ಕೊಂದರಂತೆ ಸುದ್ದಿ ನೀಡಿ ಕಾರ್ಯಕರ್ತರನ್ನು ಮತದಾರರನ್ನು ಇನ್ನಿಲ್ಲದಂತೆ ಗೊಂದಲಕ್ಕೆ ತಳ್ಳಿ ಅಂತಿಮವಾಗಿ ಕ್ರಮವಾಗಿ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆಗಳಿಗೆ ಬಿ.ಜೆ.ಪಿ.ಯಿಂದ ಕೆ. ಜಿ. ಬೋಪಯ್ಯ, ಎಂ. ಪಿ. ಅಪ್ಪಚ್ಚು ರಂಜನ್, ಎಚ್. ಡಿ. ಬಸವರಾಜು, ಕಾಂಗ್ರೆಸ್ ನಿಂದ ಎಂ. ಎಂ. ನಾಣಯ್ಯ, ಜಿ. ವಿಜಯಾ, ಸುಮಾವಸಂತ್, ಜನತಾದಳದಿಂದ ಡಿ. ಎಸ್. ಮಾದಪ್ಪ, ವಿ. ಪಿ. ಶಶಿಧರ, ಕೆ. ಬಿ ಶಾಂತಪ್ಪನವರು ಸ್ಪರ್ಧಿಸುವುದು ಬಹುತೇಕ ಖಚಿತವಾಗಲಿದೆ. ಆದರೆ ಈ ಮೂರೂ ಪಕ್ಷಗಳಲ್ಲಿ ಗುಂಪುಗಾರಿಕೆ ಅವ್ಯಾಹಿತವಾಗಿ ಸಾಗುತ್ತಿದ್ದು ಇದು ವಿರೋಧಿಗಳ ಪಾಲಿಗೆ ವರದಾನವಾಗಿ ಪರಿಣಮಿಸಲಿದೆ.

ಮಡಿಕೇರಿ ಕ್ಷೇತ್ರದಲ್ಲಿ ಎಂ. ಎಂ. ನಾಣಯ್ಯನವರು ಸ್ಪರ್ಧಿಸಿರುವುದರಿಂದ ಅವರ ಎದುರಾಳಿ ಅದೇ ಪಕ್ಷದ ಬಿ. ಟಿ. ಪ್ರದೀಪ್ ಈಗ ಜನತಾದಳ ತಂಡದ ಮುಂದಿನ ನಡೆಯೇನು ಎಂಬುದು ನಿರ್ಣಾಯಕವಾಗಲಿದೆ. ಈ ಮಧ್ಯೆ ಇತ್ತೀಚೆಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಸೋಲನ್ನನುಭವಿಸಿ ಮುಖಭಂಗಕ್ಕೊಳಗಾದ ಟಿ. ಜಾನ್‌ರವರು ನಾಣಯ್ಯನವರ ಎದುರಾಳಿಗೆ ಸಹಾಯ ನೀಡಿದರೆ ಆಶ್ಚರ್ಯವಿಲ್ಲ. ಟಿ. ಜಾನ್‌ರವರ ಪುತ್ರ ಥಾಮಸ್ ಜಾನ್‌ರವರು ಜಾತ್ಯಾತೀತ ಜನತಾದಳ ಸೇರಿರುವುದೂ ಈ ವಾದಕ್ಕೆ ಮತ್ತಷ್ಟು ಪುಷ್ಟಿ ನೀಡಬಲ್ಲದು. ಆದರೂ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳು ಕಾಂಗ್ರೆಸ್‌ಗೆ ಶ್ರೀರಕ್ಷೆಯಾಗಲಿದೆ ಎಂಬುದು ಕಾಂಗ್ರೆಸ್ ಕಾರ್ಯಕರ್ತರ ಅಂಬೋಣ. ವೈಯಕ್ತಿಕ ವಾಗಿ ನಾಣಯ್ಯನವರ ಮೇಲೆ ಕೊಡಗಿನ ಜನತೆಗೆ ಆಕ್ರೋಶ ವಿಲ್ಲದಿದ್ದರೂ, ಸಚಿವರಾಗಿ ಅವರು ಇನ್ನೂ ಹೆಚ್ಚಿನ ಕಾರ್ಯ ನಿರ್ವಹಿಸಬಹುದಿತ್ತು. ಅಲ್ಲದೆ ಅಗತ್ಯಕ್ಕಿಂತ ಹೆಚ್ಚಾಗಿ ತಮ್ಮ ಹಿಂಬಾಲಕರಿಗೆ ಮಾತ್ರ ಆದ್ಯತೆ ನೀಡಿದ್ದಾರೆಂಬ ಅಸಮಾಧಾನ ಜನ ಸಾಮಾನ್ಯರಲ್ಲಿದೆ.

ಜಾತ್ಯಾತೀತ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ದಂಬೆಕೋಡಿ ಮಾದಪ್ಪನವರು, ಮತದಾರರ ಜೊತೆ ನಿಕಟವಾಗಿ ಬೆರೆಯುವ ಸ್ವಭಾವವುಳ್ಳವರು. ತಾವು ಶಾಸಕರಾಗಿದ್ದಾಗ ಜನರ ನೆರವಿನಿಂದಲೇ ಹಲವು ಗ್ರಾಮಗಳ ರಸ್ತೆಗಳನ್ನೂ ದುರಸ್ಥಿಗೊಳಿಸಿದ್ದರು. ಈಗ ಆ ರಸ್ತೆಗಳೇ ಕೇಳುವವರಿಲ್ಲದಂತಾಗಿದೆ ಎಂದು ಪ್ರಚಾರ ಮಾಡಲು ಅವರಿಗೆ ಒಳ್ಳೆಯ ವಿಷಯ ಸಿಕ್ಕಿದೆ. ಕಳೆದ ಬಾರಿ ಅನುಕಂಪದ ಆಧಾರದಲ್ಲಿ ಗೌಡ ಜನಾಂಗದ ಬಹುತೇಕ ಮತಗಳನ್ನು ಇವರು ಪಡೆದಿದ್ದರು. ಆದರೆ ಈ ಬಾರಿ ಅಷ್ಟೇ ಪ್ರಮಾಣದ ಗೌಡ ಮತಗಳನ್ನು ಇವರು ಪಡೆಯುತ್ತಾರೆಯೇ? ಎನ್ನುವುದು ಸಂಶಯಾಸ್ಪದವಾಗಿದ್ದರೂ, ಕ್ರಿಶ್ಚಿಯನ್ನರು, ಮುಸ್ಲಿಮರು ಮತ್ತು ಹಿಂದುಳಿದ ವರ್ಗಗಳ ಹೆಚ್ಚಿನ ಮತಗಳು ಈ ಬಾರಿ ಇವರ ಪಾಲಿಗೆ ಬರಲಿವೆ ಎಂಬ ವಿಶ್ವಾಸವನ್ನು ಕಾರ್ಯಕರ್ತರು ವ್ಯಕ್ತಪಡಿಸುತ್ತಿದ್ದಾರೆ. ಬಿ. ಜೆ. ಪಿ. ಯಲ್ಲಿದ್ದಾಗ ಮಾದಪ್ಪನವರ ಹಿಂದೆ ಇದ್ದಷ್ಟು ಜನ ಈಗ ಕಂಡುಬಾರದೇ ಇದ್ದರೂ, ಮಾದಪ್ಪ ಪರ ಅಲೆ ಗುಪ್ತಗಾಮಿನಿಯಾಗಿ ಹರಿಯುತ್ತಿದೆ ಎಂಬುದನ್ನೂ ಅವರ ವಿರೋಧಿಗಳೂ ಒಪ್ಪಿಕೊಳ್ಳುತ್ತಾರೆ. ಆದರೆ ಅದೇ ಪಕ್ಷದ ಎ. ಕೆ. ಸುಬ್ಬಯ್ಯ ಬಣ ದಿನಕ್ಕೊಂದು ಹೇಳಿಕೆಗಳನ್ನು ಪತ್ರಿಕೆಗಳಿಗೆ ನೀಡುತ್ತಾ ಮಾದಪ್ಪನವರನ್ನು ಪೇಚಿಗೆ ಸಿಲುಕಿಸುತ್ತಿದೆ.

ಬಿ.ಜೆ.ಪಿ.ಯಿಂದ ಕೆ. ಜಿ. ಬೋಪಯ್ಯ ಸ್ಪರ್ಧೆಗಿಳಿದಿದ್ದು, ವಾಜಪೇಯಿ ಅಲೆ, ಹಾಗೂ ಲೋಕಸಭೆಗೆ ಡಿ. ವಿ. ಸದಾನಂದ ಗೌಡರ ಸ್ಪರ್ಧೆಯಿಂದ, ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿಕೊಂಡಿದ್ದಾರೆ. ಆದರೆ ಅವರನ್ನೂ ಮಟ್ಟಹಾಕಲು, ಪಕ್ಷಗಳ ಸದ್ದಿಲ್ಲದ ಚಟುವಟಿಕೆ ನಡೆಯುತ್ತಿದೆ. ಆರ್. ಎಸ್. ಎಸ್. ಮೂಲಕ ವಕೀಲ ಕೊಂಬಾರನ ಬೋಪಯ್ಯ ಸಜ್ಜನ ಎಂಬ ಭಾವನೆ ಯಿದ್ದರೂ ಜನರೊಡನೆ ಬೆರೆಯಬಲ್ಲ ಮನೋಭಾವನೆ ಇಲ್ಲ ಎಂಬ ಮಾತು ಜನಜನಿತವಾಗಿರುವುದು ಇವರ ಗೆಲುವಿಗೆ ತೊಡರುಗಾಲಾಗಬಹುದು.

ಇನ್ನುಳಿದಂತೆ ಜನತಾ ಪಕ್ಷ ತನ್ನ ಬಲವನ್ನು ದಿನದಿಂದ ದಿನಕ್ಕೆ ವೃದ್ಧಿಸಿಕೊಂಡಿದ್ದು, ಸಂಕೇತ ಪೂವಯ್ಯನವರನ್ನು ಮಡಿಕೇರಿ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಪಕ್ಷವನ್ನು ಬೆಳೆಸಲು ಸಾಕಷ್ಟು ಹಣವನ್ನು ಸುರಿಯಲಾಗಿದೆ. ಈ ಹಣ ಎಷ್ಟು ಮತಗಳನ್ನು ಬುಟ್ಟಿಗೆ ಹಾಕಿಸಬಹುದೆಂಬುದರ ಮೇಲೆ ಇವರ ಗೆಲುವು ನಿರ್ಣಯವಾಗಲಿದೆ. ಇವರು ಗೆಲ್ಲದೇ ಹೋದರೂ ಇನ್ನೊಬ್ಬರ ಗೆಲುವಿನ ಮೇಲೆ ನಿರ್ಣಾಯಕ ಪ್ರಭಾವ ಬೀರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಸೋಮವಾರಪೇಟೆ ಮತ್ತು ವಿರಾಜಪೇಟೆ ಕ್ಷೇತ್ರಗಳಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿದಿದ್ದು, ಕಣದಲ್ಲಿರುವ ಅಭ್ಯರ್ಥಿಗಳು ಬೇರೆ ಪಕ್ಷಗಳಿಗಿಂತಲೂ ತಮ್ಮ ಪಕ್ಷದವರಿಂದಲೇ ಪ್ರಬಲ ವಿರೋಧವನ್ನು ಎದುರಿಸಿಕೊಂಡು ಕಣದಲ್ಲಿ ಹೋರಾಟ ನಡೆಸಬೇಕಾಗಿದೆ. ಈ ಮಧ್ಯೆ ಮತದಾರ ಎಲ್ಲವನ್ನು ತಾಳ್ಮೆಯಿಂದ ಅವಲೋಕನ ಮಾಡುತ್ತಿದ್ದಾನೆ. ಅಭ್ಯರ್ಥಿಗಳ ಯೋಗ್ಯತೆಯನ್ನು ಅವರ ಭರವಸೆಗಳನ್ನು ಅಳೆದು ಸುರಿದೂ ನೋಡುತ್ತಿದ್ದಾನೆ.

ಕೊಡಗಿನ ಮತದಾರನಿಗೀಗ ಹಿಂಸೆ ಬೇಕಿಲ್ಲ, ಕೋಮು ದ್ವೇಷ ಬೇಕಿಲ್ಲ, ಜಾತಿ ವೈಷಮ್ಯ ಬೇಕಿಲ್ಲ. ಅವನಿಗೀಗ, ಅನ್ನಬೇಕು, ನೀರುಬೇಕು, ರಸ್ತೆಬೇಕು, ಅವನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಬೇಕು. ಮುಖ್ಯವಾಗಿ ಅವನಿಗೆ ನೆಮ್ಮದಿಯ ಬದುಕುಬೇಕು. ಅದನ್ನು ದೊರಕಿಸುವ ನಾಯಕನಿಗಾಗಿ ಅವನು ಹುಡುಕಾಡುತ್ತಿದ್ದಾನೆ.

\- ಪಟ್ಟಡ ಶಿವಕುಮಾರ್

(7-4-2004 ಕ್ಕೆ 8-00 ಘಂಟೆಯ ಸುದ್ದಿ ವೀಕ್ಷಿಸಿ.)

ಭಾವನೆಗಳಿಲ್ಲದೆ ನಮ್ಮ ಬದುಕಿಗೆ ಅರ್ಥವೆ ಇರುವುದಿಲ್ಲ, ಗುರುಬೇಕು ಗುರಿಯ ಸಾಧನೆಗೆ.

ಗೌಡ ಕುಟುಂಬಗಳ ನಡುವೆ "ಪೇರಿಯನ ಕಪ್" -2004 ಕ್ರಿಕೆಟೋತ್ಸವ

ಆಟದಿಂದ ಸಂಸ್ಕೃತಿಯ ಅಭ್ಯುದಯಕ್ಕೆ ಭದ್ರ ಬುನಾದಿ : ತುಂತಜೆ ಗಣೇಶ್

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಆಶ್ರಯದಲ್ಲಿ ಹತ್ತು ಕುಟುಂಬ ಹದಿನೆಂಟು ಗೋತ್ರ ಗೌಡ ಕುಟುಂಬಗಳ ನಡುವೆ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ ಮೇ 3 ರಿಂದ ಆರಂಭಗೊಂಡು ಮೇ 16 ರವರೆಗೆ ನಡೆಯಲಿದೆ. ಸತತವಾಗಿ ಐದನೇ ವರ್ಷ ಗೌಡ ಕುಟುಂಬಗಳ ನಡುವೆ ಪಂದ್ಯಾವಳಿ ನಡೆಯುತ್ತಿದ್ದು, ಈ ಬಾರಿ 'ಪೇರಿಯನ ಕಪ್'ಗಾಗಿ ಇನ್ನೂರಕ್ಕೂ ಹೆಚ್ಚು ಕ್ರಿಕೆಟ್ ತಂಡಗಳು ಪೈಪೋಟಿಗಿಳಿಯುವ ಸಾಧ್ಯತೆಯಿದೆ. ಕಳೆದ ಬಾರಿಯ 'ದಂಬೆಕೋಡಿ ಕಪ್' ಕ್ರಿಕೆಟ್ ಪಂದ್ಯಾವಳಿಯಲ್ಲಿ 136 ತಂಡಗಳು ಭಾಗವಹಿಸಿದ್ದು, ಅಂತಿಮವಾಗಿ ಬಾಳಾಡಿ ಕುಟುಂಬ ತಂಡವು ಆ ಕಪ್ಪನ್ನು ತನ್ನದಾಗಿಸಿಕೊಂಡಿತ್ತು.

ಕಳೆದ ಬಾರಿಯಂತೆ ಈ ಬಾರಿಯೂ ಮಡಿಕೇರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರಿಕೆಟ್ ಉತ್ಸವದ ಉದ್ಘಾಟನಾ ಸಮಾರಂಭವು ವರ್ಣರಂಜಿತವಾಗಿ ನಡೆಯಲಿದ್ದು, ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ಎಲ್ಲಾ ಕುಟುಂಬ ತಂಡಗಳು ತಮ್ಮದೇ ಸಮವಸ್ತ್ರ ಧರಿಸಿ, ಧ್ವಜ ಹಿಡಿದು ಆಕರ್ಷಕ ಪಥ ಸಂಚಲನದಲ್ಲಿ ಭಾಗವಹಿಸಲಿವೆ. ಮೇ 13 ರಂದು ಸಾರ್ವತ್ರಿಕ ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿರುವುದರಿಂದ, ಆ ದಿನ ಪಂದ್ಯಕ್ಕೆ ವಿರಾಮ ನೀಡಲಾಗಿದ್ದು, ಉಳಿದಂತೆ ಮೇ 3 ರಿಂದ 16 ರವರೆಗೆ ಸತತವಾಗಿ ಪಂದ್ಯಾವಳಿಗಳು ನಡೆಯಲಿವೆ. ಈ ಪಂದ್ಯಾವಳಿಗೆ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಲು ಏಪ್ರಿಲ್ 25 ಕೊನೆಯ ದಿನಾಂಕವಾಗಿದ್ದು, ಪ್ರತಿ ತಂಡವು 425 ರೂ.ಗಳ ಮೈದಾನ ಶುಲ್ಕದೊಂದಿಗೆ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಒಂದೇ ಕುಟುಂಬದ 'ಬಿ' ತಂಡಕ್ಕೆ ರೂ. 300 ನ್ನೂ, 'ಸಿ' ತಂಡಕ್ಕೆ ರೂ. 200 ನ್ನೂ ಮೈದಾನ ಶುಲ್ಕವಾಗಿ ನಿಗದಿಪಡಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷರು ತಿಳಿಸಿದ್ದಾರೆ.

ಮೇ ತಿಂಗಳಿನಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳ ಪರೀಕ್ಷೆಗಳು ಮುಗಿದಿದ್ದು, ಮನೋರಂಜನೆಗಾಗಿ ಅವರು ಕಾಯುತ್ತಿರುವ ಸಂದರ್ಭದಲ್ಲೇ, ಕ್ರಿಕೆಟ್ ಪಂದ್ಯಾವಳಿ ಸಹಸ್ರಾರು ಜನರಿಗೆ ಮನೋರಂಜನೆಯ ಸಿಂಚನ ನೀಡಲಿದೆ. ಪಂದ್ಯಾವಳಿಯಲ್ಲಿ ಗೌಡ ಕುಟುಂಬಗಳಿಗೆ ಮಾತ್ರ ಸೆಣಸಲು ಅವಕಾಶವಿದ್ದರೂ, ಇತರ ಜನಾಂಗಗಳ ಕ್ರೀಡಾಭಿಮಾನಿಗಳೂ ಸಹ ಕ್ರಿಕೆಟ್‌ನ ರಸದೌತಣವನ್ನು ಸವಿಯಲಿದ್ದಾರೆ. ಮಡಿಕೇರಿಯ ಎರಡು ಗೌಡ ಕಲ್ಯಾಣ ಮಂಟಪಗಳಲ್ಲಿ ಮದುವೆ ಸಮಾರಂಭಗಳಿದ್ದಲ್ಲಿ, ಹಳ್ಳಿಗಳಿಂದ ಬಂದಂತಹ ಜನರೂ ಸಹ ಕ್ರಿಕೆಟ್ ಸಂತಸವನ್ನೂ ಹಂಚಿಕೊಳ್ಳಲಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಂಡು, 5 ವರ್ಷಗಳಿಂದ ಯಶಸ್ಸಿನ ಶೃಂಗದ ಮೇಲೆ ಸಾಗುತ್ತಿರುವ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಜನರ ಪ್ರಶಂಸೆಗೆ ಭಾಜನವಾಗಿದೆ. ಈ ಸಂದರ್ಭದಲ್ಲಿ 'ಕೊಡಗು ಸಂಗಾತಿ' ಯು ಅಕಾಡೆಮಿ ಅಧ್ಯಕ್ಷರಾದ ತುಂತಜೆ ಗಣೇಶರವರನ್ನು ಮಾತನಾಡಿಸಿದಾಗ.

ಗೌಡ ಕುಟುಂಬಗಳ ನಡುವೆ ಏರ್ಪಡಿಸುತ್ತಿರುವ ಕ್ರಿಕೆಟ್ ಪಂದ್ಯಾವಳಿ, ಗೌಡ ಕುಟುಂಬಗಳನ್ನೂ ಸಂಘಟನೆಯ ಸರಪಳಿಯಿಂದ ಜೋಡಿಸಲು ಸಹಕಾರಿಯಾಗಿದೆ. ಯಾವುದೇ ನಿಯಂತ್ರಣವಿಲ್ಲದೆ, ಲಂಗು ಲಗಾಮಿಲ್ಲದೆ ಕುದುರೆಯಂತೆ ಚಂಚಲವಾಗಿದ್ದ ಗೌಡ ಜನಾಂಗ ಕ್ರಿಕೆಟ್ ನೆಪದಲ್ಲಿ ಮೈದಾನದಲ್ಲಿ ಒಂದುಗೂಡುತ್ತಿದೆ. ಯಾವುದೇ ಜನಾಂಗ ರಾಜಕೀಯವಾಗಿ ಮುಂದುವರೆಯಬೇಕಾದರೆ, ಅವರಲ್ಲಿ ಸಾಂಸ್ಕೃತಿಕ ಸಂಘಟನೆ ಬಹುಮುಖ್ಯ. ಆದುದರಿಂದ ನಾವು ಮೊದಲು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು. ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದರೆ ಅವರಲ್ಲಿ ಮೊದಲು ಒಗ್ಗಟ್ಟು, ಆತ್ಮಾಭಿಮಾನ ಮೂಡಬೇಕು. ಇವು ಮೂಡಬೇಕಾದರೆ ಮೊದಲು ಸಂಘಟಿತರಾಗಬೇಕು. ಈ ಸಂಘಟನೆಗೆ ಕ್ರಿಕೆಟ್ ಪಂದ್ಯಾವಳಿ ಸೋಪಾನವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಮುಂದುವರಿದು ಮಾತನಾಡಿದ ಅವರು, ಕ್ರಿಕೆಟ್ ಪಂದ್ಯಾವಳಿಯಿಂದಾಗಿ ನಮ್ಮ ಜನಾಂಗದ ಹಲವು ಪ್ರತಿಭೆಗಳು ಇಂದು ಮನೆ ಮಾತಾಗಿಸಲು ಸಾಧ್ಯವಾಗಿದೆ. ನಮ್ಮ ಜನಾಂಗದ ಇಬ್ಬರು ಯುವಕರು ಯೂನಿವರ್ಸಿಟಿಯಿಂದ ರಾಷ್ಟ್ರಮಟ್ಟದಲ್ಲಿ ಆಡಿದ ಕೀರ್ತಿಗೆ ಭಾಜನರಾಗಿದ್ದಾರೆ. ವೀಕ್ಷಕ ವಿವರಣೆಗಾರರು, ಅಂಪೈರ್‌ಗಳು, ರೆಫ್ರಿಗಳು ತಮ್ಮ ನೈಪುಣ್ಯತೆಯನ್ನು ಒರೆಗೆ ಹಚ್ಚಲು ಕ್ರಿಕೆಟ್ ಪಂದ್ಯಾವಳಿ ನೆರವಾಗಿದೆ. ಅಲ್ಲದೆ ನಮ್ಮ ಜನಾಂಗದ ಎಲ್ಲಾ ಯುವಕರೂ ಸಹ ಅತ್ಯುತ್ಸಾಹದಿಂದ, ಸ್ವಯಂ ಸೇವಕರಾಗಿ ಕ್ರಿಕೆಟ್ ಪಂದ್ಯಾವಳಿಯ ಯಶಸ್ಸಿಗೆ ದುಡಿಯುತ್ತಿರುವುದು, ಜನಾಂಗ ಸಂಘಟನೆಯ ಬಗ್ಗೆ ಅವರಿಗಿರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದು ಅಭಿಮಾನದ ನುಡಿಗಳನ್ನಾಡಿದರು.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆಲವು ಕುಟುಂಬ ತಂಡಗಳು ಸೌಜನ್ಯತೆ ಮೀರಿ ವರ್ತಿಸಿದರೆ, ಗೊಂದಲ ಸೃಷ್ಟಿಮಾಡಿದರೆ ಅದು ಸಂಘಟನೆಗೆ ಹಿನ್ನಡೆಯನ್ನುಂಟುಮಾಡುವುದಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು ಪ್ರತಿ ಪಂದ್ಯದಿಂದ ಪಂದ್ಯಕ್ಕೆ ಹೊಸತನ ಮೂಡಿಬರುತ್ತಿದ್ದು, ಪಂದ್ಯಗಳು ನಮ್ಮ ಸಾಮರ್ಥ್ಯಕ್ಕೆ ಸವಾಲನ್ನೂ ಒಡ್ಡುತ್ತವೆ. ಕೆಲವೊಮ್ಮೆ ಸಣ್ಣ ಪುಟ್ಟ ತಪ್ಪುಗಳು ಸಂಭವಿಸುತ್ತವೆ. ಅಂತಹವುಗಳನ್ನು ಯಾವ ರೀತಿ ಸಂಭಾಳಿಸಿಕೊಂಡು ಹೋಗಬೇಕೆಂಬ ಪಾಠವನ್ನೂ ಅವುಗಳು ಕಲಿಸಿಕೊಡುತ್ತವೆ. ಮುಂದೆ ಅಂತಹ ತಪ್ಪುಗಳಾಗದಂತೆ ಎಚ್ಚರವಹಿಸಲು ಅವು ಮಾರ್ಗದರ್ಶನ ನೀಡುತ್ತವೆ. ಕ್ರಮೇಣ ತಮ್ಮ ಹುಡುಗರಲ್ಲಿ 'ಕ್ರೀಡಾ ಮನೋಭಾವನೆ' ಮೂಡಿ ಬರುತ್ತಿದೆ. ನಮ್ಮ ಸಂಸ್ಕೃತಿಯನ್ನೂ ಎತ್ತಿ ಹಿಡಿಯಬೇಕೆಂಬ 'ನಮ್ಮತನ' ಅವರಲ್ಲಿ ಮೊಳೆಯುತ್ತಿವೆ. ಅಲ್ಲದೆ ಕ್ರೀಡೆಯ ಬಗ್ಗೆ ಆಸಕ್ತಿ, ಅದರ ಜೊತೆ ಜೊತೆಗೆ ಶಿಸ್ತಿನ ಪಾಠವನ್ನು ನಮ್ಮ ಹುಡುಗರು ಕಲಿಯುತ್ತಿರುವುದರಿಂದ ಕ್ರಿಕೆಟ್ ಪಂದ್ಯಾವಳಿ ನಮ್ಮ ಸಂಸ್ಕೃತಿಯ ಅಭ್ಯುದಯಕ್ಕೆ ಭದ್ರ ಬುನಾದಿಯನ್ನು ಒದಗಿಸಿದೆ ಎಂದು ಅವರು ಅಭಿಪ್ರಾಯ ಪಟ್ಟರು.

- ಪಟ್ಟಡ ಶಿವಕುಮಾರ್

ಹೊಸ ಹೊಸ ಬದಲಾವಣೆ ಜೀವಂತ ಸಮಾಜದ ಲಕ್ಷಣ, ಹಾಗೆಂದು ಹಳೆತನವನ್ನು ಮರೆಯಬಾರದು.

ಆದಿ ಚುಂಚನಗಿರಿಯ ಸಾಂಸ್ಕೃತಿಕ ಅವಲೋಕನ : *ಡಾ. ಕೆ. ರಾಜೇಶ್ವರಿ ಗೌಡ.*

ಭಾಗ -1

ಭಾರತದ ಅತ್ಯಂತ ಪ್ರಾಚೀನ ಧರ್ಮವಾದ ಶುದ್ಧ ಶೈವದಿಂದ ಕವಲೊಡೆದ ಪಂಥಗಳಲ್ಲಿ ನಾಥ ಪಂಥವೂ ಒಂದು. ಕ್ರಿ. ಶ. ಏಳನೇ ಶತಮಾನದಲ್ಲಿ ಲಾಕುಳ ಶೈವದ ಪ್ರಭಾವದಿಂದ ದೇವಾಲಯಗಳು ಹಾಗೂ ಅವುಗಳಿಗೆ ಹೊಂದಿಕೊಂಡೇ ಇದ್ದ ಮಠಗಳು ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲೇ ನಾಥ ಪಂಥವೂ ಭಾರತಾದ್ಯಂತ ಹಬ್ಬಿತ್ತು. ಜನಪರವಾದ ಈ ಭಕ್ತಿ ಚಳುವಳಿಯ ಮೂಲವನ್ನು ಕೆಲವರು ಲಕುಲೀಶ ಹಾಗೂ ಪಾಶುಪತಗಳಲ್ಲಿ ಗುರುತಿಸಲೆತ್ನಿಸಿದ್ದಾರೆ. ವಾಸ್ತವವಾಗಿ ನಾಥ ಪಂಥ ಶುದ್ಧ ಶೈವದ ಸದಾಶಯಗಳನ್ನು, ಸಾತ್ವಿಕತೆಯನ್ನು ಮೈಗೂಡಿಸಿಕೊಂಡಿದೆ. ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಶೋಷಣೆ ಮೊದಲಾದ ಸಾಮಾಜಿಕ ಅನಿಷ್ಟಗಳನ್ನು ಧಿಕ್ಕರಿಸಿ ಮಾನವೀಯತೆಯನ್ನು ಪುರಸ್ಕರಿಸಿ ಪ್ರಗತಿಪರ ಧೋರಣೆಗಳ ಸಾಕಾರವಾಗಿದೆ. ಸಮಾಜೋದ್ಧಾರಕ್ಕೆ ಬದ್ಧವಾದ ನಾಥ ಪಂಥದ ಪ್ರಮುಖ ಮಠವೇ- ಆದಿಚುಂಚನಗಿರಿ ಮಹಾಸಂಸ್ಥಾನ ಮಠ.

ಪೌರಾಣಿಕ, ಐತಿಹಾಸಿಕ, ಜಾನಪದ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಮೊದಲಾದ ಆಯಾಮಗಳಲ್ಲಿ ಶ್ರೀ ಮಠಕ್ಕೆ ಸಂಬಂಧಿಸಿದ ಪುರಾವೆಗಳನ್ನು ಮತ್ತು ಸಾಧನೆ ಸಿದ್ಧಿಗಳ ಸಾಕ್ಷಿಗಳನ್ನು ಕಾಣಬಹುದಾಗಿದೆ. 'ಆದಿಚುಂಚನಗಿರಿ' ಎಂಬ ಸ್ಥಳನಾಮದಲ್ಲೇ ಸಾಂಸ್ಕೃತಿಕ ವಿಶೇಷಣವನ್ನು ಗುರುತಿಸಬಹುದಾಗಿದೆ. ನಾಥ' ಪಂಥ'ದ ದ್ವಾದಶ ಕ್ಷೇತ್ರಗಳಲ್ಲಿ ಪ್ರಥಮವಾದುದು. ಈ ಪಂಥದ ದ್ರಷ್ಟಾರನಾದ ಪರಶಿವನು ಚುಂಚನ ಗಿರಿಯಲ್ಲಿ ತಪಸ್ಸು ಮಾಡಿ ತನ್ನ ಯೋಗ ಶಕ್ತಿಯಿಂದ ಸಿದ್ಧಯೋಗಿಯನ್ನು ಸೃಷ್ಟಿಸಿ ಆತನನ್ನು ಇಲ್ಲಿನ ಸಿದ್ಧ ಸಿಂಹಾಸನದ ಪ್ರಪ್ರಥ'ಮ ಪೀಠಾಧಿಕಾರಿಯನ್ನಾಗಿ ನೇಮಿಸಿದನಂತೆ. ಮುಂದೆ ದ್ವಾದಶಪೀಠಗಳಿಗೂ ಪೀಠಾಧಿಪತಿಗಳನ್ನು ನೇಮಿಸುವ ಅಧಿಕಾರ ಚುಂಚನಗಿರಿ ಮಠಕ್ಕೆ ಇದ್ದುದರಿಂದ 'ಆದಿ' ಎಂಬ ಗುಣವಾಚಕ ಬಂದಿತು. ಭೈರವ ಭಕ್ತನಾದ ಚುಂಚನ ಅಧೀನದಲ್ಲಿ ಈ ಪ್ರಾಂತ್ಯ ಇದ್ದಿತು. ಅಲ್ಲದೆ ಇಲ್ಲಿನ ಬಂಡೆಗಳ ಮೇಲ್ಭಾವಣಿಯಂತೆ ಮುಂಚಾಚಿಕೊಂಡಿದೆ. ಕೆಲವು ಪಕ್ಷಿಗಳ ಕೊಕ್ಕಿನಂತೆ ಕಾಣಿಸುತ್ತವೆ. ಚುಂಚ> ಜುಂಜು=ಒರಟು ಕೂದಲುಳ್ಳವನು ಅರ್ಥಾತ್ ಭೈರವಕ್ಷೇತ್ರ ಎಂದು ಚುಂಚ ಶಬ್ದಕ್ಕೆ ಅರ್ಥಗಳಿವೆ. ವನಸ್ಪತಿ ಎಂಬುದಕ್ಕೂ ಅನ್ವಯಿಸುತ್ತದೆ. ಈಗಲೂ ಈ ಬೆಟ್ಟ ಪ್ರದೇಶಗಳಲ್ಲಿ ವನಸ್ಪತಿ ಮರಗಳಿವೆ. ಇವೆಲ್ಲ ಅಂಶಗಳನ್ನು ಒಟ್ಟುಗೂಡಿಸಿ ನೋಡಿದಾಗ 'ಆದಿಚುಂಚನಗಿರಿ' ಎಂದರೆ 'ವನಸ್ಪತಿ ಮೂಲದ ಗಿರಿವನಗಳಿಂದಾವೃತ್ತವಾದ ನಾಥ ಪರಂಪರೆಯ ಭೈರವಾರಾಧನೆಯ ಆದಿಪೀಠ ಎಂಬುದು ಮನವರಿಕೆಯಾಗುತ್ತದೆ.

ಆದಿಚುಂಚನಗಿರಿ ಮಠದ ಎಪ್ಪತ್ತೊಂದನೆಯ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿಯವರು "ಸಮಾಜ ಸೇವೆಯೇ ಭೈರವಪೂಜೆ" ಎಂದು ಭಾವಿಸಿದರು. ಅದಕ್ಕೆ ತಕ್ಕಂತೆ ನಡೆದುಕೊಂಡು ಬರುತ್ತಿರುವರು. "ಮಠಗಳಿರುವುದು ಗುರುಗಳಿಗಲ್ಲ, ಜನರಿಗೆ" ಎಂಬ ಅವರ ಮಾತುಗಳಿಂದ ಮಠ- ಸಮಾಜದ ನಡುವೆ ಇರಬೇಕಾದ ಸೌಹಾರ್ದ ಸಂಬಂಧವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ಇಲ್ಲಿಯವರೆಗೆ ಎಪ್ಪತ್ತುಮಂದಿ ಪೀಠಾಧಿಕಾರಿಗಳಿದ್ದ ದಾಖಲೆ ಇರುವ ಆದಿಚುಂಚನಗಿರಿ ಮಠಕ್ಕೆ "ಒಕ್ಕಲಿಗರೇ ಪೀಠಾಧಿಕಾರಿಗಳಾಗಬೇಕೆಂಬ ನಿಯಮವಿದ್ದರೂ" ಅನ್ಯಮತಸ್ಥರೂ ಪೀಠಾಧ್ಯಕ್ಷರಾದ ನಿದರ್ಶನಗಳಿವೆ. ನಾಥ ಪಂಥದ ಜಾತ್ಯಾತೀತತೆಗೆ ಇದು ಸಾಕ್ಷಿಯಾದರೂ ಚುಂಚನಗಿರಿ ಮಠ ಒಕ್ಕಲಿಗರ ಮಠ ಎಂದೇ ಪ್ರಖ್ಯಾತಿ ಹೊಂದಿ ಇದು ಒಕ್ಕಲಿಗರ ಮಠವೇ ಹೌದು ಎಂಬುದಕ್ಕೆ ಅರವತ್ತೇಳನೇ ಪೀಠಾಧಿಪತಿಗಳಾಗಿದ್ದ ಶ್ರೀ ತೇಜೋನಾಥರು ೧೯೭೪ರಲ್ಲಿ ತಾವು ಶಿವೈಕ್ಯರಾಗುವ ಮೊದಲು ತಮ್ಮ ಉತ್ತರಾಧಿಕಾರಿಯ ಆಯ್ಕೆ ಕುರಿತು ಹೇಳವಾಗ " ಒಕ್ಕಲಿಗರೇ ಆದಿಚುಂಚನಗಿರಿ ಮಠದ ನಿಜವಾದ ವಾರಸುದಾರರು" ಎಂದು ಹೇಳಿದ ದಾಖಲೆಗಳಿವೆ.

ನಾಥ ಪಂಥದ ಆರಾಧ್ಯ ದೈವ ಶ್ರೀ ಕಾಲಭೈರವೇಶ್ವರ. ಆದಿ ಚುಂಚನಗಿರಿಯಲ್ಲೂ ಭೈರವೇಶ್ವರನಿಗೆ ಪ್ರಥಮ ಪ್ರಾಶಸ್ತ್ಯ. 'ಬಯಲು ಹೊಲಗಳ ಯಜಮಾನ'ನಾದ ಭೈರವನಿಗೆ ಕೃಷಿಕರೇ ಪ್ರಧಾನವಾಗಿ ಭಕ್ತರು. ಭೈರವೇಶ್ವರ ಮತ್ತು ಚುಂಚನಗಿರಿಯ ಬಗ್ಗೆ ವಿವಿಧ ಪುರಾಣಗಳಲ್ಲಿ ಉಲ್ಲೇಖಗಳಿವೆ. ಮನುಷ್ಯನ ಅಮೂರ್ತ ಭಾವನೆಗಳ ಮೂರ್ತ ರೂಪದ ಬೆಳವಣಿಗೆಯ ಒಂದು ಘಟ್ಟವಾಗಿರುವ ಪುರಾಣಗಳಲ್ಲಿ ಭೈರವೋತ್ಪತ್ತಿಯ ಕಾರಣಗಳನ್ನು ವೀಕ್ಷಿಸಿದಾಗ ಅನ್ಯಾಯ, ಅಧರ್ಮ, ಅಸಮಾನತೆಗಳ ವಿರುದ್ಧದ ಹೋರಾಟವೇ ಕಾಣಬರುತ್ತವೆ. 'ಆದಿಚುಂಚನಗಿರಿ ಸ್ಥಳ ಮಹಾತ್ಮೆ' ಸ್ಥಳೀಯ ಐತಿಹ್ಯವನ್ನುಳ್ಳ ಜನಾಂಗ ಪುರಾಣ. ಇದಲ್ಲದೆ ಸಂಚಾರಿ ಐತಿಹ್ಯ ಇನ್ನಿತರ ಪುರಾಣಗಳಲ್ಲೂ ಸಿಗುವ ಭೈರವೇಶ್ವರನ ಹಾಗೂ ಚುಂಚನಗಿರಿಯ ಕುರಿತಾದ ಮಾಹಿತಿಗಳು ಸ್ವಾರಸ್ಯಕರವಾಗಿವೆ.

***ಪೌರಾಣಿಕ ವಿವರಣೆ*:**

ವೇದಕಾಲೀನ ಸಂಸ್ಕೃತಿಯ ನಂತರದ ರಾಮಾಯಣ, ಮಹಾಭಾರತಗಳ ಅವಧಿಯನ್ನು ಪೌರಾಣಿಕ ಸಂಸ್ಕೃತಿಯ ಕಾಲ ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ಆದಿಚುಂಚನಗಿರಿಗೂ ಕ್ರಮೇಣ ಶ್ರೀ ರಾಮ ಹಾಗೂ ಅರ್ಜುನರ ಆಗಮನವಾಗಿದ್ದು ಶ್ರೀಕ್ಷೇತ್ರಕ್ಕೆ ಸಂಬಂಧಿಸಿದ ಘಟನೆಗಳು ಇವರಿಬ್ಬರೊಂದಿಗೆ ತಳುಕು ಹಾಕಿಕೊಂಡಿವೆ. ಶಿವ ಮತ್ತು ಶ್ರೀರಾಮರ ಭೇಟಿಯ ಪ್ರಸಂಗದಲ್ಲಿ ಶೈವ ವೈಷ್ಣವ ಧರ್ಮಗಳ ಮುಖಾಮುಖಿಯನ್ನು ಮತ್ತು ಅರ್ಜುನ ಜೋಗಿಯಾಗಿ ಭೈರವನಿಗೆ ನಡೆದುಕೊಂಡ ಕತೆಯಲ್ಲಿ ಜೋಗಿ ದೀಕ್ಷೆಯ ಹಿರಿಮೆ, ಹಳಮೆಗಳನ್ನು ಕಾಣುತ್ತೇವೆ.

'ಸ್ಕಂದ ಪುರಾಣ'ದ ಪ್ರಕಾರ ಲೋಪಮುದ್ರೆಯನ್ನು ಶಿವ ನೋಡಿದನೆಂದು ಮುನಿದ ಶಿವೆಗೆ ತಾನು ನಿರ್ಮಾಯ,ಕಾಮಾರಿ ಎಂದು ತೋರಿಸಲು ಚುಂಚನಗಿರಿಯಲ್ಲಿ ತಪಸ್ಸಿಗೆ ತೊಡಗಿದನಂತೆ. ನಂತರ ತನ್ನ ಯೋಗಶಕ್ತಿಯಿಂದ ಕಮಂಡಲದಲ್ಲಿ ಸಿದ್ಧಯೋಗಿಯನ್ನು ಸೃಷ್ಟಿಸಿ ತಾನು ಪಂಚರೂಪಿಯಾಗಿ ನೆಲೆ ನಿಂತನಂತೆ. ಆ ಸಿದ್ಧ ಯೋಗಿಯೇ ಆದಿ ಚುಂಚನಗಿರಿಯ ಸಿದ್ಧ ಸಿಂಹಾಸನದ ಪ್ರಥಮ ಪೀಠಾಧಿಕಾರಿ ಎಂಬ ಸಂಗತಿಯೊಂದಿಗೆ ಪ್ರಜಾಪೀಡಕರಾಗಿದ್ದ ಕಂಚ ಚುಂಚರನ್ನು ಸಿದ್ಧಯೋಗಿ ತನ್ನ ಯೋಗಶಕ್ತಿಯಿಂದ ನಿಯಂತ್ರಿಸಿದನೆಂದು 'ಆದಿಚುಂಚನಗಿರಿ ಸ್ಥಳ ಮಹಾತ್ಮೆ' ತಿಳಿಸುತ್ತದೆ. ಇದರಿಂದ ಸಿದ್ಧ ಪೀಠದ ಗುರಿ ಲೋಕ ಕಲ್ಯಾಣವೆಂಬುದು ಸ್ಪಷ್ಟವಾಗುತ್ತದೆ.

'ಶಂಕರ ಸಂಹಿತೆ'ಯಲ್ಲಿ ಪ್ರತಿಪಾದಿತವಾಗಿರುವುದೇನೆಂದರೆ, ತ್ರಿಮೂರ್ತಿಗಳಲ್ಲಿ ಶಿವನೇ ಜಗತ್ಕರ್ತನೆಂದು ವಿಷ್ಣಾದಿ ದೇವತೆಗಳೆಲ್ಲರೂ ಒಪ್ಪಿದರೂ ಬ್ರಹ್ಮ ಮಾತ್ರ ಅದನ್ನೊಪ್ಪದೆ ತಾನೇ ಶ್ರೇಷ್ಠನೆಂದು ಅಹಂಕಾರದಿಂದ ವರ್ತಿಸಿದಾಗ ಅವನ ಅಹಂಕಾರ ದಮನಕ್ಕೆಂದೇ ಈಶ್ವರನು ಭೈರವನನ್ನು ಸೃಷ್ಟಿಸುತ್ತಾನೆ. ಭೀಷಣ ರೂಪಿಯಾದ ಆತ ಭೀಕರವಾಗಿ ಸದ್ದು ಮಾಡುವವನು ಕಿರುಚುತ್ತಾ ಬ್ರಹ್ಮನ ಶಿರವನ್ನು ಭೇದಿಸಿದಾಗ ಧಾರಾಕಾರವಾಗಿ ರಕ್ತ ಸುರಿದು ಮೂರ್ಛೆ ಹೊಂದುತ್ತಾನೆ. ಬ್ರಹ್ಮನಿಗೆ ಪ್ರಜ್ಞೆ ಬಂದ ನಂತರ ತನ್ನ ತಪ್ಪಿಗೆ ಪಾಶ್ಚಾತ್ತಾಪಪಟ್ಟು ಶಿವನ ಕ್ಷಮೆ ಯಾಚಿಸುತ್ತಾನೆ. ತನ್ನ ರುಂಡವನ್ನು ಭೈರವ ಸದಾಕಾಲ ಧರಿಸಬೇಕೆಂದೂ, ತನ್ನ ಕಪಾಲವನ್ನೇ ಭಿಕ್ಷಾಪಾತ್ರೆಯಾಗಿ ಹಿಡಿದು ರಕ್ತಭಿಕ್ಷೆ ಸ್ವೀಕರಿಸಬೇಕೆಂದೂ ಕೋರುತ್ತಾನೆ.

ಸನಾತನ ಧರ್ಮದಲ್ಲಿ ಮೊದಲು ಹೊರಬಂದ ವರ್ಗವೇ ನಾಥ ಪಂಥ, ಮಠಗಳಿರುವುದು ಗುರುಗಳಿಗಲ್ಲ, ಜನರೋದ್ಧಾರಕೆ ಬೇಕು ಮಠಗಳು.

ಇಲ್ಲಿ ವೈದಿಕ-ಅವೈದಿಕ ಧರ್ಮಗಳೊಂದಿಗಿನ ಸೆಣಸಾಟ, ಏಕವ್ರಾತ್ಯನೆಂದೇ ಹೆಸರಾದ ಶಿವನ ಪ್ರಾಬಲ್ಯ ಹಾಗೂ ಜೋಗಿ ದೀಕ್ಷೆಯ ಸಂದರ್ಭದಲ್ಲಿ ರಕ್ತ ಬರುವವರೆಗೆ ದೀಕ್ಷೆ ಪಡೆಯುವ ವಟುವಿನ ಕಿವಿಚುಚ್ಚುವ ಆಚರಣೆಗಳನ್ನು ಗುರುತಿಸಬಹುದಾಗಿದೆ.

'ಭೈರವೇಶ್ವರನು ಪರಶಿವನ ಅವತಾರವಲ್ಲದೆ ಬೇರೆ ಅಲ್ಲ'ಎಂಬ ಮಾತು ಶಿವಪುರಾಣದ 'ಶತರುದ್ರ ಸಂಹಿತೆ'ಯಲ್ಲಿ ಬರುತ್ತದೆ. ಶಿವನ ಶರಭರೂಪಿಯಾದ ಶರೀರ ಮಾಧ್ಯಮದಿಂದ ಭೈರವ ಅವತರಿಸಿದನೆಂದು 'ಮಾರ್ಕಂಡೇಯ ಪುರಾಣ'ದ ಮಾತು.

ಬ್ರಹ್ಮ ತನ್ನ ಮಗಳಾದ ಶಾರದೆಯನ್ನೇ ಮೋಹಿಸಿ ಬೆನ್ನಟ್ಟಿದಾಗ ವ್ಯಗ್ರಳಾದ ಶಾರದೆ, ನಿನಗೆ ಐದು ಮುಖಗಳ ಬದಲು ನಾಲ್ಕು ಮುಖಗಳಿರುವುದೇ ಲೇಸು ಎಂದು ಮಾಯವಾದಳಂತೆ. ಆಗ ಬ್ರಹ್ಮನ ಮೋಹಾಗ್ನಿ ಕ್ರೋಧಾಗ್ನಿಯಾಗಿ ಭುಗಿಲಾದಾಗ ಶಿವನ ಅಣತಿಯಂತೆ ಭೈರವ ಮೈದೊರಿ ಬ್ರಹ್ಮನ ಒಂದು ಶಿರವನ್ನು ಕತ್ತರಿಸಿದನಂತೆ. ಭಯಗೊಂಡ ಬ್ರಹ್ಮ ಭೈರವವನ್ನು ಸ್ತುತಿಸಿ ಶಾಂತಗೊಳಿಸಿದಾಗ 'ಸತ್ಕಾರ್ಯದಲ್ಲಿ ತೊಡಗು' ಎಂದು ಭೈರವ ಆದೇಶಿಸಿದನಂತೆ. ಅಂದಿನಿಂದ ನಾಲ್ಕು ವೇದಗಳ ಪ್ರತೀಕವಾಗಿ ಬ್ರಹ್ಮನಿಗೆ ನಾಲ್ಕು ಶಿರಗಳಿದ್ದ ಸಂಗತಿ 'ಭವಿಷ್ಯ ಮಹಾಪುರಾಣ'ದ್ದಾಗಿದೆ.

ಬ್ರಹ್ಮನ ಅನೈತಿಕತೆಯನ್ನು ಖಂಡಿಸಿ ನೈತಿಕತೆಗೆ ಒತ್ತು ಕೊಟ್ಟನಾಥ ಪಂಥದ ನಿಲುವು ಇಲ್ಲಿ ಇಣುಕಿದೆ. ಬ್ರಹ್ಮನ ಅಹಂ ಅನ್ನು ಮುರಿದವನೆ ಭೈರವ. 'ವಾಮನಪುರಾಣ'ದ ಎಪ್ಪತ್ತನೇ ಅಧ್ಯಾಯದಲ್ಲಿ ಬರುವಂತೆ ಶಿವ ಮತ್ತು ಅಂಧಕಾಸುರನ ಸೆಣಸಾಟದಲ್ಲಿ ಅಂಧಕಾಸುರನ ಗದೆ ಶಿವನ ತಲೆಗೆ ತಗುಲಿ ರಕ್ತ ಸುರಿದು ಎಂಟು ಕವಲಾದಾಗ ಅಷ್ಟಭೈರವರು ಸೃಷ್ಟಿಗೊಂಡು ಅಂಧಕಾಸುರನನ್ನು ವಧಿಸಿದರಂತೆ. ಶಿವನ ರಕ್ತದಿಂದಲೇ ರೂಪ ತಳೆದ ಅಷ್ಟ ಭೈರವರೆಂದರೆ -ಆಧಿ ಭೈರವ, ಕಪಾಲ ಭೈರವ, ಗುರು ಭೈರವ, ಕ್ರೋಧ ಭೈರವ, ಚಂಡ ಭೈರವ, ಉನ್ಮತ್ತ ಭೈರವ, ಭೀಷಣ ಭೈರವ, ಸಾತ್ವಿಕಭೈರವ. ನಂತರ ಕಡು ಉಗ್ರನಾದ ಆದಿಭೈರವನನ್ನು ಎಲ್ಲರೂ ಸ್ತುತಿಸಿದರಂತೆ. ಇಲ್ಲಿಯೂ ದುಷ್ಟ ಸಂಹಾರ ನಿಮಿತ್ತವೇ ಭೈರವ ಅವತಾರವಾಯಿತೆಂಬ ತತ್ವವಿದೆ. ಹಿಂದೂಗಳ ಪವಿತ್ರ ಕ್ಷೇತ್ರವಾದ ಕಾಶಿಯ ಕ್ಷೇತ್ರಪಾಲಕನಾದ ಕಾಲಭೈರವೇಶ್ವರ ಖೂಳರನ್ನು ನಾಶ ಮಾಡಿ, ಧರ್ಮವನ್ನು ಸಂರಕ್ಷಿಸುವ 'ಧರ್ಮದೇವತೆ'ಯೆಂದೇ ಪ್ರಸಿದ್ಧ. ಕ್ರಿ. ಶ. ಎಂಟನೇ ಶತಮಾನದ ಆದಿಶಂಕರಾಚಾರ್ಯ ವಿರಚಿತ 'ಭೈರವಾಷ್ಟಕ'ದಲ್ಲಿ ವ್ಯಕ್ತವಾದ ಭೈರವ ಲೀಲಾ ವಿಶೇಷಗಳಲ್ಲಿ ಈ ಅಂಶವೇ ಧ್ವನಿಸುತ್ತದೆ.

ಭೈರವನ ಸ್ವರೂಪ ವರ್ಣನೆ 'ವಿಷ್ಣು ಧರ್ಮೋತ್ತರ ಪುರಾಣ'ದಲ್ಲಿ ವಿವರವಾಗಿದೆ. ಪಿಂಗಲನೇತ್ರ, ಕಟವಾಯಿಯಲ್ಲಿ ಕೋರೆದಾಡೆಗಳು, ಕೋಪದಿಂದ ಹೊಳ್ಳೆಗಳು ಅರಳಿದ ನಾಸಿಕ, ಸ್ಥೂಲೋದರ, ರುಂಡಮಾಲಾ ಧರ, ಸರ್ಪಭೂಷಣ, ಕೃಷ್ಣವರ್ಣ, ಗಜಚರ್ಯಾಂಬರಧಾರಿ, ಶೃಂಗ, ತ್ರಿಶೂಲ ಮೊದಲಾದ ಆಯುಧಗಳನ್ನು ಹಿಡಿದ ತಾಳ ವೃಕ್ಷದಂತೆ ನೀಳಬಾಹುಗಳನ್ನು ಹೊಂದಿದ್ದ ಕೈಗಳಲ್ಲಿ ಹರಿತ ನಖಗಳಿದ್ದ ಭೈರವ ಎದುರಿನಿಂದ ಮಹಾಕಾಲರೂಪಿಯಾಗಿದ್ದು ಎರಡು ಕೈಗಳಲ್ಲಿ ದಂಡ ಮತ್ತು ಮಾದಲ ಫಲಕವನ್ನು ಹಿಡಿದಿದ್ದಾನೆ. ದಂಡ ಮೃತ್ಯುವಿಗೆ, ಮಾದಲ ಫಲ ಸೃಷ್ಟಿಗೆ ಸಂಕೇತವಾಗಿದ್ದು, ಭೈರವ ಸೃಷ್ಟಿ-ಲಯಗಳ ಕಾರಣಕರ್ತನೆಂಬುದನ್ನು ಇದು ಸೂಚಿಸುತ್ತದೆ. ಭೈರವೇಶ್ವರನ ಎಡಪಕ್ಕ ಪಾರ್ವತಿ ಇರಬೇಕು, ಎದುರು ಇರಬಾರದು. ಅವಳ ಕೈಯಲ್ಲಿ ಸರ್ಪವಿರಬೇಕು. ಆಕೆ ಕೆಂಪಾಗಿಯೂ, ಬಿಳುಪಾಗಿಯೂ ಇರಬಾರದು. ಮಾತೃಗಣ ಹಾಗೂ ಅನೇಕ ರೂಪಿಗಣಗಳನ್ನು ಪರಿಜನ ವರ್ಗದಲ್ಲಿ ಚಿತ್ರಿಸಬೇಕು ಎಂಬುದಾಗಿ ಶಾಸ್ತ್ರೀಯ ವರ್ಣನೆಯಿದೆ.

ಈ ಎಲ್ಲಾ ಪುರಾಣ ಸಂಗತಿಗಳಿಂದ ಸ್ಪುಟಗೊಳ್ಳುವ ಪ್ರಮುಖ ಅಂಶಗಳೆಂದರೆ :

೧.ಬ್ರಹ್ಮನ ಗರ್ವಭಂಗದ ಮುಖ್ಯ ಉದ್ದೇಶವೇ ಭೈರವಾವತಾರದ ಮೂಲ, (ನಾಥಪಂಥ ಅವೈದಿಕ ಭಕ್ತಿ ಚಳುವಳಿ)

೨.ವಿಷ್ಣುವೂ ಭೈರವನಿಗೆ ಮಣಿದದ್ದು (ಶಿವಪಾರಮ್ಯದ ಸಂಕೇತ)

೩.ಲೋಪಾಮುದ್ರೆ ಪ್ರಸಂಗದಲ್ಲಿ ಯೋಗಸಿದ್ಧಿಯಿಂದ ಮಾಯೆಯನ್ನು ಗೆಲ್ಲಬಹುದೆಂಬ ಅಂಶ. (ನಾಥ ಪಂಥದಲ್ಲಿ ಬ್ರಹ್ಮ ಚರ್ಯಕ್ಕೆ, ಯೋಗಕ್ಕೆ ದೊರೆತ ಪ್ರಾಮುಖ್ಯ)

೪.ದುಷ್ಟ ಶಿಕ್ಷಕ ಶಿಷ್ಟ ರಕ್ಷಕನಾದ ಭೈರವ ದೇವತೆ.

೫.ಮಹೇಶ್ವರನ ಪರ್ಯಾಯ ರೂಪವೇ ಭೈರವ. ಆದಿರುದ್ರನಾದ ಇವನ ಪತ್ನಿ ಪಾವತಿ (ಸ್ಥಂಬಾಂಬೆ>ಕಂಬದಮ್ಮ) ಪ್ರೇಯಸಿ ಗಂಗೆ ಮಾಳಮ್ಮ. ಆದಿಚುಂಚನಗಿರಿ ಸ್ಥಳ ಮಹಾತ್ಮ್ಯದಲ್ಲಿ ನಾಥ ಪೀಠಾಧಿಪತಿಗಳು ಶಿಷ್ಯರಿಗೆ ನೀಡುತ್ತಿದ್ದ ನಾಥ ದೀಕ್ಷಾ ವಿಧಾನವನ್ನು ಋಷ್ಯಶೃಂಗನಿಗೆದೂರ್ವಾಸ ಮುನಿ ಹೇಳಿದಂತೆ ತಿಳಿಸಲಾಗಿದೆ. ಅದರ ಪ್ರಕಾರ ಶಿಷ್ಯನಿಗೆ ದೀಕ್ಷೆ ನೀಡುವ ಮಠಾಧಿಪತಿಯು ನದೀ ಸ್ನಾನದಿಂದ ಶುಭ್ರನಾಗಿ ಭೈರವ ಸ್ವರೂಪನಾದ ಶಿವನನ್ನು ಭಕ್ತಿಯಿಂದ ಪೂಜಿಸಬೇಕು. ಗೋಮಯದಿಂದ ಶುಭ್ರಗೊಳಿಸಿದ ಸ್ಥಳದ ಮಧ್ಯದಲ್ಲಿ ಒಂದು ಕಲಶ, ನಾಲ್ಕು ದಿಕ್ಕುಗಳಿಗೆ ನಾಲ್ಕು ಕಲಶಗಳನ್ನಿರಿಸಬೇಕು. ಮಧ್ಯದ ಕಲಶ ಬ್ರಹ್ಮನಿಗೆ, ಪೂರ್ವ ದಿಕ್ಕಿನ ಕಲಶ ಇಂದ್ರನಿಗೆ, ದಕ್ಷಿಣ ದಿಕ್ಕಿನ ಕಲಶ ಯಮನಿಗೆ ಹಾಗೂ ಪಶ್ಚಿಮದ್ದು ವರುಣನಿಗೆ, ಉತ್ತರ ದಿಕ್ಕಿನದು ಕುಬೇರ ಮತ್ತು ಚಂದ್ರನಿಗೆ ಪ್ರತೀಕವಾಗಿದೆ. ಜೋಗಿ ದೀಕ್ಷೆಯ ಜಾನಪದೀಯ ವಿವರದಲ್ಲಿ ಬ್ರಹ್ಮ ಕಲಶ ಹಾಗೂ ದಿಕ್ಪಾಲಕರ ಕಲಶವಿರುವುದಿಲ್ಲ. ಬದಲಾಗಿ ಶಿವನ ಪ್ರತೀಕವಾಗಿ ತ್ರಿಶೂಲ ಹಾಗೂ ಶಕ್ತಿಯ ಪ್ರತೀಕವಾಗಿ ಕಲಶ ಪೂಜೆಯಿರುತ್ತದೆ. ಆಗಮೋಕ್ತ ದೀಕ್ಷೆಯಲ್ಲಿ ವೈದಿಕ ಪ್ರಭಾವವಿದ್ದರೆ ಜಾನಪದದಲ್ಲಿ ದೇಸಿ ಆಚರಣೆಗಳೊಂದಿಗೆ ನಾಥ ಪಂಥದ ನಾಡಿ ಮಿಡಿತವಾದ ಶಿವ -ಶಕ್ತಿಯರ ಒಕ್ಕೂಟ ಪೂಜೆಯನ್ನು ಗುರುತಿಸಬಹುದಾಗಿದೆ.

ಕಿವಿ ಚುಚ್ಚುವುದು ಜ್ಞಾನೇಂದ್ರಿಯಗಳನ್ನು ಉದ್ದೀಪಿಸುವ ವೈಜ್ಞಾನಿಕ ರೀತಿ. ಸನ್ಯಾಸ ದೀಕ್ಷೆ ಸನ್ಯಾಸಿಯಾದವನಿಗೆ ಮರು ಹುಟ್ಟನಂತೆ. ಅದರ ಕುರುಹಾಗಿ ಗುರುವಿನಿಂದ ಶಿಷ್ಯನಿಗೆ ಹೊಸ ಉಡುಗೆ ತೊಡುಗೆಗಳ ಸಂದಾಯವಿರುತ್ತದೆ.

ಜಾನಪದದಲ್ಲಿ ಭೈರವ ಪಂಥ ಜನಮನದ ಹಾಡಾಗಿ, ಭಕ್ತಿಯ ಹೊನಲಾಗಿ, ಆತ್ಮೀಯತೆಯ ಕಂಪಾಗಿ ಹರಿದು ಹರಡಿದೆ. ಜಾನಪದೀಯ ನೆಲೆಗಟ್ಟಿನಲ್ಲಿ ಶ್ರೀ ಕ್ಷೇತ್ರದ ಹಾಗೂ ಭೈರವೇಶ್ವರನ ವರ್ಣನೆ ತನಿಬನಿಯಾಗಿ ಮೂಡಿಬಂದಿದೆ.

ಜಾನಪದೀಯ ನಂಬಿಕೆಗಳ ಹಿನ್ನಲೆಯಲ್ಲಿ ಶ್ರೀ ಕ್ಷೇತ್ರ.

ಜನಪದ ಸಾಹಿತ್ಯವೆಂದರೆ ಕಂಠಸ್ಥ ಪರಂಪರೆಯ ಅಲಿಖಿತ ಶಾಸನಗಳು. ಒಂದು ನಾಡಿನ ಪ್ರಾಮಾಣಿಕವಾದ ಸಾಂಸ್ಕೃತಿಕ ಚರಿತ್ರೆಗೆ ಬೇಕಾದ ಸಾಮಾಗ್ರಿಗಳನ್ನು ಜನಪದದಿಂದ ಧಾರಾಳವಾಗಿ ಪಡೆಯಬಹುದಾಗಿದೆ. ಜನಪದದ ಧಾರ್ಮಿಕತೆಯ ನೆಲೆ ಇರುವುದೇ ನಂಬಿಕೆಗಳ ಆಚರಣೆಯಲ್ಲಿ. ಹಾಗಾಗಿ ಅವರ ಯಾವುದೇ ನಂಬಿಕೆಯ, ಆಚರಣೆಯ ಹಿಂದೆ ಒಂದು ಸ್ಪಷ್ಟವಾದ ಉದ್ದೇಶ, ಮಹತ್ವದ ತತ್ವ ಇದ್ದೇ ಇರುವುದು.

'ಅಲೌಕಿಕ ಶಕ್ತಿಗಳ ಬಗ್ಗೆ ವಿಸ್ಮಿತಗೊಂಡ ಮಾನವನ ಮನಸ್ಸು ಅವುಗಳ ರಹಸ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಉಂಟಾದ ಅನುಭವಗಳೇ ಧಾರ್ಮಿಕ ಹಾಡಾಯಿತು' ಎಂದು ಜಾನಪದ ತಜ್ಞರಾದ ಸಿ. ಎಂ. ಬೌರ ಅವರು ಹೇಳಿದ್ದಾರೆ. ಗುರುರೂಪಿ, ಚೇಳೂರ ಕಂಬದಯ್ಯ, ಅಂದಾನಿ ಭೈರುವ 'ಎಲ್ಲವನೆಲ್ಲವನೆಂದು' ಹುಡುಕುತ್ತಾ 'ನಾಗಮಂದಲದಾಚೆ ಬೆಳ್ಳೂರ ಬಯಲಾಚೆಯ ಚುಂಚನಗಿರಿಯಲ್ಲಿ ದೊರೆತನ ಮಾಡುವ ಭೈರವ'ನನ್ನು ಕಾಣುತ್ತಾನೆ. ಆತನಾದರೋ 'ಚುಂಚನಕಟ್ಟೆಯಿಂದ ಬಡಗಲ ಸೀಮೀಂದ ಬಂದ ಪಂಚಮುಖದ ದೋರುಗೆಂಪಿನ ಪರದೇಸಿ' 'ಅಗ್ರಾರಕ್ಕಿಂತ ಲೇಸೆಂದು 'ಚುಂಚನಗಿರಿಯಲ್ಲಿ ನೆಲೆ ನಿಂತ ಸ್ವಾಮಿಗೆ ಸಿರಿಮಠ ಕಟ್ಟಲು ಬಯಸಿದ ಭಕ್ತರು ಅಂದ ಚೆಂದದ ಚುಂಚನಗಿರಿಯಲ್ಲಿ ಆಧಿಭೈರವನನ್ನು ನೆಲೆಗೊಳಿಸುತ್ತಾರೆ.

'ತೇರು ಕರಿಯ ತೇರು ಯಾರ‍್ಯಾರು ನೂಕಿದ್ರೂ ಮುಲಕದ ತೇರನ್ನು ' ಭಕ್ತಿಯಿಂದ ಎಳೆದು ಸಂಭ್ರಮದಿಂದ ನಲಿಯುತ್ತಾರೆ. 'ಭರ್ಜರಿ ತೇರಿನ ಅಂದಗಾರ ಭೈರುವ'ನಿಗೆ ಕುಟ್ಟಕ್ಕಿ, ಸಣ್ಣಕ್ಕಿ ಹೇರಹೊಡಕೊಂಡು ಅಡ್ಡೇರಿ ಜೇನುತುಪ್ಪ ಹೆಡಗೇಲಿ ಹಣ್ಣುಕಾಯಿ ಹೊತ್ಕೊಂಡು ಬಂದು ಸಮೃದ್ಧ ಕಾಣಿಕೆ ನೀಡಿ ಸಂತೃಪ್ತರಾಗುತ್ತಾರೆ. ಬೆಟ್ಟದ ಭೈರುವ, ಚುಂಚನಗಿರಿ ಭೈರುವ,

ಬ್ರಹ್ಮನ (ಬ್ರಾಹ್ಮಣ) ಐದನೆ ತಲೆ ಅಹಂಕಾರಿಮಯ. ಅದನ್ನು ತರಿದವನೇ ಭೈರವ, ಭೈರವ ನಾಥ - ಶಿವ ಎಲ್ಲಾ ಒಂದೆ.

ಅಂದಾನಿ ಭೈರುವ, ಮನೆಸ್ವಾಮಿ ಭೈರುವ, ಬಾಗಿಲು ಭೈರುವ ಎಂದೆಲ್ಲಾ ಜನಪದದಿಂದ ಕರೆಸಿಕೊಂಡ ಭೈರವೇಶ್ವರ ಗುರುವಾಗಿ, ಮದಲಿಂಗನಾಗಿ, ಅಣ್ಣನಾಗಿ ಭಕ್ತರನ್ನು ತಣಿಸಿ ಅವರ ಪಾಲಿನ ನೆಂಟನೂ ಆಗಿದ್ದಾನೆ.

ಚುಂಚಾನಗಿರಿಯಾಗೆ ನಮಗಾರೆ ನೆಂಟರು
ಭೈರುವ ಸ್ವಾಮಿ ದೊಡ್ಡಣ್ಣ ಇರುವಾಗ
ನಾನು ಇನ್ನೊಂದು ಇರುಳು ಇರುವೇನು

ಎನ್ನುವಲ್ಲಿ ದೇವರನ್ನು ಆತ್ಮೀಯವಾಗಿ ಕಂಡ ಭಕ್ತಿಭಾವ, ಸ್ನೇಹ ಸಲಿಗೆಗಳು ವ್ಯಕ್ತವಾಗಿದೆ. ಇಂತಹ ಅನೇಕ ತ್ರಿಪದಿಗಳಲ್ಲಿ ಭೈರವೇಶ್ವರನ ಲೀಲಾ ಮಹಿಮೆಗಳು ಸಹಜ ಸುಂದರವಾಗಿ ಹೆಪ್ಪುಗಟ್ಟಿವೆ.

ಬ್ರಹ್ಮ ಹತ್ಯಾದೋಷದಿಂದ ಭೂಮಿಗೆ ಬಂದ ಭೈರುವ ಸೇದಿ ಬಿಟ್ಟ ಭಂಗಿಯ ಹೊಗೆಯಿಂದ ಗರ್ಭಿಣಿಯಾದ ಲಕ್ಷ್ಮೀ ಭೈರವನ ಬಳಿ ಬಂದು ವಿಷಯ ತಿಳಿಸಿ 'ಪ್ರೀತಿಗೆ ಪತಿಬೇಕು, ಸೇವ್ಯಕೆ ಸತಿ ಬೇಕು' ಎಂದಾಗ ಭೈರವ 'ನೀನಾರೋ ನಾನಾರೋ....ಜೋಗಿಗು, ರೋಗಿಗು ಹೆಂಡತಿ ಯಾಕಮ್ಮಾ......ಬಂದ ದಾರಿಲೆ ಹಿಂದಕೆ ಹೋಗು.....' ಎಂದು ಬಿಡುತ್ತಾನೆ. ಅವಳು ದುಃಖ, ಕೋಪಗಳಿಂದ ತನ್ನ ಅಣ್ಣ ಚುಂಚನಹತ್ತಿರ ಹೋಗಿ ಇದನ್ನು ತಿಳಿಸಿದಾಗ ಪ್ರೀತಿಯ ತಂಗಿಗೆ ಅಪಮಾನಿಸಿದ ಭೈರುವನಿಗೆ ಬುದ್ಧಿ ಕಲಿಸಲು ಬರುತ್ತಾನೆ.

ಪರಾಕ್ರಮಿಯೂ, ಮೃಗದೇಹಿಯೂ ಆತ ಚುಂಚ ಭೈರವನ ಭಕ್ತ, ಹೋರಾಟದಲ್ಲಿ ಚುಂಚನ ಕೋಡನ್ನು ಭೈರವ ಮುರಿದಾಗ ಈತ ತನ್ನ ಆರಾಧ್ಯ ದೈವ ಭೈರವನೇ ಎಂದು ಭಕ್ತಿಯಿಂದ ಚುಂಚ ಮಣಿಯುತ್ತಾನೆ. ಇಲ್ಲಿ ಭೈರವನ ಆಧೀನತೆಗೆ ಚುಂಚ ಒಳಗಾದ ಚಿತ್ರಣವನ್ನೇ ಗುರುತಿಸುತ್ತೇವೆ.

ಚುಂಚ ತನ್ನ ಸ್ವಾಮಿಗೆ ತಟ್ಟಿದ ಬ್ರಹ್ಮ ಕಪಾಲ ಬಾಧೆಯನ್ನು ನಿವಾರಿಸಲು ಶ್ವಾನ ರೂಪವನ್ನು ತಾಳಿ ಬ್ರಹ್ಮ ಕಪಾಲಕ್ಕೆ ಬಾಯಿ ಹಾಕಲು ಬಂದಾಗ ಅದು ಹೆದರಿ ಭೈರವನ ಬೆರಳಿನಿಂದ ತಾನೇ ಕಳಚಿ ಬೀಳುತ್ತದೆ. ನೋವು ನಿವಾರಿಸಿದ ಚುಂಚನ ಬಗ್ಗೆ ಸಂಪ್ರೀತನಾದ ಭೈರವ ಮೂರು ವರಗಳನ್ನು ನೀಡುತ್ತಾನೆ. ಆ ಪ್ರಕಾರ ಭೈರವೇಶ್ವರ ಚುಂಚನಗಿರಿಯಲ್ಲೇ ನೆಲೆಸಿ, ಅವನ ತಂಗಿ ಲಕ್ಷ್ಮಿಯನ್ನು ವಿವಾಹವಾಗಿ, ಚುಂಚನಕೊಂಬನ್ನೇ ತನ್ನ ಕೈಯಲ್ಲಿ ಸದಾ ವಾದ್ಯವಾಗಿಟ್ಟುಕೊಳ್ಳುತ್ತಾನೆ.

ಮುಂದೆ ಲಕ್ಷ್ಮೀಯ ಅಕ್ಕ ಗಂಗೆಮಾಳಿಯನ್ನು ಪ್ರೇಮಿಸಿ, ತನ್ನನ್ನು ಒಲ್ಲದೆ ಸೊಕ್ಕಿದ ಅವಳನ್ನು ಚುಂಚನಗಿರಿಗೆ ಹೊತ್ತು ತರುವಲ್ಲಿ ಭೈರವನ ಗಂಡು ರಸಿಕತೆಯನ್ನು ಕಾಣಬಹುದು. ಆದರೆ ತನ್ನ ಅಕ್ಕನನ್ನೇ ಸವತಿಯಾಗಿ ಮನೆ ತುಂಬಿಸಿಕೊಳ್ಳಲು ಇಚ್ಛಿಸದ ಲಕ್ಷ್ಮಿ ಕಂಬದರೂಪ ತಾಳಿ ನಿಲ್ಲುತ್ತಾಳೆ. ಅವಳೇ ಕಂಬದಮ್ಮ, ಸ್ಥಂಬಾಂಬೆ ಎಂದು, ಗಂಗೆ ಮಾಳಮ್ಮಳಾಗಿ ಭೈರವನೊಂದಿಗೆ ಚುಂಚನಗಿರಿಯಲ್ಲಿ ನೆಲೆಸಿದರೆಂದೂ ಕತೆಯಿದೆ. ಈ ಪ್ರಸಂಗದಿಂದ ಭೈರವನೇ ಶಿವ, ಕಂಬದಮ್ಮಳೇ ಪಾರ್ವತಿ, ಮಾಳಮ್ಮನೇ ಗಂಗೆಯೆಂದು ಪರಿಭಾವಿಸಲಾಗಿದೆ.

ಚೋಳರಿಗೂ ಹಾಗೂ ಚೋಳೂರು ಆಳಿದ ಚೋಳೂರಿಗೂ ಪ್ರದೇಶ ಮತ್ತು ಆದಿಚುಂಚನಗಿರಿಗೂ ಇರುವ ನಿಕಟ ಸಂಬಂಧ ಜಾನಪದದಲ್ಲಿ ಕಾಣಿಸಿಕೊಂಡಿದೆ. ಚೋಳರು ಭೈರವನ ಭಕ್ತರಾಗಿದ್ದರೆಂಬುದಕ್ಕೆ ದ್ಯೋತಕವಾಗಿ ಆದಿಚುಂಚನಗಿರಿಯ ತುತ್ತ ತುದಿಯಲ್ಲಿರುವ ಚೋಳೂರ ಕಂಬವೇ ಸಾಕ್ಷಿ.ಬಹು ಹಿಂದೆ ಆ ಕಂಬದ ಮೇಲೆ ಹಚ್ಚಿದ ದೀಪ ಅಲ್ಲಿಂದ ಅನತಿ ದೂರದಲ್ಲಿರುವ ಚೋಳೂರ ಕಲ್ಯಾಣಿಯಲ್ಲಿ ರಥೋತ್ಸವದಂದು ಪ್ರತಿಬಿಂಬಿಸಿದಾಗಲೇ ಚೋಳೂರ ಜನ ಪಾರಣೆ ಮಾಡುತ್ತಿದ್ದರಂತೆ. ಆರಣಿ ರಾಜ, ಅವನ ಮಗ ದೀಪಕ ರಾಜನ ಕತೆಯಲ್ಲಿ ಚುಂಚನಗಿರಿಗೆ ಚೋಳರು ಸಲ್ಲಿಸಿದ ಸೇವೆ, ಭೈರವನ ಮಹಿಮೆ ಹಾಗೂ ಜೋಗಿ ಪದ್ಧತಿ ಹಿರಿಮೆಗಳನ್ನು ಅರಿಯಬಹುದಾಗಿದೆ.

ತಿರುಪತಿ ತಿಮ್ಮಪ್ಪ ಮತ್ತು ಭೈರವನ ಪಗಡೆಯಾಟದ ಪ್ರಸಂಗ, ತಿಮ್ಮಪ್ಪ ಮೋಸದಿಂದ ಭೈರವನನ್ನು ಕೂಡಿ ಹಾಕಿದಾಗ ಅದಕ್ಕೆ ಪ್ರತಿಯಾಗಿ ಭೈರವ ತನ್ನ ಸತ್ವದಿಂದ ತಪ್ಪಿಸಿಕೊಂಡು ತಿಮ್ಮಪ್ಪನ ರಥವನ್ನು ಕದ್ದು ತಂದಿದ್ದು ಶೈವ ವೈಷ್ಣವ ಸಂಘರ್ಷದ ಪ್ರತೀಕವಾಗಿದೆ.

'ಮೂಲಸ್ವಾಮಿ' (ಮಠಾಧಿಪತಿ) ಚರಸ್ವಾಮಿಗಳು (ನಾಲ್ಕು ದಿಕ್ಕುಗಳಿಗೂ ಚರಿಗೆಗೆ ಹೋಗುತ್ತಿದ್ದರು) ಸುಭೇದಾರ (ಜಿಲ್ಲಾ ಮಟ್ಟ) ಚೂರಿದಾರ (ತಾಲ್ಲೂಕು ಮಟ್ಟ) ಪುರುಷಯ್ಯ (ಹೋಬಳಿ) ಜೋಗಯ್ಯ (ಹಳ್ಳಿ) ಜೋಗಯ್ಯನನ್ನು ಪುರುಷಕಾರಿ ಎಂದೂ ಕರೆಯುತ್ತಾರೆ. ಹೀಗೆ ಜೋಗಿ ದೀಕ್ಷೆ ಪಡೆದವರ ಕ್ರಮಬದ್ಧ ಸ್ಥಾನಗಳಿವೆ.

ಸಾಮಾನ್ಯವಾಗಿ ಗುರುಪೂರ್ಣಿಮೆ, ಶಿವರಾತ್ರಿ ಜಾತ್ರೆಗಳಂದು ಗುರುವಾರ ಅಥವಾ ಭಾನುವಾರಗಳಂದು ಶ್ರೀ ಕ್ಷೇತ್ರ ಆದಿಚುಂಚನ ಗಿರಿಯಲ್ಲೊ ಇಲ್ಲವೇ ಅವರವರ ಊರುಗಳಲ್ಲೋ ಮಠಾಧೀಶರಿಂದ ಅಥವಾ ಆಯಾ ಊರಿನ ಜೋಗಪ್ಪರಿಂದ ಜೋಗದೀಕ್ಷೆ ಪಡೆಯುತ್ತಾರೆ. ಜೋಗಿ ದೀಕ್ಷೆಯೂ ಹರಕೆ ರೂಪದಲ್ಲಿದ್ದು ವಂಶ ಪಾರಂಪರ್ಯವಾಗಿರುತ್ತದೆ. ಜೋಗಿಗಳು ಮಠ ಮತ್ತು ಸಮಾಜದ ನಡುವಿನ ಸೇತುವೆಯಂತಿದ್ದು ಭೈರವಾರಾಧಕರೂ, ಧಾರ್ಮಿಕ ಕಿಂಕರರೂ ಆಗಿರುತ್ತಾರೆ. ಗೃಹಸ್ಥಾಶ್ರಮ ಇವರಿಗೆ ನಿಷಿದ್ಧವಲ್ಲ. ಆದರೆ ಸನ್ಯಾಸಿಗಳು ಮಾತ್ರ ಬ್ರಹ್ಮ ಚರ್ಯನಿಷ್ಠ ರಾಗಿರಲೇಬೇಕೆಂಬ ಕಡ್ಡಾಯವಿದೆ. ಮದುವೆ, ಹಬ್ಬ, ಪೂಜೆ, ಹುಟ್ಟು ಸಾವುಗಳ ಆಚರಣೆ, ಧಾರ್ಮಿಕ ಸಂದರ್ಭಗಳಲ್ಲಿ ಜೋಗಪ್ಪ ಮುಂದೆ ನಿಂತು ಎಲ್ಲಾ ಮಾಡಿಸುತ್ತಾನೆ. ಇಂತಲ್ಲೆಲ್ಲಾ ಅವನ ಹಾಜರಿ ಬೇಕೇ ಬೇಕಾಗುತ್ತದೆ ಊರಿನ ಜನರಿಗೆ. ಆದ್ದರಿಂದಲೇ ಜೋಗಪ್ಪ ಗೌರವಕ್ಕೆ ಪಾತ್ರನಾದ ವ್ಯಕ್ತಿ ಆಗಿರುತ್ತಾನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಥ ಸಂಪ್ರದಾಯ ಅಥವಾ ಜೋಗಿ ಸಂಪ್ರದಾಯವನ್ನು 'ಪುರುಷಕಾರಿ ಸಂಸ್ಕೃತಿ' ಎಂದೇ ಕರೆಯುತ್ತಾರೆ. ಸೋಣದ ಜೋಗಿ ಕುಣಿತ ಅಲ್ಲಿನ ಜಾನಪದದ ವೈಶಿಷ್ಟ್ಯ. ಇದನ್ನು ಹೆಚ್ಚಾಗಿ 'ನಲಿಕೆ ಜಾತಿ' ಯವರು ನಡೆಸಿಕೊಂಡು ಬಂದಿದ್ದಾರೆ. ಬ್ರಹ್ಮ ಶಾರದೆಯನ್ನೇ ಮೋಹಿಸಿ ಅಧರ್ಮ ಮಾಡಿದ ತಪ್ಪಿಗೆ ಶಿಕ್ಷೆಯಾಗಿ ಬ್ರಹ್ಮನ ಒಂದು ತಲೆಯನ್ನೇ ಕತ್ತರಿಸಿದಾಗ ಅದು ಅವನ ಕೈಗೇ ಅಂಟಿಕೊಳ್ಳುತ್ತದೆ. ಭಿಕ್ಷಾಟನೆಯಿಂದ ಬ್ರಹ್ಮ ಕಪಾಲ ಕಳಚಿಬಿದ್ದ ನೆನಪಿಗೆ 'ಸೋಣದ ಕುಣಿತ' ಆಚರಿಸುತ್ತಾರೆ. ಭವಿಷ್ಯ ಮಹಾಪುರಾಣದ್ದು ಈ ಕತೆ. ಭೈರವರೂಪಿ ಶಿವ ಶ್ರಾವಣಮಾಸದಲ್ಲಿ ಭಿಕ್ಷೆ ಬೇಡಿದ್ದರಿಂದ 'ಸೋಣ' ಎನ್ನುವ ಹೆಸರೇ ಆ ಕುಣಿತಕ್ಕಾಯಿತು. ಇಲ್ಲಿನ ಮುಖ್ಯಧಾರಿಯೇ 'ಪುರುಷ ಜೋಗಿ'. ಶಿವನ ವೇಷ ಧರಿಸಿದ ಇವರ ಉಪನಾಮ 'ಪುರುಷ' ಎಂದೂ, ಇವರ ಸಂಸ್ಕೃತಿಯೇ 'ಪುರುಷಕಾರಿ ಸಂಸ್ಕೃತಿ' ಎಂದು ಹೆಸರಾಗಿದೆ. ಹಳ್ಳಿಗಳಲ್ಲಿ ನಡೆಯುವ ಜೋಗಿ ದೀಕ್ಷೆಯಲ್ಲಿ ಮಾಡುವ ವಿಶೇಷ ಅಡುಗೆಗೆ (ಹೆಜ್ಜಗಟ್ಟಿ) ಮಾಂಸ, ಭಂಗಿ ಸೊಪ್ಪುಗಳನ್ನು ಬಳಸುವ ಪದ್ಧತಿಯಿದೆ. ಕಾರಣ ಭೈರವ ಮಾಂಸಪ್ರಿಯ, ಮದಿರಾ ಪ್ರಿಯ. ಮಾನವ ತನಗೆ ಇಷ್ಟವಾದುದನ್ನೆಲ್ಲಾ ದೇವರೊಟ್ಟಿಗೆ ಸಮೀಕರಿಸುವ ಗುಣ ಇಲ್ಲಿದ್ದರೂ ಚುಂಚನಗಿರಿಯ ಭೈರವ ದೇವಾಲಯ ದಲ್ಲಿ ಶೈವಾಗಮ ಪದ್ಧತಿಗೆ ಅನುಗುಣವಾಗಿ ಪೂಜಾದಿ ಅಭಿಷೇಕಗಳು ಸಾತ್ವಿಕವಾಗಿ, ಮಂತ್ರ ಯುಕ್ತ ಕ್ರಮಬದ್ಧವಾಗಿ ನಡೆಯುತ್ತ ಬಂದಿದೆ. ಮತ್ಸ್ಯೇಂದ್ರನಾಥ, ಗೋರಖನಾಥರಿಂದ ಮೊದಲಾಗಿ ಶ್ರೀ ಮಠದ ಇಂದಿನ ಪೀಠಾಧಿಪತಿಗಳಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರವರೆಗೂ ಜಾನಪದದಲ್ಲಿ ಗೀತೆಗಳಿವೆ.

ಆಗ ಹಾಕಿದ ಬಾಳೆ ಆಗಲೆ ಫಲ ಬಿಟ್ಟೊ
ಗೋರಕನಾಥಯ್ಯ ಗುಡಿ ಮುಂದೆ ಬಿಟ್ಟ ಬಾಳೆ
ಹೊತ್ತಾರೆ ಪೂಜೆಗೆ ಹದವಾದೊ
ಗುರುವೆ ನಿನ್ನ ನೆನೆದು ಉರಿಯೊ ಕೆಂಡವ ಆರಿಸಿದೆ
ಎಡ ಎಡವಿ ಬರೊ ಸರ್ಪಕಾಳಿಂಗವ
ಹಿಡಿದೆ ಗುರು ಗಂಗಾಧರ ನಿಮ್ಮ ದಯದಿಂದ

ಇಲ್ಲಿ ಆಧ್ಯಾತ್ಮ ಸಿದ್ಧಿಗೆ ನೆರವಾದ ಗುರು ಮಹಿಮೆಯನ್ನು ಕೃತಜ್ಞತೆಯಿಂದ ಸ್ಮರಿಸಿದ ಚಿತ್ರವಿದೆ. 'ಅರ್ಜುನ ಜೋಗಿ ಕತೆ'. ಜೋಗಿ ಸಂಪ್ರದಾಯದ

ಕನ್ನಡ ಜಿಲ್ಲೆಯಲ್ಲಿ ನಾಥ ಸಂಪ್ರದಾಯ ಅಥವಾ ಜೋಗಿ ಸಂಪ್ರದಾಯವನ್ನು "ಪುರುಷಕಾರಿ" ಸಂಸ್ಕೃತಿ ಎಂದು ಕರೆಯುತ್ತಾರೆ.

ಪ್ರಾಚೀನತೆ ಮತ್ತು ಪಾವಿತ್ರ್ಯಗಳನ್ನು ಸಾರುವಂತಿದೆ. ಒಟ್ಟಿನಲ್ಲಿ ಆದಿಚುಂಚನಗಿರಿಗೆ ಸಂಬಂಧಿಸಿದ ಜಾನಪದ ಸಾಹಿತ್ಯ ಶ್ರೀ ಕ್ಷೇತ್ರದ ಸಾಂಸ್ಕೃತಿಕ ಶ್ರೀಮಂತಿಕೆಯ ಒಂದು ಮುಖವಾಗಿದೆ.

ಶಾಸನೋಲ್ಲೇಖಿತ ಶ್ರೀಕ್ಷೇತ್ರ ಹಾಗೂ ಭೈರವೇಶ್ವರ

ಇತಿಹಾಸದ ಪುನರ್ನಿರ್ಮಾಣಕ್ಕೆ ಪ್ರಮುಖ ಪ್ರಮಾಣವೆಂದರೆ ಶಾಸನಗಳು, ಧರ್ಮದ ಉದಾತ್ತ ತತ್ವಗಳು ಸರ್ವರಿಗೂ ಸದಾಕಾಲ ತಿಳಿಯಲೆಂಬ ಸದಾಶಯದಿಂದ ಬ್ರಾಹ್ಮೀ ಲಿಪಿಯಲ್ಲಿ ಕೆತ್ತಲಾದ ಅಶೋಕನ ಶಾಸನದಿಂದಲೇ ಶಾಸನ ಚರಿತ್ರೆ ಪ್ರಾರಂಭವಾಗುತ್ತದೆ. ಹಾಗಾಗಿ ಧರ್ಮವೇ ಶಾಸನಗಳ ಹುಟ್ಟಿಗೆ ಮೂಲಭೂತ ಪ್ರೇರಕ ಶಕ್ತಿ. ಪ್ರಸಿದ್ಧ ಸಂಶೋಧಕರಾದ ಆರ್. ಎಸ್. ಪಂಚಮುಖಿಯವರು 'ಶಾಸನಗಳ ಉಗಮವಾಗಿರುವುದೇ ದಾನ ಶಾಸನಗಳಲ್ಲಿ' ಎಂದಿದ್ದಾರೆ.

ಗುಪ್ತರ ಕಾಲದಲ್ಲಿ ಹಿಂದೂ ಧರ್ಮದ ಪುನರುಜ್ಜೀವನವಾದ ಹಂತದಲ್ಲಿ ಮೂರ್ತಿಪೂಜೆ, ದೇವಾಲಯಗಳ ನಿರ್ಮಾಣ, ದತ್ತಿದಾನಗಳನ್ನು ಮಾಡುವುದು ಪವಿತ್ರ ಕಾರ್ಯವೆಂಬ ಭಾವನೆ ದಟ್ಟವಾಗಿ ರೂಪಗೊಂಡ ಪರಿಣಾಮವಾಗಿ ಕೊಟ್ಟ ದಾನದತ್ತಿಗಳು ಶಾಶ್ವತವಾಗಿ ಉಳಿಯಬೇಕೆಂಬ ಆಶಯದಿಂದಾಗಿ ಧರ್ಮಶಾಸನಗಳು ಅಧಿಕವಾದವು.

'ಶಾಸ್' ಧಾತುವಿನಿಂದ ನಿಷ್ಪತ್ತಿಯಾದ 'ಶಾಸನ' ಶಬ್ದಕ್ಕೆ ಅಪ್ಪಣೆ ಮಾಡು, ಘೋಷಣೆ ಹೊರಡಿಸು ಎಂದರ್ಥ, ಮಠ, ದೇವಾಲಯಗಳಿಗೆ ಸಂಪತ್ತನ್ನು ಯಾವ ರೂಪದಲ್ಲೇ ಆಗಲಿ ಕೊಡುಗೆ ಕೊಟ್ಟದ್ದು ದಾನ ಶಾಸನಗಳಲ್ಲಿರುತ್ತದೆ. ಎಲ್ಲಾ ತೆರಿಗೆಗಳಿಂದ ಮುಕ್ತವಾದ ದಾನ 'ಉಂಬಳಿ' (ಉದ್+ಬಲಿ=ಉಂಬಳಿ, ಬಲಿ=ಸುಂಕ, ಉದ್=ವಿಮುಕ್ತಿ) ಧರ್ಮಗುರುಗಳಿಗೆ, ಶಿಕ್ಷಣಕ್ಕೆ ನೀಡಿರುವ ದಾನವನ್ನು ತಾಮ್ರ ಶಾಸನಗಳಲ್ಲೂ ದಾಖಲಿಸಲಾಗಿದೆ.

ಶಾಸನಗಳಲ್ಲಿ ಐತಿಹಾಸಿಕ ಸಂಗತಿಗಳು ನಿಖರವಾಗಿ ಅರಿವಾಗುತ್ತದೆ. ಶ್ರೀಕ್ಷೇತ್ರ ಆದಿಚುಂಚನಗಿರಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ದೊರಕಿವೆ. ಎಪಿಗ್ರಾಫಿಯಾ ಕರ್ನಾಟಕದಲ್ಲೂ ಅವು ಉಲ್ಲೇಖವಾಗಿವೆ. ಆದಿಚುಂಚನಗಿರಿಯಲ್ಲಿ ಅನ್ಯಮತ ಪ್ರಾಬಲ್ಯವನ್ನು ನಿವಾರಿಸಿ ನಾಥ ಪಂಥದ ಗುರುಗಳಿಗೆ ಮಹತ್ವ ನೀಡಿ ಮಠದ ಸಂರಕ್ಷಣೆ ಮಾಡುವಲ್ಲಿ ಚೋಳರ ಪಾತ್ರ ಮಹತ್ವದ್ದು, ಬೆಟ್ಟದ ಮೇಲಿರುವ 'ಚೇಳೂರ ಕಂಬ' ಈ ಮಾತಿಗೆ ಸಾಕ್ಷಿಯಾಗಿದೆ. ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಯಲಹಂಕ ನಾಡಪ್ರಭುಗಳು, ಮೈಸೂರು ಒಡೆಯರು ಶ್ರೀಮಠದ ಪೋಷಕರಾಗಿದ್ದರೆಂಬ ವಿಷಯವನ್ನು ಇತಿಹಾಸ ಧೃಡಪಡಿಸಿದೆ. ಆದಿಚುಂಚನಗಿರಿಗೆ ಸಂಬಂಧಿಸಿದ ಮುಖ್ಯ ಶಾಸನಗಳೆಂದರೆ

1.ಕ್ರಿ. ಶ. ೧೦೨೯ ಶಾಸನವೊಂದರಲ್ಲಿ ಮೊದಲ ಬಾರಿ ನಾಥ ಪಂಥದ ಪ್ರಸ್ತಾಪವಾಗಿದೆ. ಅದರಲ್ಲಿ ಹೆಸರಿಸಲಾದ "ಶಿವನಾಥ" ಎಂಬುವನು ಚುಂಚನಗಿರಿಯ ಈವರೆಗಿನ ಎಪ್ಪತ್ತೊಂದು ಮಂದಿ ಪೀಠಾಧಿಪತಿ ಗಳಲ್ಲಿ ನಾಲ್ಕನೆಯವನಾಗಿದ್ದಾನೆ. (೧. ಆದಿರುದ್ರ =ಶಿವರೂಪಿ ಭೈರವೇಶ್ವರ ೨. ಸಿದ್ಧಯೋಗಿ > ಶಿವಾಂಶ ಸಂಭೋತ ೩. ಕರ್ಮನಾಥ ೪. ಶಿವನಾಥ......೭೧ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹೀಗೆ ಶ್ರೀ ಮಠದ ಪೀಠಾಧೀಶರ ಹೆಸರುಗಳ ದಾಖಲೆ ಪಟ್ಟಿಯಿದೆ) ಕ್ರಿ. ಶ.೧೨೦೫ರ ಹೊಯ್ಸಳ ವೀರ ಬಲ್ಲಾಳನ ಕಾಲದ ತಾವರೆಗೆರೆ ಕೋಡಿಯ ಬಳಿ ದೊರೆತ ವೀರಗಲ್ಲಿನಲ್ಲಿ ಚುಂಚನಗಿರಿಯಲ್ಲಿ ಕೋಟೆಯಿದ್ದು ಅದನ್ನು ರಾಜ ಮಹಾರಾಜರು ಆಳುತ್ತಿದ್ದರೆಂದು ಅದಕ್ಕೆ ವಿಕ್ರಮ ಚೋಳಮಂಡಲ ಪ್ರಾಂತ್ಯವೆಂಬ ಹೆಸರಿದ್ದಿತೆಂದೂ ಪ್ರಸ್ತಾಪಿಸಲಾಗಿದೆ. ಕ್ರಿ. ಶ. ೧೨೨೪ ರ ಬೆಳ್ಳೂರು ಮೂಲೆ ಸಿಂಗೇಶ್ವರ ದೇವಾಲಯದ ಶಾಸನವೊಂದರಲ್ಲಿ ಚುಂಚನಗಿರಿ ಪ್ರಾಂತ್ಯಕ್ಕೆ ಭೈರವನೇ ಆಧಿ ದೈವವೆಂದು ಹೇಳಲಾಗಿದೆ. ಬೆಳ್ಳೂರು ಅಗ್ರಹಾರ ವಾಗಿದ್ದಿತ್ತೆಂದೂ, ಚುಂಚನಗಿರಿ ಶೈಕ್ಷಣಿಕ ಕೇಂದ್ರವೂ, ಸಿದ್ಧ ಸಾಧಕರ ತಪೋತಾಣವೂ ಆಗಿದ್ದುದನ್ನು ಶಾಸನಗಳು ತಿಳಿಸಿವೆ.

೪. ಕ್ರಿ.ಶ. ೧೨೮೯ ಬೆಳ್ಳೂರಿನ ಹೊಯ್ಸಳ ವೀರ ನರಸಿಂಹದೇವರ ಶಾಸನದಲ್ಲಿ ಆತ ಭೈರೇ ದೇವರಿಗೆ ದತ್ತಿಯನ್ನು ಬಿಟ್ಟ ವಿಷಯವಿದೆ.

೫.ವೀರಬಲ್ಲಾಳನ ಸಾಮಂತನಾದ ಯಲಹಂಕ ನಾಡಪ್ರಭು ತನ್ನ ಮನೆದೇವರಾದ ಭೈರವನಿಗೆ ದತ್ತಿಬಿಟ್ಟ ಅಂಶ ಕ್ರಿ.ಶ. ೧೨೬೫ರ ಶಾಸನದಲ್ಲಿದೆ. ಈ ವಿಷಯದ ಬಗ್ಗೆ ಜಾನಪದದಲ್ಲೂ ಆಧಾರವಿದೆ.

೬. ವಿಜಯ ನಗರ ಅರಸರ ಆಳ್ವಿಕೆಯ ಕಾಲದಲ್ಲಿ ಕಠಾರಿ ನರಸಿಂಹರಾಜ ಒಡೆಯರ ಪ್ರಧಾನಿ ವಿರೂಪಾಕ್ಷ ದೇವಣ್ಣನು ಚುಂಚನಹಳ್ಳಿಗೆ ವಿರೂಪಾಕ್ಷಪುರ ಎಂದು ಮರುನಾಮಕರಣ ಮಾಡಿದ ಸಂಗತಿ ಕ್ರಿ. ಶ. ೧೪೮೪ರ ಚುಂಚನಹಳ್ಳಿ ಶಾಸನ ನಿರೂಪಿಸಿದೆ.

೭. ಕ್ರಿ. ಶ. ೧೮೯೬ ರಲ್ಲಿ ಗಂಗಾಧರೇಶ್ವರ ದೇವಾಲಯದ ಮುಖ ಮಂಟಪದ ಹಿತ್ತಾಳೆಕಟ್ಟಿನ ಬಲಭಾಗದನಟರಾಜ ವಿಗ್ರಹದ ಅಡಿಯಲ್ಲಿ ಕೆತ್ತಲಾದ ಶಾಸನದಲ್ಲಿ ಸೊರವನಹಳ್ಳಿ ದೊಡ್ಡೇಗೌಡರ ಮಗ ಕರೀಗೌಡರು ಮಹಾದ್ವಾರದ ಅಲಂಕಾರಕ್ಕಾಗಿ ಹಿತ್ತಾಳೆ ತಗಡನ್ನು ಹೊದಿಸಿದರೆಂದು ತಿಳಿಸಲಾಗಿದೆ.

೮. ಆದಿಚುಂಚನಗಿರಿಯ ಸಮಾಧಿ ಮಂಟಪದ ಬಳಿ ದೇವನಾಗರಿ ಲಿಪಿಯ ಶಾಸನವೊಂದು ದೊರಕಿದ್ದು ಮೇರನಾಥ, ಖಿರ್ಮನಾಥ, ಕುರುಕ್ಷೇತ್ರನಾಥರು ಸಮಾಧಿ ಮಂಟಪಗಳನ್ನು ಕಟ್ಟಿಸಿದರೆಂಬ ನಿರೂಪವಿದೆ.

೯. ಕ್ರಿ. ಶ. ೧೭ನೇ ಶತಕದ ಹಿತ್ತಾಳೆ ಲೇಖನದಲ್ಲಿ ಮುದ್ದಪ್ಪ ಗೌಡನೆಂಬಾತ ನಾಗಚಾವಡಿಯನ್ನು ಕಟ್ಟಿಸಿದನೆಂದು ಮಾತಿದೆ.

೧೦. ಕ್ರಿ.ಶ. ೧೮ನೇ ಶತಮಾನದ ಪೂವಾರ್ಧದ ಶಿಲಾನಿರೂಪದಲ್ಲಿ ಕುಸುಮನಾಥವೆಂಬ ಗುರುವಿನ ಪ್ರಸ್ತಾಪವಿದೆ. ಈ ಅಂಶ ಉತ್ತರ ಭಾರತದಿಂದ ಅಥವಾ ಇನ್ನಾವುದೇ ಭಾಗದಿಂದ ಬಂದ ನಾಥ ಸಂಪ್ರದಾಯದ ಸನ್ಯಾಸಿಗಳು ಇಲ್ಲಿ ನೆಲೆಸುತ್ತಿದ್ದರೆಂಬುದನ್ನು ಸಾರಿದೆ. ಆದಿಚುಂಚನಗಿರಿ ಮಠಕ್ಕೆ ಇಂದಿಗೂ ಜೈನರು, ಮುಸ್ಲಿಮರು, ದಲಿತರು, ಕ್ಷಿಕರನ್ನೊಳಗೊಂಡಂತೆ ಅನೇಕ ಕೋಮಿನವರು ನಡೆದುಕೊಂಡು ಬರುತ್ತಿರುವುದು ಇಲ್ಲಿನ ವೈಶಿಷ್ಟ್ಯ.

೧೧. ಮೈಸೂರು ಗೆಜೆಟ್ಟಿನ ೯ನೇ ಪುಟದಲ್ಲಿಚುಂಚನಗಿರಿಯ ಮೇಲ್ಮೈ ಲಕ್ಷಣ ಹಾಗೂ ಭೌಗೋಳಿಕ ಗುಣಗಳನ್ನು ಹಾಗೂ ೪೭೧ನೇ ಪುಟದಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆಗಳ ವಿವರವನ್ನು ಮತ್ತು ಎರಡನೇ ಸಂಪುಟದ ೨೩೦ನೇ ಪುಟದಲ್ಲಿ ಜಾತ್ರಾ ಮಹೋತ್ಸವದ ದಾಖಲೆಯನ್ನು ಕಾಣಬಹುದಾಗಿದೆ.

೧೨. ೧೯೫೭ರಲ್ಲಿ ಅಂದಿನ ಮೈಸೂರು ಸರ್ಕಾರ ಆದಿಚುಂಚನಗಿರಿಯ ಮಹಾ ಸಂಸ್ಥಾನ ಮಠಕ್ಕೆ ರಹದಾರಿಯನ್ನು ಬಿರುದು ಬಾವಲಿಗಳನ್ನು, ಇತರೆ ಸಿಬ್ಬಂದಿಯನ್ನೂ ವಿವರವಾಗಿ ಪ್ರಾಸ್ತಾಪಿಸಿ, ಮಂಜೂರು ಮಾಡಿ ಮಾನ್ಯತೆ ನೀಡಿದೆ.

ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಶ್ರೀ ಕ್ಷೇತ್ರದ ಸರ್ವಾಂಗೀಣ ಪ್ರಗತಿಯನ್ನು ಅತ್ಯದ್ಭುತ ರೀತಿಯಲ್ಲಿ ಮಾಡುತ್ತಾ ಬಂದಿರುವುದು ಶ್ರೀ ಮಠದ ನೂತನ ಇತಿಹಾಸವೇ ಸರಿ.

ನಾಥ ಪರಂಪರೆಯ ಶ್ರೀಮಠ ಮುಂದಿನ ಸಂಚಿಕೆಯಲ್ಲಿ.

ಮುಂದುವರಿಯುವುದು.

ಮಡದಿ ಮಿಂದು ಬಂದಾಗ

ಮುಂಜಾನೆ ಜಗಲಿಯಲಿ ನಾ ಕುಳಿತರೆ
ಮಿಂಚಿತೊಂದು ಬೆಳಕು, ಬಾಗಿಲ ದೆಸೆಯಿಂದ।
ಅಚ್ಚರಿಯಲಿ ನೋಡೆ, ಸೌರಭವು ಹೊರಸೂಸೆ
ಮಂದಗತಿಯಲಿ ಬಂದಳೆನ್ನ ಮಡದಿ ||೧||
ರಜತ ವರ್ಣದ ದುಕೂಲವನು ಧರಿಸಿ
ರಜಿಸುತ ಬಂದಳು, ವರ ಸುಂದರಿ,
ಒಮ್ಮಿಂದೊಮ್ಮೆಯೆ ಕೂಗಿದೆನು ನಾನು
ಮುದ್ದಾಗಿ ಕಾಣುತಿಹೆ ಎಲೆ ನಲ್ಲೆ ನಿಲ್ಲೆ||೨||
'ಸುಮ್ಮನಿರಿ ನೀವಿಗ, ಕ್ಷಣದಿ ಬರುವೆ
ಎಂದು ಗುಣುಗಿ ತಾ ಓಡಿದಳು ಅಂತಃಪುರಕೆ
ವೇಣಿಯನು ಸಿಂಗರಿಸಿ ಮಲ್ಲಿಗೆಯ ಮುಡಿದು
ಕಾಶ್ಮೀರ ಸೀರೆಯತ್ತೊಟ್ಟು ಸಾರಿದಳ್ ಸನಿಹ||೩||
ಸುಗಂಧ ಸಾಬೂನಿನಲಿ ಸ್ನಾನ ಮಾಡಿ
ಅಂದದ ಕುಂಕಮದ ನೊಸಲೊಳ್ ಧರಿಸಿ
ನಿರ್ಮಲ ಉಡುಪುಗಳ ತಾನು ಧರಿಸಿ
ಕಂಡಳೆದುರು ಪ್ರತ್ಯಕ್ಷ, ಎನ್ನಪ್ರಾಣ ಗೆಳತಿ||೪||
ಎನ್ನ ಮನವು ಸಂತೋಷದಿಂ ತೇಲಾಡಿತು
ಜೀವನ ಸಂಗಾತಿಯ ರೂಪವಂ ನೋಡಿ
ನವ ಕುಸುಮಗಳ ಮುತ್ತಿಡುವ ಭಾಗ್ಯದಂತೆ
ಮಡದಿಯ ಹಾಲುಗೆನ್ನೆಗೆ ನಾನಿತ್ತೆ ಮುತ್ತಂ||೫||

- ವಾಣಿ ಕುಮಾರ್, ಸುಳ್ಯ.

ದ್ವಂದ್ವಾರ್ಥ

ಕಾಡು ಬೆಳೆಸಿ, ನಾಡು ಉಳಿಸಿ
ಮರದ ಕೆಳಗೆ ತೂಗಿತ್ತೊಂದು
ನಾಮಫಲಕ
ಇದನ್ನು ಕಂಡನೊಬ್ಬ
ಸಾರ್ವಜನಿಕ!
ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು
ಇತ್ತೊಂದು ಅದರೊಡನೆ ಇನ್ನೊಂದು
ನಾಮಫಲಕ
ಮೇಲಿನೆರಡರ ನಡುವೆ ಯಾವ ಅರ್ಥ?
ಬೆಳೆಸಿ-ಉಳಿಸಿ ಹೇಳಿದ ಅಂದು
ತಮ್ಮ ವಸ್ತುಗಳಿಗೆ ತಾವೇ ಜವಾಬ್ದಾರರೆಂದು
ಕಾಡಿನ ಸಂಪತ್ತು ದೋಚಿದರು
ಹಲವು ಮಂದಿ ಮುಂದೆ ಬಂದು!!!

- ಸಂಧ್ಯಾ , ಪಿಲಿಗುಂಡ, ಪುತ್ತೂರು.

ಕುರುಟು ಞಾಯ

ಮೈದು ಮಾದು ಕೂಡಿಕಂಡ್
ಕಾಡ್ ಬೇಟೆ ಮಾಡನೋತ
ಕೋವಿ ತುಂಬಿ ಹೊತ್ತ್‌ಕಂಡ್
ಹೊರಟ ರಭಸ ನೋಡಿಕಾತ್‌ಲೆ !
ಗುಂಡಿ ಮೊಟ್ಟೆ ಹತ್ತಿಸುತ್ತಿ
ಒಂದೂ ಜಾತಿ ಕಾಣದಾಗಿ
ಕುಂಡತಂಗೆ ಹೊಡ್ಡ್ ಮಾದು
ಬೋಣೀ ಮಾಡ್ತ್ !
ಕುಂದು ಬರಿಲಿ ಹುಡ್ಕಿ ನಡ್ದ್
ಬೈರಿ ತಗ್ಗ್‌ಗೆತ್ತ್‌ಕನ
ಹಂದಿಯೊಂದು ಎದ್‌ರ್ ಬಂದ್
ನಿತ್ತ್ ನೋಡ್‌ತ್ತಿತ್ತ್ !
ಹೆಗ್‌ಲ್‌ಲಿದ್ದ ಕೋವಿ ತೆಗ್ದ್
'ಡುಗೂ' ತೇಳಿ ಹೋಡ್ದ್ ಮೊದು
ಕ್ವಾರೆ ಹಂದಿನ ಒಂದೇ ಗುಂಡಿಗೆ
ಕೆಡ್ಗಿ ಬುಡ್ತ್!
ಪಟ್ಟೆ ಮೊಟ್ಟೆ ಹತ್ತಿ ನಿತ್ತ್
ಸುತ್ತು ಮುತ್ತು ನೋಡ್‌ಕನ
ಕೊಂಬ ಕಡ್ಡೆ ತಲೆ ಎತ್ತಿ
ನೋಡ್‌ತಿತ್!
ಕೊತ್ತ್ ಎಳ್ದ್ ಗುರಿ ನೋಡಿ
ಮಾದು ಹೊಡ್ದ ಗುಂಡು ತಾಂಗಿ
ಕೊಂಬ ಕಡ್ಡೆ ಹೊಣ್ಕೆ ಬಿದ್ದ್
ನಿಗ್‌ರೀ ಹೋತ್!
ಜಾತಿ ಮೂರು ಬೇಟೆಯಾಗಿ
ಮಾಸ ಪಾಲ್ ಮಾಡ್‌ಕನ
ಮಾದು ಒಂದು ಕುರುಡು ಞಾಯ
ತೆಗ್ದೇ ಬುಡ್ತ್!
'ಹಂದಿ ಮಾಪಳೆ ತಿಂಬೊದುಲೆ
ಕಡುವೆ ನಾ ಕೊಡಿಕಿಲೆ
ಕುಂಡತನ ಸಮ ಮೂರು
ಪಾಲ್ ಮಾಡೆ ಮಾಡಕ್ಕು!
ಮಾದು ಆಡ್ದ ಞಾಯ ಕೇಳಿ
ಮೈದು ಬಿಕ್ಕಿ ಮುಟ್ಟ್‌ಕಂಡ್
'ಮಾಸ ನಂಗೆ ಬೇಡ" ತೇಳಿ
ಹೊರಟೇ ಬುಟ್ಟತ್ !
'ಗೆದ್ದೆ ನಾನ್'ತೇಳಿಕಂಡ್
ಮಾದು ಮೂರು ಜಾತಿ ತಕಂಡ್
ಮಾಸ ಮಾಡಿ ಬೆಸಗೆಲಾಕಿ
ಒಣಗ್ಸೀ ಗೈಪೂ ಮಾಡ್ತ್ !
ಮಳೆಗಾಲಿಡಿ ಅರೆಗಾಲಿಡಿ
ನಾಟಿ, ಬೆಳೆ ಕೆಲ್ಸಗಳಲಿ
ವಣಗಿಲ್ ಮಾಸ ಗೈಪು ಮಾಡಿ
ಮಾದು ಕುಷಿ ಪಟ್ಟತ್!

- ಬಾಚರಣಿಯಂಡ ಅಪ್ಪಣ್ಣ, ಕುಶಾಲನಗರ

ಸ್ತ್ರೀಯನ್ನು ಬಾಲ್ಯದಲ್ಲಿ ತಂದೆಯೂ, ಯೌವ್ವನದಲ್ಲಿ ಪತಿಯೂ, ವೃದ್ಧಾಪ್ಯದಲ್ಲಿ ಸುತರು ಲೌಕಿಕ ಧರ್ಮಾನುಸಾರ ಸಾಕಬೇಕು.

'ಮರೆಗುಳಿ' ಮಂಜ - (ಹಾಸ್ಯ)

ನಮ್ಮ 'ಮರೆಗುಳಿಗೆ ಮಂಜನೊಟ್ಟಿಗೆ ಐದಾರ್ ಸಾಮಾನ್ ತಾಕೆತ ಹೇಳಿರೆ ಅಂವ ತಾದು ಬರೀ ಎರಡೋ ಮೂರೋ. ಬಾಕಿ ಮರ್ತೇ ಬಾದು ಅಂವನ ಮಾಮೂಲಿ ಕಾಯ್ಲ. ಹಂಗಾಗಿ ಅಂವನ ಹೆಣ್ ಚೀಟೀಲಿ ಬರ್ದ್ ಕೊಡ್ತಿತ್. ಇಂವ ಚೀಟಿ ನೋಡಿ ಸಾಮಾನ್ ತಾತಿತ್. ಒಂದಿನ 'ಹೊಸಬ ಹೊಸಬಿ" ಬಾದುಂತೇಳಿ ಗದ್ದಾಳ ಮಾಡಿಕೆ ಏರ್ಪಾಡ್ ಮಾಡ್ದೊ. ಗದ್ದಾಳದ ಸಾಮಾನ್ ಟೌನಿಂದ ತರೊಕು. ಹಂಗೆಂತೇಳಿ ಹೆಣ್ ಚೀಟಿ ಬರ್ದ್ ಗಂಡನ ಕೈಲಿ ಕೊಟ್ಟಿತ್. ಮಂಜ ಚೀಟಿನ ಜೋಬಿಲಿ ಹಾಕಂಡತ್. ಆದರೆ ಆ ಚೀಟಿಲಿ ಏನೇನ್ ಬರ್ದುಟುತ ಈ ಮಾರಾಯ ಓದಿತ್ಲೆ. ಸೀದಾ ಬಸ್ ಹತ್ತಿ ಪ್ಯಾಟೆಗೆ ಹೋತು. ಪ್ಯಾಟೆಲಿ ಅವು ಕಂಡೊ, ಇವು ಕಂಡೊ ಒಟ್ಟಿಗೆ ಸೇರಿ ಚಾಯಕುಡ್ದೊ. ಕಡೆಗೆ ಅಂಗ್ಡಿಗೆ ಹೋಗಿ ಮಂಜ ಜೋಬಿಗೆ ಕೈ ಹಾಕಿ ಚೀಟಿ ಹುಡ್ಕಿತ್. ಜೋಬಿಲಿದ್ದ ಚೀಟಿ ಮಂಗಮಾಯ!ಅರೆ! ಚೀಟಿ ಎಲ್ಲಿ ಹೋತು? ಜೋಬಿಗೆ ಹಾಕೊಳೆಯಾ. ಬಸ್‌ಗೆ ದುಡ್ ಕೊಟ್ಟದ್ ಸುರಾಲ್ ಜೋಬುಂದ. ದಾರಿಲೆಲ್ಲೂ ಬಗ್ಗಿತ್ಲೆ. ಚೀಟಿ ಎಲ್ಲಿ ಹೋತು? ಅಂಗ್ಡಿ ಮುಂದೆ ನಿತ್‌ಕಂಡ್ ಆ ಜೋಬು ಈ ಜೋಬು, ಈ ಜೋಬು ಆ ಜೋಬು ಹುಡ್ಕಿತ್. ಅಲ್ಲಿ ಕೆರ್ದ್‌ರೆ ಇಲ್ಲಿ ಕೆರ್ದ್‌ಂಗೆ ಆದು, ಇಲ್ಲಿ ಕೆರ್ದರೆ ಅಲ್ಲಿ ಕೆರ್ದಂಗೆ ಆದೆಲ್ಲ ಹಂಗೆ ಅಂವ ಅಲ್ಲಿ ಇಲ್ಲಿ ಕೈ ಹಾಕಿತ್. ನೋಡ್ದವು ಇಂವನ ಪರ್ದಾಟ ನೋಡಿ ನಗಾಡಿಕೆ ಸುರು ಮಾಡ್ದೊ. " ಕೆರ್ತ ಕಾಯ್ಲ ಕಂಡದೆತ" ಮಾತಾಡಿಕಂಡೊ. ಅಲ್ಲ, ಇಂದ್ ಹೊಸಬ ಹೊಸಬಿ ಬಂದವೆ. ಅವರ ಮುಂದೆ ನನ್ನ ಹೆಣ್ ಕರಿ ಚವುಂಡಿ ಆಡ್ದಂಗೆ ಆಡಿರೆ ನಾ ಯಂತ ಮಾಡ್ದು? ಅಲ್ಲ, ಆ ಹಾಳಾದ ಚೀಟಿ ಎಲ್ಲಿ ಹೋತು? ನನ್ನ ಸನಿಗೆ ಆ ಚೀಟಿನ ಓದಿಕಂಡಿದ್ದರೆ ಅದಾರಾಗಿತ್. ಅದೂ ಮಾಡ್ತ್‌ಲೆ. ಹ್ಞಾ ನಿಲ್ಲಿ, ಆ ಚೀಟಿ ಎಲ್ಲೂ ಹೋತ್ಲೆ, ಅದ್ ಅಲ್ಲೆ ಉಟ್ಟು. ಎಲ್ಲಿಟ್ಟು?

ಇಂವ ಚೀಟಿ ಹಾಕಂಡ ಶರ್ಟ್ ಮನೆಲಿ ಕಡವೆ ಕೊಂಬಿಗೆ ಕೋಸಿಕಂಡೇ ಉಟ್ಟು. ಇಂವ ಅರ್ಜಂಟ್‌ಲಿ ಹಾಕಂಡ್ ಬಂದ ಶರ್ಟೆ ಬ್ಯಾರೆ. ಮಕ್ಕ ಹಾಲ್ ಟಿಕೆಟ್ ಬುಟ್ಟ್ ಬಂದವಲ್ಲ, ಹಂಗಾತ್ ನಮ್ಮ ಮಂಜನ ಕತೆ. ಇನ್ನು ಎಂತ ಮಾಡ್ದು? ವಾಪಾಸ್ ಮನೆಗೆ ಹೋಗಿ ಬಾದೇ ಒಳ್ಳದ್‌ತ ಕಂಡದೆ. ಅದಾಕಿಲೆ. ಯಾಕೆಂತೇಳಿರೆ ಹೋದರೆ ಬಾಕೆ ಬಸ್ ಇಲ್ಲೆ. ಅಂತೂ ಒಂದ್ ಬುದ್ಧಿವಂತಿಕೆನ ಉಪಯೋಗಿಸಿತ್. ಅದೆಂತತ ಗೊತ್ತುಟಾ? ಇಂವ ಮೊದುವೆ ಆದ ಸುರೂಲಿ ಸಮ್ಮಾನ ಉಂಡದ್ ಗ್ಯಾನ ಮಾಡ್ತ್. ಆಗ ಉಂಡದ್ ಈಗ ಗ್ಯಾನ ಬಂದದೆಯಾ? ತಥ್ ನನ್ನ ತಲೆ ಗೊಬ್ಬರ ಗುಂಡಿ! ಏನಾರ್ ಆಗಲಿ ಕೋಳಿಮಾಂಸ ತಕಣೆ. ಓಹೋ, ಕೋಳಿಗಳಿಗೆ ಆದೆಂತದೋ ಕಾಯ್ಲ ಗಡ. ಕುರಿ ಮಾಸ ತಕಂಬದಾ? ಬೇಡ, ಬರೀ ಚಕ್ಕಳ ಮೂಳೆ, ಕೋಳಿನೇ ತಕಣೆ. ಒಳ್ಳ ಬೆಂದರೆ ಕಾಯ್ಲನೂ ಇಲ್ಲೆ, ಕಸಾಲೆನೂ ಇಲ್ಲೆ. ಗುದ್ದಲಿ ತುಪ್ಪ, ಗೋದ್‌ರೊಟ್ಟಿ, ಸಣ್ಣಕ್ಕಿ, ಪಟ್ಟೆಲವಂಗ, ಗಸಗಸೆ, ಬ್ರೆಡ್ಡ್, ಕಡ್ಡಿ ತರದ ಕೀರ್ ಪಾಯ್ಸದ ಕಡ್ಡಿ, ಗುಡ್‌ಡೆ ಬಿಸ್ಕತ್, ಅರ್ಧ ಕುಪ್ಪಿ ರಮ್ ತಕಣೆಂತ ಗ್ಯಾನ ಮಾಡ್ತ್. ಹಂಗೆ ತಕಂಬಕೂ ತಕಂಡತ್. ಬಸ್ ಹತ್ತಿ ಮನೆಗೆ ಬಾತ್. ತುಟಿ ಪೂರಾ ಒಣಂಗಿದಂಗಾತ್. ಕಾಲ್‌ಕೈ ಬಚ್ಚಿ ಹೋತು. ಹೆಣ್ ಬರ್ದದೇ ಒಂದು ಇಂವ ತಂದದೇ ಇನ್ನೊಂದ್, ಆದರೆ ಹೆಣ್ ಸುಮ್ಮನೆ ಇರುದಾ? ಹಂಗೂ ಹಿಂಗೂ ಮನೆಗೆ ಹತ್ತಿತ್. ಮನೆ ಹತ್ತಿಕೆ ಮುಂದೆ " ಹೊಸಬ ಹೊಸಬಿ" ಕುದ್ದೊಳೊ!

ಹೆಣ್‌ನ ಕೈಲಿ ಬ್ಯಾಗ್‌ನ ಕೊಟ್ಟಿತ್. ನಂಟ್ರೊಟ್ಟಿಗೆ ಮಾತಿಗೆ ಕುದ್ದತ್. ಅಷ್ಟೊತ್ತಿಗೆ ಒಳಗೆಂದ್ "ಹೆಣ್" ಬನ್ನಿ ಒಮ್ಮೆ ಇಲ್ಲಿತ" ಕರ್ತ್. ತಕಣೆ ನಮ್ಮ ಮಂಜತರ ತರ ತರ ನಡ್ಗಿ ಹೋತು" ಎಂತನೇ ಬಂದೆ ಬಂದೇಂತೇಳಿ" ಒಳಗೆ ಹೋತು. ಅಲ್ಲಿ ಹೋದರೆ ಹೆಣ್ ಆ ಬ್ಯಾಗ್‌ಲಿದ್ದ ಸಾಮಾನ್‌ನೆಲ್ಲಾ ತೆಗ್ದ್ ತೆಗ್ದ್ ಇಸಿಟು. ನಾ ಬರ್ದದಕಿಂತ ಜಾಸ್ತಿ ತಂದೊಳರಿ. ನಂಗೆ ಈ ಗಸಗಸೆನ ಬರಿಕೇ ಮರ್ತ್ ಹೋಗಿತ್‌ತ ಹೇಳಿ ಗಂಡನ ಬಗ್ಗೆ ಹೊಗಳಿಕೆ ಮಾತಾಡ್ತ್. ಆದರೂ ಮಂಜ ಚೀಟಿ ಬುಟ್ಟ್ ಹೋದ ಕತೆನಾಗಲೀ, ಶರ್ಟ್ ಬೇರೆ ಹಾಕಂಡ್ ಹೋದ್ದಾಗಲಿ ಇಲ್ಲಿ ಮುಟ್ಟು ಹೆಣ್‌ನೊಟ್ಟಿಗೆ ಹೇಳ್ತ್‌ಲೆಗಡ. ಮೊನ್ನೆ ನನ್ನೊಟ್ಟಿಗೆ ಹಿಂಗೆಂಗೆತ ಅಂದ್‌ದ್ ಕತೆನ ಮಂಜ ಹೇಳ್ಕಂಡ್ ನಗಾಡ್ತ್. ನೀವೆಲ್ಲಾರ್ ಹೇಳಿಕೆ ಹೋಬೇಡಿ ಬಲಾ.

-ಬಾರಿಯಂಡ ಆರ್. ಜೋಯಪ್ಪ, ಮದೆ

ವರದಕ್ಷಿಣೆ ಕಿರುಕುಳ

ವರದಕ್ಷಿಣೆ ಬೇಡವೆಂದು ನಟಿಸುತ್ತಾನೆ
ಪ್ರೀತಿಸಿ ಪ್ರೇಮಿಸಿ ಪೂಜಿಸುತ್ತಾನೆ
ಹಣ ಒಡವೆ, ಗಂಟು ತೋರಿಸುತ್ತಾನೆ
ಗಗನದಲ್ಲಿ ಅವಳ ಹಾರಿಸುತ್ತಾನೆ
ಎಲ್ಲದರಲ್ಲೂ ಅವಳ ನಂಬಿಸುತ್ತಾನೆ
ಅವಳ ಕೊಲೆ ಮಾಡಿ ತ್ಯಜಿಸುತ್ತಾನೆ
ಕೊನೆಗೆ ಆತ್ಮಹತ್ಯೆ ಎಂದು ಪ್ರಕಟಿಸುತ್ತಾನೆ

-ಶುಭ, ಅರಕೆರೆ

ಬಾಲ ಸಂಗಾತಿ ವಿಭಾಗ : ಜ್ಞಾನ -20

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಮಹಾಭಾರತದಲ್ಲಿರುವ ವೈಜ್ಞಾನಿಕ ಅಂಶ -3

ಖಗೋಲ ಶಾಸ್ತ್ರ

ಎಲ್ಲದಕ್ಕೂ ಮೂಲಾಧಾರತೇಳಿ ಪರಿಗಣಿತ ಆದ ಖಗೋಲ ಶಾಸ್ತ್ರದ ಹಲವಾರ್ ಅಂಶಗ ಮಹಾಭಾರತಲಿ ಉಲ್ಲೇಖ ಅವುಟು. ಅವುಗಳ್ಲಿ ಮುಖ್ಯವಾದದ್ದ್ "ಕಾಲಗಣನೆ". ಗೆಲಿಲಿಯೋ (1564-1642) ಮೊಟ್ಟಮೊದಲಿಗೆ ಕಾಲನ ವಿಭಜಿಸಿ ಸೆಕೆಂಡ್‌ನಂತ ಚಿಕ್ಕ ಘಟಕನ ವ್ಯವಹಾರಕ್ಕೆ ತಂದದ್ತ್ತೇಳಿ ಪಾಶ್ಚಾತ್ಯರ್ ಭಾವಿಸುವೆ. ಆದರೆ ಮಹಾಭಾರತ್‌ಲಿ ಸೆಕೆಂಡ್‌ಗಿಂತನೂ ಚಿಕ್ಕದಾದ ಕಾಲನ ಉಲ್ಲೇಖಿಸಿದರ್ನ ಈ ಕೆಳಗಿನ ಶೋಕಗ ಧೃಢೀಕರಿಸಿದೆ.

ಕಾಷ್ಠಾ ನಿಮೇಷಾ ದಶ ಪಂಚ ಚೈವ ತ್ರಿಶಂತು ಕಾಷ್ಠಾ ಗಣಯೇತ್ ಕಲಾಂತಾನು ತ್ರಿಶಂತ್ಕಲಾಶ್ಚಾಪಿ ಭವೇನು ಹೂರ್ತೋ ಬಾಗಾಃ ಕಲಾಯಾಃ ದಶಮಶ್ಚ ಯಃ ಸ್ಯಾತ್ ತ್ರಿಂಶನ್ಮುಹೂರ್ತಾನ್ತು ಭವೇದಹಶ್ಚ ರಾತ್ರಿಶ್ಚ ಸಂಖ್ಯಾ ಮುನಿಭಿಃ ಪುಣೀತಾ। ಮಾಸಸ್ಮೃತೋ ದ್ವೇ ತ್ವಯನೇ ವದಂತಿ ಸಂಖ್ಯಾವಿದೋ ದಕ್ಷಿಣಮುತ್ತರಂ ಚ್॥

ಅಮರಕೋಶ, ವಿಷ್ಣು ಪುರಾಣ, ಮನುಸ್ಮೃತಿ ಮುಂತಾದವುಗಳ್ಲಿನೂ ಸಮಯ ವಿಭಾಗದ ವಿವರ ತಿಳ್ಸಿದ್ ಕಂಡ್ ಬಂದದೆ.

ಭೂಮಿಯ ವಯಸ್ಸ್ 3.2 ಸಾವಿರಕೋಟಿ ವರ್ಷಗತ್ತೇಳ್ದು ಪೂರ್ವಜರ ಅಭಿಪ್ರಾಯ. ಇದರ್ನ ಖಂಡಿಸಿ ಆಧುನಿಕ ವಿಜ್ಞಾನಿಗ ಪೂರ್ವಜರ ವಿಚಾರ ಅವೈಜ್ಞಾನಿಕವೆಂತಲೂ ಆಧಾರ ರಹಿತವಾದ ದ್ದೆಂತಲೂ ಹಿಯ್ಯಾಳಿಸ್‌ತಿದ್ದೊ. ಆದರೆ ಈ ಶತಾಬ್ಧಿಯ ಮೊದಲ ಭಾಗಲಿ ರೇಡಿಯೋ ಎಕ್ಟಿವ್ ಕ್ರಮದ ಮೂಲಕ ಶಿಲೆಗಳ ವಯಸ್ಸ್‌ನ ನಿಶ್ಚಯ ಮಾಡ್‌ಕಾಕನ ಪ್ರಾಚೀನರ್ ಹೇಳ್ದ್ ಭೂಮಿಯ ವಯಸ್ಸ್ ಸರಿತೇಳಿ ಒಪ್ಪಲೇ ಬೇಕಾತ್. ಬೆಂಗಳೂರಿನ ಸುತ್ತಮುತ್ತು ಸಿಕ್ಕುವ ಕೆಲವು ಶಿಲೆಗ ಮೂವತ್ತು ಸಾವಿರ ಕೋಟಿ ವರ್ಷಗಳಷ್ಟ್ ಹಿಂದಿನವುತ್ತೇಳಿ ಅವೇ ನಿಶ್ಚಯಿಸ್ಯೊಳೊ. ಇಂತಿರ್‍ಕನ ಭೂಮಿಯ ವಯಸ್ಸ್‌ನ ಬಗ್ಗೆ ಪ್ರಾಚೀನರ್ ಹೇಳ್ದ್ ಸರಿಯಾಗೆ ಉಟ್ಟುತ್ತೇಳುದರ್ನ ಮತ್ತೆ ಹೇಳ್ದು ಬ್ಯಾಡ ಅಲ್ಲಾ ?

ಶುಕ್ಲ ಮತ್ತೆ ಕೃಷ್ಣೆ (ಹುಣ್ಣಿಮೆ ಅಮವಾಸೆ) ಪಕ್ಷಗಳ್ಲಿ ಚಂದ್ರನ ವೃದ್ಧಿ ಮತ್ತೆ ಕ್ಷಯಕ್ಕೆ ಭೂಮಿ ಚಂದ್ರರ ಚಲನೆನೆ ಕಾರಣತ್ತೇಳುವ ಅಂಶನೂ ಮಹಾಭಾರತಲಿ ನಿರೂಪಿಸ್ಯೊಳೊ.

ಬಾಲ ಸಂಗಾತಿ ವಿಭಾಗ : ಕಥೆ -20

ಅತಿ ಆಸೆ ಗತಿಗೇಡ್

ಬಾಳ ಹಿಂದೆನ ಕಾಲಲಿ ಒಬ್ಬ ರಾಜ ಇತ್ತ್. ಅವಂಗೆ ಸುಮಾರ್ ವರ್ಷ ಮಕ್ಕ ಇತ್ತ್‌ಲೆ. ಅಂವ ಭಾಳ ದುಃಖಿಲಿ ಇತ್ತ್. ಒಂದ್ ದಿನ ಅವನ ರಾಜ್ಯಕ್ಕೆ ಒಬ್ಬ ಸಾಧು ಪುರುಷ ಬಂದ್, ಬ್ರಹ್ಮನ ತಪಸ್ಸ್‌ಲಿ ಒಲಿಸಿಕ ಆಗ ನಿಂಗೆ ಪುತ್ರ ಸಂತಾನ ಆದೆತ್ತೇಳ್ತ್. ರಾಜಂಗೆ ತುಂಬಾ ಖುಷಿ ಆತ್. ರಾಜ ತುಂಬಾ ಭಕ್ತಿಂದ ಬ್ರಹ್ಮನ ಕುರ್‌ತ್ ತಪಸ್ಸ್ ಮಾಡ್ತ್. ಆಗ ಬ್ರಹ್ಮ ದೇವ ಅವನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷ ಆತ್. ನಿಂಗೆ ಯಾವ ತರ ಮಗ ಬೇಕು ಕೇಳ್‌ತ್ತೇಳ್ತ್. ರಾಜ ಸ್ವಲ್ಪ ಹೊತ್ತು ಗ್ಯಾನ ಮಾಡಿ ಕೇಳುದಾದರೆ ಮಗನೊಟ್ಟಿಗೆ ಐಶ್ವರ್ಯನು ಬರುವ ಹಂಗೆ ಕೇಳಕುತ ಬ್ರಹ್ಮದೇವಾ ನಂಗೆ ಸದ್ಬುದ್ಧಿ ಇರುವ ಸತ್ಪುತ್ರನ ಕೊಡು ಅಷ್ಟೇ ಅಲ್ಲ, ಆ ನನ್ನ ಮಗನ ಮಲ ಮೂತ್ರ ಕಫ ವಾಂತಿ ಎಲ್ಲವೂ ಸುವರ್ಣಮಯವಾಗಿರುವಂಗೆ ಕರುಣಿಸುತ್ತೇಳ್ತ್. ಬ್ರಹ್ಮ ಸ್ವಲ್ಪ ಹೊತ್ತು ಗ್ಯಾನ ಮಾಡಿ ಹಂಗೇ ಆಗಲಿತ್ತೇಳಿ ಮಾಯ ಆತ್.

ಸ್ವಲ್ಪ ಕಾಲ ಕಳ್ದಮೇಲೆ ಒಂದು ಶುಭ ದಿನ ಮಗ ಹುಟ್ಟಿತ್ತ್. ರಾಜ ಕೇಳ್ದಂಗೆ ಆ ಮಗನ ಮಲ,ಮೂತ್ರಾದಿಗ ಸುವರ್ಣಮಯ ಆಗಿತ್ತ್. ರಾಜಂಗೆ ಬಾಳ ಸಂತೋಷ ಆತ್. ಸದಾ ಕಾಲ ಕಾವಲಿರುವಂಗೆ ನಂಬಿಕಸ್ತ ಸೇವಕರ್‌ನ ನೇಮಿಸಿತ್. ಸ್ವಲ್ಪ ಸಮಯಲೆ ರಾಜ ಬಾಳಷ್ಟ್ ಐಶ್ವರ್ಯ ಗಳಿಸಿತ್.

ರಾಜ ಎಷ್ಟ್ ಬಿಗಿ ಕಾವಲ್ ಹಾಕಿರೂ ಒಂದಿನ ಕಳ್ಳರ್ ಮಗನ ಅಪಹರಿಸಿದೊ. ಕಾಡ್‌ಲಿ ಒಂದು ಗುಹೆಲಿ ಅಡ್‌ಗಿಸಿ ಮಡ್‌ಗಿದೊ. ಕಳ್ಳರಿಗೂ ಸಾಕಷ್ಟ್ ಸುವರ್ಣ ಸಿಕ್ಕಿತ್. ರಾಜ ಮಗ ಕಳ್ದ ದುಃಖಿಲಿ ರಾಜ ಭಟರ್‌ನ ಹುಡ್ಕಿಕೆ ಕಳ್ಸಿದೊ. ಕಳ್ಳರಿಗೆ ಗೊತ್ತಾಗಿ ಹೆದ್ರಿಕೆ ಆತ್. ಇವನ ಕೊಂದರೆ ಎಲ್ಲಾ ಸುವರ್ಣ ಒಟ್ಟಿಗೆ ಸಿಕ್ಕಿದೆ, ತಕಂಡ್ ಪರಾರಿ ಆಕ್‌ತ ಗ್ಯಾನ ಮಾಡಿ, ರಾಜಕುಮಾರನ ಕೊಂದವೆ. ಅಲ್ಲಿ ಅವು ಯಾವ ಸುವರ್ಣನೂ ಸಿಕ್ಕದೆ ನಿರಾಶೆ ಆದವೆ. ಅಷ್ಟೊತ್ತಿಗೆ ರಾಜ ಭಟರ್ ಬಂದವೆ. ಕಳ್ಳರ್‌ನೂ ಸತ್ತ ರಾಜಕುಮಾರನೂ ತಕಂಡ್ ರಾಜಧಾನಿಗೆ ಬಂದವೆ. ಮಗನ ಶವನ ನೋಡಿ ರಾಜಂಗೆ ಬಾಳ ದುಃಖ ಆದೆ. ಕಳ್ಳರಿಗೆ ಮರಣ ದಂಡನೆ ವಿಧಿಸಿದೆ.

ಮಗನಿಲ್ಲದೆ ಈ ಐಶ್ವರ್ಯ ನಶ್ವರತ ಗೊತ್ತಾದೆ. ತನ್ನ ಅತಿ ಆಸೆ ಮಗಂಗೆ ಈ ದುರ್ಗತಿ ತಂದದ್‌ತೇಳಿ ಬಾಳ ದುಃಖ ಪಟ್ಟದೆ.

ಒಂದಿನ ತನ್ನ ಎಲ್ಲಾ ಐಶ್ವರ್ಯನೂ ಪ್ರಜೆಗಳಿಗೆ ಹಂಚಿ ಮಂತ್ರಿಗೆ ರಾಜ್ಯಭಾರ ಒಪ್ಪಿಸಿ ಹೆಣ್‌ನೊಟ್ಟಿಗೆ ಕಾಡಿಗೆ ಹೋದೆ. ದೇವರ ಧ್ಯಾನಲೇ ಕಾಲ ಕಳ್ದ್ ಪ್ರಾಣ ತ್ಯಾಗ ಮಾಡುವೆ.

-ಬಿಟ್ಟೀರ ಚೊಂದಮ್ಮ, ಶಂಭು, ಮುಂದುವರ್ದದೆ.

ಕವನ	ವಾಕ್ಯ	ನಲ್ಲೆ
ಅಮರ ಮಧುರ ಈ ಕವನ ಸಿಗಲಿ ನನಗೆ ತನುಮನ ಆಶೀರ್ವದಿಸಿ ನನ್ನ ಜನ ನಿಮಗೆ ನನ್ನ ಪ್ರೀತಿಯ ನಮನ	ಮಾತೇ ನನ್ನ ಮಾಣಿಕ್ಯ ಮನಸೇ ನನ್ನ ವೇದವಾಕ್ಯ ಪ್ರೀತಿಯೇ ನನ್ನ ಹೆತ್ತವರ ವಾಕ್ಯ ಇದೇ ನನ್ನ ಗೂಡವಾಕ್ಯ	ಹೇ.......ನನ್ನ ಪ್ರೀತಿಯ ನಲ್ಲೆ ನನ್ನಲ್ಲೇಕೆ ನಿನ್ನ ನೆನಪು ನಿನ್ನಿಂದಾಗಿ ಬರಿ ಕನಸು ಅದು ಎಂದು ನೆನಸು ನೀ ಮಾಡಬೇಕು ಗಟ್ಟಿ ಮನಸ್ಸು ಸುವರ್ಣ ಕೊಡಗಳ್ಳಿ

ಲೇಖಕರೇ, ಲೇಖನ ಪ್ರಕಟವಾಗಿಲ್ಲವೆಂದು ಚಿಂತೆಯೆ ? ಚಿಂತಿಸದಿರಿ, ಸಮಯ ಬಂದಾಗ ಖಂಡಿತ ಪ್ರಕಟಿಸುತ್ತೇವೆ.

ಅರೆಭಾಷೆಲಿ ಮಹಾಭಾರತ

ಪಾಂಡವ್ ತಪ್ಪಿಸಿಕಂಡೊ

-ಪ್ರೊ॥ ಪೂಜಾರಿರ ಮೊಣ್ಣಪ್ಪ

ಪಾಂಡವ್ ಹಿರಿಯವರ್‌ಂದ ಬಿಟ್ಟ್ ಕೊಟ್ಟ ಮ್ಯಾಲೆ ವಾರಾಣಾವತಕ್ಕೆಬಂದೊ. ಜನಗ ಅರ್ಧದಾರಿಗಂಟ ಬಂದ್ ಮನಸ್ಸಿಲ್ಲದ ಮನಸ್ಸ್‌ಂದ ಹಿಂದಕ್ಕೆ ಹೋದೊ. ವಿದುರ ರಾಜಕುಮಾರಂಗೆ ಹಿಂಗೆ ಹೇಳ್ತ್. ಯಾವಂಗೆ ಮುಂದಾಲೋಚನೆ ಇದ್ದರೆ ಅಂವ ಯಾವ್ದೆ ತರದ ಹಗೆಗಾರನ ಅಪಾಯಂದ ಹೊರ ಬರಕ್ಕ್. ಉಕ್ಕ್‌ಗಿಂತ ಹರ್ತ ಇರ್ಪ ಆಯ್ದ ಉಟ್ಟ್. ಬುದ್ಧಿವಂತಂಗೆ ನಾಶವಾಗುದರಂದ ರಕ್ಷಿಕಣಿಕೆ ಗೊತ್ತಿದ್ದದೆ. ಕಾಡ್ ಕಿಚ್ಚ್ ನೆಲಲಿ ಮಾಳಿಮಾಡಿರುವ ಎಲಿನ ಸುಡಿಕೆ ಸಾಧ್ಯೆ ಇಲ್ಲೆ. ಬುದ್ಧಿವಂತ ತನ್ನ ಶಕ್ತಿನ ನಕ್ಷತ್ರಗಳ ನೋಡಿ ತಿಳ್‌ಕಂಡದೆ. ಯುಧಿಷ್ಠಿರ ಈ ಮಾತ್‌ನ ನಂಗೇ ಹೇಳ್ದ್‌ತ ಗ್ಯಾನ ಮಾಡ್ತ್.

ಇದ್ ದುರ್ಯೋಧನನ ಗುಟ್ಟ್‌ನ ಕೆಣಿ ಮತ್ತೆ ಅದರ್‌ಂದ ಹೆಂಗೆ ತಪ್ಪಿಸಿಕೊಂಬದುತ ಹೇಳ್ತ್‌ತ ಯುಧಿಷ್ಠಿರ ಗ್ಯಾನ ಮಾಡ್ತ್. ಅದರ್ನ ಕುಂತಿ ದೇವಿಗೆ ಹೇಳ್ತ್. ಪಾಂಡವ್ ಹಸ್ತಿನಾಪುರಂದ ಹೊರಡ್‌ಕಾಕನ ತೇಜಸ್ಸ್‌ನ ಆನಂದ ಈಗ ದುಃಖದ ಮೋಡ ಆವರಿಸಿತ್. ಪಾಂಡವ್ ವಾರಾಣಾವತಕ್ಕೆಬಂದವರ್ನ ಅಲ್ಲಿನ ಜನಕೇಳಿ ಬಾಳ ಕುಷಿ ಪಟ್ಟ್ ಅವುಕೆ ಮರ್ಯಾದೆ ಮಾಡ್ದೊ. ತತ್ಕಾಲಕೆ ಮಾಡ್ದ ಮನೆಂದ ಅರಮನೆಗೆ ಪಾರಜನರ ಮಾರ್ಗದರ್ಶನ ಪ್ರಕಾರ ಬಂದೊ. ಆ ಅರಮನೆ ಹೆಸ್ರ್ 'ಶಿವಂ" ಅಂದರೆ ಜೀವನಲಿ ಮುಂದೆ ಬರುವಂತ ಆದರೆ ಅದ್‌ಕೆ ವಿರೋಧವಾದ ಹಾಸ್ಯವಾಗಿತ್ತ್. ವಿದುರ ಹೇಳ್ದ ಮಾತ್‌ನ ಗ್ಯಾನ ಮಾಡಿಕಂಡ್ ಯುಧಿಷ್ಠಿರ ಅರಮನೆನ ಪ್ರತಿಯೊಂದ್ ಜಾಗ ಬುಡದಂಗೆ ನಿಗಾ ಇಟ್ಟ್ ನೋಡ್‌ತ್ತ ಬಾತ್. ಯುಧಿಷ್ಠಿರಂಗೆ ಅರಮನೆ ಎಲ್ಲಾ ಬ್ಯಾಗ ಕಿಚ್ಚಿ ಹಚ್ಚಿಕಂಬ ಪದಾರ್ಥಂದ ಮಾಡ್ದ್‌ತ ಗೊತ್ತಾತ್.

ಈ ಅರ್ಗ್‌ನ ಮನೆ ಯಾವ ಸಂಶಯು ಬರದಂಗೆ ಈ ಆಪತ್ತಿಂದ ತಪ್ಪಿಸಿಕೊಣಕುತ ಗ್ಯಾನ ಮಾಡ್ತ್. ವಿದುರ ಮಾಳಿ ಕೊರೆವ ಒಬ್ಬ ನಿಪುಣ ಪರಿಣಿತ ಕೆಲಸಗಾರನ ಪಾಂಡವರ ಹತ್ರ ಗುಟ್ಟುಲಿ ಕಳ್ಸಿ ಅವುಕೆ ಸಾಯ ಮಾಡಿಕೆ ವಿದುರ ಕಳ್ಸಿದ್‌ಂತ ಹೇಳ್ತ್. ಪಾಂಡವು ಮಾತ್ರ ನೋಡಿಕೆ ಏನು ಗೊತ್ತಿಲದವರಂಗೆ ನಟ್ಸಿ ಬಾಳ ಎಚ್ಚರಂದ ಇದ್ದೊ. ಮಾಳಿ ಕೊರೆವ ತನ್ನ ಕೆಲ್ಸನ ಸುರುಮಾಡಿ ಕೆಲವ್ ತಿಂಗಳ್‌ಲಿ ಅರಮನೆಂದ ಆಳದ ಸುರಂಗನ ಕೊರಿತಾ ಹೋತ್. ಈ ವಿಶ್ಯನ ಪುರೋಹಂಗೆ ಗೊತ್ತಾತ್‌ಲೆ. ಅಂವ ಅರಮನೆ ಹೆಬ್ಬಾಗಿಲ್ ಹತ್ರ ಬಂದ್ ವಾಸದ ಮನೆ ಮಾಡಿಕಂಡ್ ಇತ್ತ್. ಪಾಂಡವ್ ಹಗ್‌ಲೆಲ್ಲಾ ಬ್ಯಾಟೆಗೆ ಹೋಗ್ವು ನೆವನ ಮಾಡಿ ಕಂಡ್ ಕಾಡೆಲ್ಲಾ ಸುತ್ತಿ, ಕಾಡಿಂದ ತಪ್ಪಿಸಿಕಂಡ್ ಹೋಪ ದಾರಿಗಳ ಕಂಡ್‌ಹಿಡ್ದ್ ಕೊಂಡ್‌ಬಾತಿದ್ದೋ. ಹಾಂಗೆ ಒಂದ್ ವರ್ಷ ಕಳೆಯಕನ ಪುರೋಹನ ಇನ್ನ್‌ಹೆಚ್ಚ್ ದಿನ ಕಾಯದು ಬ್ಯಾಡತ್ತೇಳಿ ಅವಂಗೆ ವಹಿಸಿದ ಕೆಲಸ ಮಾಡಕುತ ಗ್ಯಾನ ಮಾಡ್‌ತಾ ಇತ್ತ್.

ಯುಧಿಷ್ಠಿರ ಅಂವ್ನ ತಮ್ಮಂದರ ಕರ್ದ್ ಇಲ್ಲಿಂದ ಬ್ಯಾಗ ತಪ್ಪಿಸಿಕಂಡ್ ಹೋಕುತಾ ಯೋಜ್ನೆ ಹಾಕಿತ್. ಕುಂತಿ ಆ ದಿನ ಕತ್ತಲೆಗೆ ಬಾಳ ಲಾಯಕ್ಕಾದ ಪದಾರ್ಥದ ಉಂಬಕೆ ತಯ್ಯಾರ್ ಮಾಡಿ ಅಲ್ಲಿದ್ದ ಕೆಲ್ಸದವುಕೆ ಲಾಯ್‌ಕ್‌ಲಿ ನಿದ್ರೆ ಬರುವಷ್ಟರ ಮಟ್ಟಿಗೆ ಉಂಬಕೆ ಕೊಟ್ಟಿತ್. ಇರ್ಲ್ ಭೀಮ ಅರ್ಗ್‌ನ ಅರಮನೆಗೆ ಕಿಚ್ಚಿ ಕೊಟ್ಟ್ ಸುರಂಗದ ದಾರೀಲಿ ಕತ್ತಲೇಲಿ ಅರಮನೆಂದ ಹೊರ್ಗೆ ಹೋಗಿ ಪಾಂಡವ್ ಮತ್ತೆ ಕುಂತಿ ಕಾಡ್ ಸೇರಿ ಕಂಡೊ. ಅಲ್ಲಿಂದ ಕೆಲ್ಸದವು ಗಡದ್ದಾಗಿ ಉಂಡದರಿಂದ ಗೊರ್ಕಿ ಹೊಡ್‌ಕಂಡ್ ನಿದ್ರೆ ಮಾಡ್‌ತ್ತಿದ್ದೊ. ಅರಗ್‌ನ ಅರಮನೆ ಜೋರಾಗಿ ಹೊತ್ತಿ ಕಂಡ್ ಉರ್‌ದರ್ನ ಅಲ್ಲಿನ ಜನ ನೋಡಿ ಹಾಹಾತ ಬೊಬ್ಬೆ ಹಾಕಿದೊ. ಪುರೋದನನ ಹೆಬ್ಬಾಗ್‌ಲ್ ಹತ್ರ ಇದ್ದರಿಂದ ಅಂವಗೆ ಕಿಚ್ಚಿ ತಗಲಿ ಅಂವ ಅಲ್ಲಿಂದ ಓಡಿಕಾಗದೆ ಮನೆ ಒಳಗೆ ಬೆಂಕಿಗೆ ಸಿಕ್ಕಿ ಸತ್ತತ್. ಅಂವ ಮಾಡ್ದ ಪಿತಲಾಟ ಅವಂಗೆ ತಿರ್ಗಿ ಬೀತ್.

ಊರ್‌ನ ಜನ ಈ ಕೆಲ್ಸ ಧುರ್ಯೋಧನಂದೆ. ಅಂವ ಪಾಪ ಇಲ್ಲದ ಪಾಂಡವರ್ನ ಕೊಂದ್ ಹಾಕಿತ್. ವಾರಾಣಾವತರ ಜನ ಹಸ್ತಿನಾಪುರಕೆ ಈ ವರ್ತಮಾನನ ಕಳ್‌ಸಿದೊ. "ಪಾಂಡವು ಇದ್ದ ಅರಮನೆ ಕಿಚ್ಚಿಂದ ಉರುದೋತು. ಅದರ್ಲಿ ಇದ್ದವು ಯಾರ್ ಬದ್‌ಕಿತ್ತಿಲ್ಲೆತ ಹಸ್ತಿನಾಪುರಲಿದ್ದವುಕೆ ತಿಳಿಸಿದೋ. ಈ ಸಂಗತಿನ ತಿಳ್ದ ಧೃತರಾಷ್ಟ್ರಂಗೆ ಬಾಳ ವ್ಯಸನ ಆತ್. ವ್ಯಾಸ ಮಹರ್ಷಿ ಧೃತರಾಷ್ಟ್ರನ ಮನ್‌ಸ್‌ನ ಸ್ಥಿತಿನ ಬಾಳ ಲಾಯಕಲಿ ವರ್ಣಿಸುಟು. ಒಂದ್ ಕೆರೆ ಆಳವಾಗಿದ್ದರೆ ಅದರ ಆಳಲಿ ನೀರ್ ಕ್ವಾಟಾಗಿ ಇದ್ದ್ ಮ್ಯಾಲೆ ಬಿಸಿಯಾಗಿರುವಂಗೆ ಅಂವನ ಮನ್‌ಸ್‌ಲಿ ಮ್ಯಾಲೆ ಖುಷಿಯಾಗಿ ಬೆಚ್ಚನೆ ಆಗಿದ್ದ್ ಆಳಲಿ ದುಃಖ ಇತ್ತ್.

ಧೃತರಾಷ್ಟ್ರ ಮತ್ತೆ ಅಂವನ ಮಕ್ಕ ಪಾಂಡವರ ಸಾವ್‌ನ ಸುದ್ದಿ ಕೇಳಿ ಬಟ್ಟೆ ಬಿಚ್ಚಿ ಬಂದ್ ವಸ್ತ್ರನ ಸುತ್ತಿಕಂಡ್ ಪಾಂಡವ್ ಸತ್ತದ್ದಕ್ಕೆ ದುಃಖ ತೋರಿಸಿಕ್ಕಾಗಿ ಹೊಳೆ ಹತ್ರ ಹೋಗಿ ಸತ್ತವುಕೆ ಮಾಡುವ ಪದ್ಧತಿಗಳ್ನ ಎಲ್ಲಾ ಮಾಡ್ದೊ. ಅವರ ದುಃಖನ ತೋರ್ಸುವ ನಟನೆ ಆಗಿತ್‌ತ್ತದ್. ಆದರೆ ವಿದುರ ಮಾತ್ರ ಯಾವ ರೀತಿಯ ಆಚರಣೆ ಮಾಡದೆ ಇದ್ದರಿಂದ ಅವನ ತತ್ವಜ್ಞಾನದ ಪ್ರಭಾವತ ಜನ ತಿಳ್‌ಕಂಡ್ರು ನಿಜವಾದ ಸಂಗತಿ ಪಾಂಡವು ಬದ್ಕಿ ಒಳೋತ್ತೇಳ್ದು ಅವಂಗೆ ಗೊತ್ತಿತ್ತ್. ವಿದುರಂಗೆ ಆದ ದುಃಖ ಪಾಂಡವು ಸತ್ತಳೋತ ಅಲ್ಲ, ಅದರ ಬದ್ಲ್ ಪಾಂಡವು ಅವರ ಜೀವಮಾನಲಿ ಓಡಾಡಿಕಂಡ್ ಆಗಿ ಹೋತ್‌ಲ್ಲಾಂತ ದುಃಖ ಪಟ್ಟಿತ್. ಈ ವಿಷ್ಯನ ಕೇಳಿ ಭೀಷ್ಮಂಗೆ ಬಾಳ ದುಃಖ ಆತ್. ಆದ್ರೆ ನಡ್ದ ಸಂಗತಿನ ಕೇಳಿ ಸುಮ್ಮನಾತ್.

ರಾತ್ರೆಲ್ಲಾ ಕಾಡ್‌ಲಿ ನಡ್ದ್ ಕುಂತಿ ಮತ್ತೆ ನಕುಲ, ಸಹದೇವನೂ ಸಹ ಬಾಳ ಸುಸ್ತಾಗಿದ್ದೊ. ಕುಂತಿನ ಹೆಗ್‌ಲ್ ಮ್ಯಾಲೆ, ನಕುಲ ಸಹದೇವರ್ನ ಸೊಂಟಲಿ ಎತ್ತಿಕಂಡ್, ಯುಧಿಷ್ಠಿರ

ಮಹಾಭಾರತಕ್ಕೂ ಗೌಡರಿಗೂ ಸಂಬಂಧವಿದೆಯೆಂಬುದು ಬೆಳಕಿಗೆ ಬರುತ್ತಿದೆ, ಸಂಶೋಧನೆ ಆದಾಗ ಎಲ್ಲವೂ ತನ್ನಷ್ಟಕ್ಕೆ ತಿಳಿಯುತ್ತದೆ.

ಮತ್ತೆ ಅರ್ಜುನನ ಎರಡ್ ಕಡೆ ಹಿಡ್ದ್‌ಕಂಡ್ ಕಾಡ್‌ಲಿ ದೊಡ್ಡ ಕಾಟಿ ಹೋದಂಗೆ ಭೀಮಾ ನಡ್‌ಕಂಡ್, ಮರ ಬಳ್ಳಿಗಳ ಬಗ್‌ದ್‌ಕಂಡ್ ಗಂಗಾನದಿ ಏರಿಲಿ ಹೋಕಾಕನ ಪಾಂಡವು ಬಾದು ಗೊತ್ತಿದ್ದ್ ಇವರ್‍ನ ಕಾಯ್ತಾ ಇದ್ದ ಅಂಬಿಗ ದೋಣಿ ಹತ್ತಿ ನಡ್ಸಿ ಇನ್ನೊಂದ್ ದಡ ಸೇರಿಸ್‌ತ್. ಅಲ್ಲಿಂದ ಪುನಃ ಕಾಡಿಲೇ ನಡ್ದ್‌ಕಂಡ್ ಹಞ್ಞಾ ದೂರಹೋಕಾಕನ ಕುಂತಿ ಹೇಳ್ತ್. "ಧೃತರಾಷ್ಟ್ರ ಮಕ್ಕ ಬಂದ್ ನನ್ನ ಮುತ್ತಿಗೆ ಹಾಕಿರೂ ಸರಿ, ನಾನ್ ಇಲ್ಲಿಂದ ಹೋದುಲ್ಲೆತ್ತೇಳಿ ಕುದ್ದ್ ಕಾಲ್ ನೀಂಡಿ ಮಲ್ಗೀತ್. ಮತ್ತೆ ನಿದ್ರೆ ಹೋತ್. ಅಲ್ಲಿ ಕಾಡ್ ಪ್ರಾಣಿಗಳ ಕಿರುಚುವ ಸದ್ದ್ ಕೇಳ್‌ತಿತ್. ಭೀಮಾ ಕಾಡ್‌ಲಿ ಒಬ್ಬನೆ ನೀರ್ ಹುಡ್ಕಿಕಂಡ್ ಹೋಗಿ ಬಂದ್ ಕೆರೆನ ಕಂಡತ್. ಅಂವ ಹೊದ್ದಿದ್ದ ಬಟ್ಟೆನ ತೆಗ್ದ್ ನೀರ್ ಚಂಡಿ ಮಾಡಿ ತಾವರೆ ಎಲೆಗಳ್ನ ಬಟ್ಟೆಗಳ ಮಾಡಿ ನೀರ್ ತಕಂಡ್ ಅವ್ವ ಕುಂತಿಗೆ ಮತ್ತೆ ಪಾಂಡವುಕೆ ಕೊಟ್ಟಿತ್. ಭೀಮನ ಬುಟ್ಟ್ ಬ್ಯಾರೆವು ಎಲ್ಲಾ ನಿದ್ರೆ ಹೋದೊ. ಭೀಮಾ ಒಬ್ಬನೆ ಗ್ಯಾನ ಮಾಡಿಕಂಡ್ ಹೇಳ್‌ಕಂಡತ್. ಗಿಡ ಬಳ್ಳಿಗ ಒಬ್ಬರನ್ನೊಬ್ಬ ಹೊಂದಿಕಂಡ್ ಬದ್ಕುವೆ ಈ ಕಾಡ್ಲಿ. ಆದ್ರೆ ದುಷ್ಟ ಧೃತರಾಷ್ಟ್ರ ಮತ್ತೆ ಅವನ ಮಂಜ ಧುರ್ಯೋಧನ ಯಾಕೆ ನಮಿಗೆ ಹಿಂಗೆ ಯಾಗೋಳು ತೊಂದ್ರೆ ಕೊಟ್ಟವೆ?

ಯೌವ್ವನ ಈ ರೀತಿ ಮಾಡ್ಸಿದೆಯಾ? ದಾರಿಲಿ ಪಾಂಡವು ಭಗವಾನ್ ವ್ಯಾಸರ್‌ನ ಕಂಡೊ. ಕುಂತಿ ಅವುಕೆ ನಡ್ದ ದುಃಖ ಸಂಗತಿನ ಹೇಳ್ತ್. ಯಾವ ಒಬ್ಬ ಒಳ್ಳೆ ಮನುಸ ಯಾಗಳೂ ಒಳ್ಳೆಯವನಾಗಿಯೇ ಇರ್‌ಕೆ ಸಾಧ್ಯ ಇಲ್ಲೆ. ಹಂಗೆನೆ ಒಬ್ಬ ದುಷ್ಟ ಯಾಗೋಳು ದುಷ್ಟ ಆಗಿರಿಕೆ ಸಾಧ್ಯ ಇಲ್ಲೆ. ಅದೇ ರೀತಿ ಯಾರೊಬ್ಬರೂ ಒಳ್ಳದಾಗಲಿ ಕೆಟ್ಟದಾಗಲಿ ಮಾಡದೇ ಇಲ್ಲೆ. ಪ್ರತಿಯೊಬ್ಬನು ಅಂವ ಮಾಡ್ದ ಕರ್ಮಕ್ಕೆ ಪ್ರತಿಫಲನ ಅನುಭವಿಸೀ ಅನುಭವಿಸಕು. ದುಃಖಕೆ ದಾರಿ ಮಾಡಿಕೊಡ್‌ಬ್ಯಾಡ". ವ್ಯಾಸ ಮಹರ್ಷಿ ಹೇಳ್ದಂಗೆ ಅವು ಹಾರವರ ವೇಷ ಹಾಕಿ ಕಂಡೊ. ಅಲ್ಲಿಂದ ಅವು ಏಕ ಚಕ್ರ ಪಟ್ಟಣಕ್ಕೆ ಹೋರ್‍ರೊ. ಅಲ್ಲಿ ಹೋಗಿ ಒಬ್ಬ ಹಾರವನ ಮನೆ ಸೇರ್‍ರೊ.

-ಮುಂದುವರ್ದದೆ.

ನುಡಿ ಮುತ್ತುಗ

ಸ್ನೇಹಿತರ ಒಟ್ಟಿಗೆ ಹೊರ್‍ಗೆ ಹೋಕನ
ಮರ್‍ತವೆ ಅಪ್ಪ, ಅವ್ವ ಮನೆಯವರನ।।
ಸಿಗರೇಟ್ ಬಾಯಿಗೆ ಮಡ್ಗ್‌ಕನ ಮರ್‍ತವೆ
ಅಪ್ಪ ಅವ್ವಹೇಳ್ದ ಹಿತವಚನ ಮಾತ್‌ನ।।
ನೈಂಟಿ ಹೊಟ್ಟೊಳ್ಗೆ ಇಳಿಯಕನ
ಬಂದದೆ ಇವ್ರಬಾಯಿಂದ ನುಡಿಮುತ್ತುಗ।।

-ನೆಡುವೆಟ್ಟಿರ ಎನ್. ಬನ್ನಿ.

ನಂಗೆ ಸ್ವೀಟ್ಸ್ ಕೊಡಿಕೆ ಬಾತ್

ನಮ್ಮ ಆಫೀಸ್‌ಲಿ 'ಮ್ಯಾನೇಜರ್' ಹುದ್ದೆಗಾಗಿ 4 ಜನ ಆಯ್ಕೆ ಆದೊ. ಒಂದೇ ಪೋಸ್ಟ್ ಖಾಲಿ ಇದ್ದರ್‌ಂದ ಎಂ. ಡಿ. ಅವ್ಕೆ ಹೇಳ್ತ್. ನೀವ್ ನಾಲ್ಕ್ ಜನ್ರೂನೂ ಸರಿಸಮನಾಗಿ ಈ ಹುದ್ದೆಗೆ Qualified ಆಗಿರುವ ಕಾರಣಂದಾಗಿ ನಿಮಿಗೆ ನಾನ್ ಒಂದೇ ಒಂದ್ Common ಪ್ರಶ್ನೆ ಕೇಳ್ನೆ. ಯಾರ ಉತ್ತರ ನಂಗೆ ಸರಿತ ಅನ್ನಿದೆ ಅವ್ಕೆ ಈ ಕೆಲಸ ಕೊಟ್ಟನೆ". ಈ ನಾಲ್ಕ್ ಜನ "ಸರಿ" ತೇಳಿ ಒಪ್ಪಿಕಂಡೊ. ಆಗ MD ಅವನ ಎಡಗಡೆ ಕುದ್ದಂವಂಗೆ ಪ್ರಶ್ನೆ ಕೇಳ್ತ್.

"ನೀವ್ ಹೇಳಿ- ಈ ಜಗತ್ತ್‌ಲಿ ಅತ್ಯಂತ ಚುರುಕಾದ ವಸ್ತು ಯಾವುದು?" ಮೊದಲನೆ ಅಭ್ಯರ್ಥಿ ಹೇಳ್ತ್." ಸಾರ್ ನಮ್ಮ ಮನಸ್ಸ್‌ಲಿ ಮಿಂಚಿದ ಹಂಗೆ ಮುನ್ಸೂಚನೇನೆ ಇಲ್ಲದೆ, ತಟ್ಟನೆ ಹೊಳೆವ 'ಯೋಚನೆ'. ಈ ಜಗತ್ತ್‌ಲೇ ಅತ್ಯಂತ ಚುರ್‌ಕಾದ ಸಂಗತಿತ್ತೇಳಿ ನನ್ನ ಭಾವನೆ"."ಹೌದು ಹೌದು, MD ಹೇಳ್ತ್. "ನಿಜ ಯೋಚನೆ ಅತ್ಯಂತ ಚುರುಕಾದ ಸಂಗತಿ. Good". ಎರಡನೇ ಅಭ್ಯರ್ಥಿನ ಕಡೆ ತಿರುಗಿ "ನೀವ್ ಏನ್ ಹೇಳ್ರೆ? "ಕಣ್ಣಿನ ರೆಪ್ಪೆ ಬಡಿತ ಸಾರ್. ನಮಿಗೆ ಅರಿವೇ ಆಗದಷ್ಟ್ ಚುರ್‌ಕ್‌ಲಿ ನಾವು ನಮ್ಮ ಕಣ್ಣಿನ ರೆಪ್ಪನೆ ದಿನಕೆ ಅದೆಷ್ಟ್ ಸಾವಿರ ಸಲ ಬಡ್ದ್ ಬುಟ್ಟವೆ?

"Excellent ಹೌದು, Blinking of an eye-Praction of a Secondಲಿ ಆಗಿ ಹೋದೆ."

ಅಷ್ಟೊತ್ತಿಗೆ ಮೂರನೆ ಅಭ್ಯರ್ಥಿ ಯೋಚ್ನೆನೆ ಮಾಡಿ ಹೇಳ್ತ್. " ಸಾರ್ ನಮ್ಮ ಊರ್‌ಲಿ ತೋಟದ ಮನೆ ಉಟ್ಟು. ಮನೆಯೊಳಗಿರುವ ಒಂದೇ ಒಂದು ಗುಂಡಿ ಒತ್ತಿರೆ ಸಾಕ್. ಇಡೀ ತೋಟದ ತುಂಬಾ ಲೈಟ್‌ಗ "ಫಟ್'ತೇಳಿ ಹೊತ್ತಿಕಂಡದೆ. ಅದ್ರಿಂದ ದೀಪದ ಗುಂಡಿ ಒತ್ತುದು ನಂಗೆ ಗೊತ್ತಿರುವಂಗೆ ಅತ್ಯಂತ ವೇಗವಾದ ವಿಷಯ".


ಇದ್ನ ಕೇಳಿ MD ಗೆ ಅಂವ ಹುಡುಕುತ್ತಿದ್ದ ಅಭ್ಯರ್ಥಿ ಸಿಕ್ಕಿತ್ ತೇಳುವಷ್ಟ್ ಕುಷಿ ಆತ್. "ಹೌದು ಹೌದು, ಲೈಟ್‌ನ ವೇಗಕಿಂತ ಮತ್ತೊಂದಿಲ್ಲೆ ಈ ಜಗತ್ತ್‌ಲಿ". 4 ನೇ ಅಭ್ಯರ್ಥಿ ಕಡೆ ತಿರುಗಿ "ನೀವ್ ಎಂತ ಹೇಳ್ರೆ?ತ್ತೇಳ್ತ್. "ಸಾರ್ ಈ ಮೂವರ ಉತ್ತರಗಳಿಕಿಂತ ಇನ್ನೂ ವೇಗವಾದ ವಸ್ತು "ಭೇದಿ" ಸಾರ್. "What?" MD ಗೆ ಮತ್ತೆ ಉಳ್ದ 3 ಜನಕ್ಕೆ ಇದ್ನ ಕೇಳಿ ಆಶ್ಚರ್ಯಆಗಿ ಅವು ಕಣ್ಣರಳಿಸಿ ಬಾಯಿ ಬುಟ್ಟ್‌ಕಂಡ್ 4 ನೇ ಯಂವನ ಮುಖನೆ ನೋಡ್‌ದೊ."ಅಲ್ಲಾ ಮಿಸ್ಟರ್ "MD ಹೇಳ್ತ್. "ಇವು ಯೋಚನೆ ಮಾಡ್ದು Fast ತೇಳುವೆ. ಇವು ಕಣ್ಣು ಮಿಟುಕಿಸುವುದು ಅತ್ಯಂತ ವೇಗಲಿ ಅದ್ ತೇಳುವೆ. ಇವು ಲೈಟ್ ಹೊತ್ತಿಕಂಬದು ತೇಳುವೆ. ನೀವ್ ಏನ್ ತಮಾಷೆ ಮಾಡ್ತಾ ಒಳ್ರಾ ಹೆಂಗೆ?"

"ತಮಾಶೆ ಅಲ್ಲ ಸಾರ್, "4 ನೇ ಯಂವ ಸೀರಿಯಸ್ ಆಗಿ ಹೇಳ್ತ್. "ಸಾರ್ ನಾನ್ ಹೋದ ಸರ್ತಿ ಒಂದ್ ಕಡೆ ಇಂಟರ್‌ವ್ಯೂಗೆ ಹೋಕನ ನಂಗೆ Stomach upset ಆಗಿ ಭೇದಿ ತಡಿಯಕ್ಯಾತ್ಲೆ, ನಾನ್ ಇಂಟರ್‌ವ್ಯೂ ಹಾಲಿಂದ ಹೊರಗೆ ಹೋಗಿ ಲ್ಯಾವೆಟರಿ ಹುಡ್‌ಕಿಕಂಡ್ ಓಡ್ದೆ. ಆಗ ಎಲ್ಲಿ ಸಾರ್? ನಂಗೆ ಯೋಚನೆ ಮಾಡುವಷ್ಟ್ ಟೈಂ ಇಲ್ಲೆ. ಕಣ್ಣ್ ಮಿಟುಕಿಸಿ, ಓಡಿ ಹೋಗಿ ಲೈಟ್ ಸ್ವಿಚ್ ಹಾಕುವಷ್ಟರ್ಲಿ ಪ್ಯಾಂಟಿಲೇ ಎಲ್ಲಾ ಆಗಿಹೋತ್."

ಮೊನ್ನೆ ಈ 4 ನೇ ಯಂವ ನಂಗೆ ಸ್ವೀಟ್ ಕೊಡಿಕೆ ಬಾತ್. ಕೆಲ್ಸ ಅವಂಗೇ ಸಿಕ್ಕಿದ್ ಗಡ.

-ಎಡಿಕೇರಿ ಸುದರ್ಶನ್, ಬೆಂಗಳೂರು.

ಕಾವೇರಿ ಸಂಕ್ರಮಣದಂದು ಗದ್ದೆಗೆ ಬೆತ್ತ್‌ಕುತ್ತಿ ಹಿಟ್ಟು, ಫಲಪುಷ್ಪವಿಟ್ಟು ಪಾಂಡವರನ್ನು ಕೂಹೂ ಎಂದು ಕರೆಯುವ ಪದ್ಧತಿ ಗೌಡರಲ್ಲಿದೆ.



ಮನೆ ಬಾಡಿಗೆಗೆ ಲಭ್ಯವಿದೆ : ವಿಜಯನಗರ ನಾಲ್ಕನೇ ಹಂತ, 2 ನೇ ಘಟಕದ ನಿವೇಶನ ಸಂಖ್ಯೆ 7485 ರಲ್ಲಿ '30 X 20' ರಲ್ಲಿ ನಿರ್ಮಿಸಿದ ಮನೆಯೊಂದು ಸೌಲಭ್ಯದೊಂದಿಗೆ ಬಾಡಿಗೆ / ಭೋಗ್ಯಕ್ಕೆ ಲಭ್ಯವಿದೆ. ಖಾಯಿಸುದಾರರು ಕೂಡಲೇ ಸಂಪರ್ಕಿಸಿ. ದೂರವಾಣಿ ಸಂಖ್ಯೆ : 2404290



ಗಣಪಯ್ಯ

ನಿಧನ : ಸೋಮವಾರಪೇಟೆ ತಾಲೂಕು, ಎರೆಪಾರೆ, ಗೋಣಿಮಾರೂರು ನಿವಾಸಿ ಕುಂಟುಪುಣಿ ಗಣಪಯ್ಯನವರು ದಿನಾಂಕ 2-4-2004 ನೇ ಶುಕ್ರವಾರ ದಿನ ವೈಕುಂಠವಾಸಿಯಾದರು. ಇವರಿಗೆ ವರ್ಷ ಪ್ರಾಯವಾಗಿತ್ತು. ದಿವಂಗತರು ಪತ್ನಿ 2 ಪುತ್ರರು, 3 ಪುತ್ರಿಯರಲ್ಲದೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಸ್ವಗೃಹದಲ್ಲಿ ದಿನಾಂಕ 17-4-2004 ರಂದು ತಿಥಿ ಕರ್ಮಾಂತರವು ನಡೆಯಲಿದೆ. ಆಹ್ವಾನ ಪತ್ರಿಕೆ ಸಿಕ್ಕಿದವರು ಇದನ್ನೆ ವೈಯಕ್ತಿಕ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರುವಂತೆ ವಿನಂತಿ.

ಸಂಗಾತಿ ಉದ್ಯೋಗ ವಾರ್ತೆ

ಪೈಲೆಟ್ : ಭಾರತೀಯ ವಾಯು ಪಡೆಯಲ್ಲಿ 24 ಶಾರ್ಟ್ ಸರ್ವೀಸ್ ಕಮಿಷನ್ಸ್ (ಮಹಿಳೆರು) ಪ್ಲೈಯಿಂಗ್ (ಪೈಲೆಟ್) ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅವಿವಾಹಿತರಾಗಿರಬೇಕು. 2-1-82 ಹಾಗೂ 1-1-1986 ರ ನಡುವೆ ಜನಿಸಿರಬೇಕು. ಪಿಯುಸಿಯಲ್ಲಿ ಭೌತಶಾಸ್ತ್ರ ಹಾಗೂ ಗಣಿತ ಅಭ್ಯಸಿಸಿದ ಯಾವುದೇ ಪದವೀಧರರು ಅರ್ಜಿ ಸಲ್ಲಿಸಬೇಕು. ಅಂತಿಮ ಪದವಿಯಲ್ಲಿ ಓದುವವರು ಸಹ ಅಪ್ಲೈ ಮಾಡಬಹುದು. ಎತ್ತರ 162.5 c.m. ಪಾದಗಳು ಉದ್ದ 99 cm. 74 ವಾರಗಳ ತರಬೇತಿ. ತರಬೇತಿಯ ನಂತರ 10+5 ವರ್ಷಗಳ ಸೇವೆಗೆ ಅವಕಾಶ. ತರಬೇತಿ ಸಮಯದಲ್ಲಿ 8000/- ಸಂಬಳ. ಪ್ರಾರಂಭಿಕ ವೇತನ 17,700/- ಹೆಚ್ಚಿನ ಮಾಹಿತಿಗಾಗಿ ಎಂಪ್ಲಾಯಿಮೆಂಟ್ ನ್ಯೂಸ್‌ನ ಮಾರ್ಚಿ 27 ರಿಂದ ಏಪ್ರಿಲ್ 2 ರ ಸಂಚಿಕೆ ನೋಡಿ. ವಿಳಾಸ : Post Bag No. 001, Narman Bhavan Post Office, New Delhi - 110011 ಅರ್ಜಿ ಸಲ್ಲಿಸಲು ಕೊನೆ ದಿನಾಂಕ 15-5-2004.

ಗ್ರೌಂಡ್ ಡ್ಯೂಟಿ ಆಫೀಸರ್ : ಭಾರತೀಯ ವಾಯುಪಡೆಯಲ್ಲಿ ಯುವಕರಿಗಾಗಿ ಗ್ರೌಂಡ್ ಡ್ಯೂಟಿ ಆಫೀಸರ್ಸ್ ಕೋರ್ಸ್ ಹಾಗೂ ಯುವತಿಯರಿಗಾಗಿ ಶಾರ್ಟ್ ಸರ್ವೀಸ್ ಕಮೀಷನ್ಸ್ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಂಜಿನಿಯರ್, ಕಾನೂನುಪದವೀಧರರು, ಸ್ನಾತಕೋತ್ತರ ಪದವೀಧರರು, ವ್ಯವಸ್ಥಾಪಕ ಪದವೀಧರರು ಕಲೆ, ವಿಜ್ಞಾನ, ವಾಣಿಜ್ಯ ಪದವೀಧರರಿಗಾಗಿ ಅರ್ಜಿ ಕರೆದಿರುವರು. 117 ಗ್ರೌಂಡ್ ಡ್ಯೂಟಿ ಆಫೀಸರ್ಸ್ ಕೋಸ್ ಪುರುಷರು ಹಾಗೂ 26 ಶಾರ್ಟ್ ಸರ್ವೀಸ್ ಕಮಿಷನ್ಸ್ ಕೋರ್ಸ್ (ಮಹಿಳೆಯರು) ಅರ್ಜಿ ಹಾಕಲು ಅರ್ಹರು. ವಯೋಮಿತಿ ಪದವೀಧರರು 2-1-1982 ರಿಂದ 1-1-1985 ರ ನಡುವೆ ಜನಿಸಿದವರಾಗಿರಬೇಕು. 52 ವಾರಗಳ ಟ್ರೈನಿಂಗ್ ಇದ್ದು ತಿಂಗಳಿಗೆ 8000/- ಸಂಬಳ, ತರಬೇತಿ ನಂತರ ಪ್ಲೈಯಿಂಗ್ ಆಫೀಸರ್ಸ್ ರ್‍ಯಾಂಕ್ ಕೊಡಲಾಗುವುದು. ನಂತರ 15,000/- ಸಾವಿರ ಆಕರ್ಷಕ ವರಮಾನ. ಹೆಚ್ಚಿನ ವಿವರಗಳಿಗೆ ಎಂಪ್ಲಾಯಿಮೆಂಟ್ ನ್ಯೂಸ್ ಪೇಪರ್‌ನ ಮಾರ್ಚಿ 27 ಏಪ್ರಿಲ್ 2 ಸಂಚಿಕೆ ನೋಡುವುದು. ವಿಳಾಸ : Command Education Officer, Head Quarters, Training Compound, 9 AFJ Nagar, P.O. Hebbal Bangalore-560 006 ಸಲ್ಲಿಸಲು ಕೊನೆ ದಿನಾಂಕ 30-4-2004 ಸದುಪಯೋಗ ನಿಮ್ಮದು, ತ್ವರೆ ಮಾಡಿ.

ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು : ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 570 ಸ್ಥಾನಗಳಿದ್ದು ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು. ವಯಸ್ಸು ಮೇ 4 ಕ್ಕೆ 18 ರಿಂದ 35 ವರ್ಷದವರಾಗಿರಬೇಕು. ಕೊನೆ ದಿನಾಂಕ 4-5-2004. ಅರ್ಜಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ದೊರೆಯುತ್ತದೆ.

ಸಾರ್ವತ್ರಿಕ ಚುನಾವಣೆ -2004

ಕ್ಷೇತ್ರಗಳು	ಬಿ.ಜೆ.ಪಿ.	ಕಾಂಗ್ರೆಸ್	ಜನತಾದಳ	ಜನತಪಕ್ಷ	ಕನ್ನಡನಾಡು	BSP		
ಮಡಿಕೇರಿ	ಕೊಂಬಾರನ ಬೋಪಯ್ಯ	ಮುಂಡಂಡ ನಾಣಯ್ಯ	ದಂಬೆಕೋಡಿ ಮಾದಪ್ಪ	ಮೇರಿಯಂಡ ಸಂಕೇತ್ ಪೂವಯ್ಯ		ಕುಂಞ ಅಬ್ದುಲ್ಲ		
ಸೋಮವಾರ ಪೇಟೆ	ಅಪ್ಪಚ್ಚುರಂಜನ್	ಜಿ. ವಿಜಯ	ವಿ.ಎ.ಶಶಿಧರ್	ರಾಜೇಶ್ ಗುಂಡೂರಾವ್	ಕೆ. ಟಿ. ಸುಬ್ಬಯ್ಯ			
ವೀರಾಜಪೇಟೆ	ಬಸವರಾಜು	ಸುಮಾವಸಂತ್	ಕೆ.ಬಿ. ಶಾಂತಪ್ಪ					
ಕೊಡಗು ಮಂಗಳೂರು ಲೋಕಸಭೆ	ದೇವರಗುಂದ ಸದಾನಂದ ಗೌಡ	ವೀರಪ್ಪ ಮೊಯಿಲಿ	ಎ.ಕೆ.ಸುಬ್ಬಯ್ಯ					


ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಪ್ರತಿಯೊಬ್ಬ ಮತದಾರನ ಹಕ್ಕು, ಮತ ನೀಡುವಾಗ ತನ್ನ ಬುದ್ಧಿವಂತಿಕೆಯ ಜಾಣತನವನ್ನು ಪ್ರದರ್ಶಿಸಬೇಕಾಗುತ್ತದೆ.

7-4-2004 Time 8-00 -ಸಂಗಾತಿ

ಭಾರತೀಯ ಜನತಾ ಪಾರ್ಟಿ

ಮಡಿಕೇರಿ ವಿಧಾನ ಸಭಾ ಕ್ಷೇತ್ರ





ಸನ್ಮಾನ್ಯ ಮತದಾರ ಬಂಧುಗಳೇ,

ಇದೇ ದಿನಾಂಕ 26-4-2004 ರ ಸೋಮವಾರ ದಿವಸ ಕರ್ನಾಟಕ ಚುನಾವಣಾ ಕ್ಷೇತ್ರದಲ್ಲಿ ಮಹತ್ತರ ದಿನವಾಗಿದೆ. ಭವ್ಯ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಿಪೇಯಿಯವರ ನೇತೃತ್ವದವಲ್ಲಿ ಅತೀ ಶರವೇಗದಲ್ಲಿ ಪ್ರಗತಿ ಪಥದತ್ತ ನಾವೆಲ್ಲಾ ದಾಪುಗಾಲು ಹಾಕುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಈ ದೇಶಕ್ಕೆ ನಮ್ಮ ನಿಮ್ಮ ಎಲ್ಲರ ಕೊಡುಗೆಗಳ ಅವಶ್ಯಕತೆ ಈಗ ಅನಿವಾರ್ಯವಾಗಿದೆ. ಅದರ ದೃಢ ನಿಲುವಿಗೆ ತಾವು ತಮ್ಮ ಘನ ಮತ ನೀಡುವ ಮೂಲಕ ನೀವು ನಮಗೆ ಸಹಕಾರ ನೀಡಬೇಕು.

ಹಾಲಿ ಮಡಿಕೇರಿ ವಿಧಾನ ಸಭಾ ಕ್ಷೇತ್ರದಿಂದ ಕೊಂಬಾರನ ಜಿ. ಬೋಪಯ್ಯನಾದ ನಾನು ಬಿಜೆಪಿ ಅಭ್ಯರ್ಥಿಯಾಗಿದ್ದೇನೆ. ಆದ್ದರಿಂದ ಕಮಲದ ಗುರುತಿಗೆ ತಮ್ಮ ಘನ ಮತ ನೀಡುವ ಮೂಲಕ ನನ್ನನ್ನು ಅತ್ಯಧಿಕ ಬಹುಮತದಿಂದ ಜಯಶೀಲನಾಗಿ ಮಾಡಿ, ಈ ಮೂಲಕ ನವರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಗ್ನರಾಗಿರುವ ಈ ದೇಶದ ಪ್ರಧಾನಿ ಅಟಲ್ ಬಿಹಾರಿ ವಾಜಿಪೇಯಿಯವರ ಹೆಗಲಿಗೆ ಹೆಗಲು ಕೊಟ್ಟು ಬಲಪಡಿಸಲು ತಮ್ಮ ಅಮೂಲ್ಯ ಮತ ನೀಡುವ ಮೂಲಕ ಸಹಕರಿಸುವಂತೆ ನನ್ನ ವಿನಮ್ರ ಪ್ರಾರ್ಥನೆ. ವಂದನೆಗಳು,

ತಮ್ಮ ಸೇವಾಕಾಂಕ್ಷಿ

ಕೊಂಬಾರನ ಜಿ. ಬೋಪಯ್ಯ, ಮಡಿಕೇರಿ

ಗೌಡ ಸಮಾಜ, ವಿರಾಜಪೇಟೆ (ರಿ)

ಶ್ರೀ ಕುರುಂಜಿ ಜಾನಕಿ ವೆಂಕಟ್ರಮಣಗೌಡ ಸಮುದಾಯ ಭವನದ ಉದ್ಘಾಟನಾ ಸಮಾರಂಭ

ದಿನಾಂಕ : 14-4-2004 ಉದ್ಘಾಟನೆ ಪೂರ್ವಾಹ್ನ : 10-30 ಘಂಟೆಗೆ

ಸಮಾರಂಭದ ಅಧ್ಯಕ್ಷತೆ : ಶ್ರೀ ಪಡಿಕಲ್ಲು ಡಬ್ಲೂ ಮಾದಪ್ಪ, ಅಧ್ಯಕ್ಷರು, ಗೌಡ ಸಮಾಜ, ವಿರಾಜಪೇಟೆ.

ಸಮುದಾಯ ಭವನದ ಉದ್ಘಾಟನೆ : ಸನ್ಮಾನ್ಯ ಡಾ. ಕುರುಂಜಿ ವೆಂಕಟ್ರಮಣ ಗೌಡ (ಭಾರತ ವಿದ್ಯಾರತ್ನ ಪ್ರಶಸ್ತಿ, ಅಮೆರಿಕಾದ ಡಾಕ್ಟ್ರೇಟ್ ಪ್ರಶಸ್ತಿ ವಿಜೇತ, ಸುಳ್ಯದ ಅಮರ ಶಿಲ್ಪಿ)

ಜ್ಯೋತಿ ಬೆಳಗುವುದು : ಶ್ರೀಮತಿ ಕುರುಂಜಿ ಜಾನಕಿಯವರು.

ಅಭಿನಂದನಾ ಸನ್ಮಾನ : ಶ್ರೀಮತಿ ಮತ್ತು ಶ್ರೀ ಕುರುಂಜಿ ವೆಂಕಟ್ರಮಣ ಗೌಡ ದಂಪತಿಗಳಿಗೆ.

ಮುಖ್ಯ ಅತಿಥಿಗಳು

ಸನ್ಮಾನ್ಯ ಶ್ರೀ ಡಿ. ವಿ. ಸದಾನಂದ ಗೌಡ, ಕರ್ನಾಟಕ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ಮಾಜಿ ಉಪಾಧ್ಯಕ್ಷರು,
ಶ್ರೀ ಡಾ. ಕುರುಂಜಿ ಚಿದಾನಂದ, M.B.B.S., M.S., ಮೆಡಿಕಲ್ ಡೈರೆಕ್ಟರ್, ಉಪಾಧ್ಯಕ್ಷರು, ಕೆ. ವಿ. ಜಿ. ಮೆಡಿಕಲ್ ಕಾಲೇಜು ಸುಳ್ಯ
ಶ್ರೀ ಡಾ. ಕುರುಂಜಿ ರೇಣುಕಾ ಪ್ರಸಾದ್, M.B.B.S., ಪ್ರಧಾನ ಕಾರ್ಯದರ್ಶಿ, ಕೆ. ವಿ. ಜಿ. ಮೆಡಿಕಲ್ ಕಾಲೇಜು, ಸುಳ್ಯ.
ಶ್ರೀಮತಿ ಶೋಭಾ ಚಿದಾನಂದ M.A., Eng. Lit ಕುರುಂಜಿ ಲಿಬರಲ್ ಎಜುಕೇಷನ್ಸ್, ಸುಳ್ಯ.
ಶ್ರೀಮತಿ ಡಾ.ಕುರುಂಜಿ ಜ್ಯೋತಿ ರೇಣುಕಾ ಪ್ರಸಾದ್, M.B.B.S., M.D., ಕುರುಂಜಿ ಲಿಬರಲ್ ಎಜುಕೇಷನ್ (ರಿ.) ಸುಳ್ಯ
ಶ್ರೀ ದಂಬೆಕೋಡಿ ಎ. ಚಿಣ್ಣಪ್ಪ, ಮಾಜಿ ಸಚಿವರು
ಶ್ರೀ ದಂಬೆಕೋಡಿ ಎಸ್. ಮಾದಪ್ಪ, ಮಾಜಿ ಶಾಸಕರು
ಶ್ರೀ ತೋಟಂಬೈಲು ನಾಣಯ್ಯ, ಅಧ್ಯಕ್ಷರು, ಕೊಡಗು ಗೌಡ ಒಕ್ಕೂಟ, ಮಡಿಕೇರಿ
ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣ, ಅಧ್ಯಕ್ಷರು, ನಗರ ಸಭೆ, ಮಡಿಕೇರಿ
ಶ್ರೀ ಕುಯ್ಯುಮುಡಿ ಪೂರ್ಣಯ್ಯ, ಅಧ್ಯಕ್ಷರು, ಮೂಡಾ, ಮಡಿಕೇರಿ
ಶ್ರೀ ಡಾ. ಬೇಕಲ್ ಸೋಮನಾಥ, ಆಯುರ್ವೇದದಲ್ಲಿ ರಾಷ್ಟ್ರಪತಿ ಪದಕ ಪಡೆದವರು, ಕರಿಕೆ,
ಶ್ರೀ ಪೈಕೇರ ಅನಂತರಾಮು, ಅಧ್ಯಕ್ಷರು, ಗೌಡ ಸಮಾಜ, ಮಡಿಕೇರಿ
ಶ್ರೀ ತುಮ್‌ತಜೆ ಗಣೇಶ್, ಅಧ್ಯಕ್ಷರು, ಗೌಡ ವಿದ್ಯಾಸಂಘ, ಮಡಿಕೇರಿ
ಶ್ರೀ ಹೊಸೂರು ರಮೇಶ್, ಅಧ್ಯಕ್ಷರು, ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ.
ಶ್ರೀಮತಿ ಚಿಯಂಡಿ ರಾಧ ಯಾಧವ್, ಅಧ್ಯಕ್ಷರು, ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ
ಶ್ರೀ ಪಾಣತ್ತಲೆ ತಮ್ಮಯ್ಯ, ಅಧ್ಯಕ್ಷರು, ಗೌಡ ಸಮಾಜ, ಮೂರ್ನಾಡು
ಶ್ರೀ ಪುಳಕಂಡ್ರ ಮುತ್ತಪ್ಪ, ಅಧ್ಯಕ್ಷರು, ಗೌಡ ಸಮಾಜ, ಮರಗೋಡು
ಶ್ರೀ ಬೇಕಲ್ ಜಯರಾಮ್‌ಗೌಡ, ಅಧ್ಯಕ್ಷರು, ಗೌಡ ಸಮಾಜ, ಭಾಗಮಂಡಲ
ಶ್ರೀ ಕುದುಕುಳಿ ಟಿ. ರಾಮಪ್ಪ, ಅಧ್ಯಕ್ಷರು, ಗೌಡ ಸಮಾಜ, ಸೋಮವಾರಪೇಟೆ
ಶ್ರೀ ತೋಟಂಬೈಲು ಪ್ರಭಾಕರ, ಅಧ್ಯಕ್ಷರು, ಗೌಡ ಸಮಾಜ, ಪಿರಿಯಾಪಟ್ಟಣ
ಶ್ರೀ ಕೈಬಿಲಿರ ಪೊನ್ನಣ್ಣ, ಅಧ್ಯಕ್ಷರು, ಗೌಡ ಸಮಾಜ, ಹಾಸನ
ಶ್ರೀ ತೋಟಂಬೈಲು ಬೆಳ್ಳಿಯಪ್ಪ, ಅಧ್ಯಕ್ಷರು, ಗೌಡ ಸಮಾಜ, ಬೆಂಗಳೂರು
ಶ್ರೀ ಅಮ್ಮವನ ವಾಸು, ಕೈಗಾರಿಕೋದ್ಯಮಿ, ಉಪಾಧ್ಯಕ್ಷರು, ಗೌಡ ಸಮಾಜ, ಬೆಂಗಳೂರು
ಶ್ರೀ ದೇವಜನ ಧನಂಜಯಕುಮಾರ್, ನಿವೃತ್ತ ಡಿ. ಐ. ಜಿ., ಸಿ. ಆರ್. ಪಿ. ಎಸ್., ಬೆಂಗಳೂರು
ಡಾ. ಗುಡ್ಡೆಮನೆ ಚಿನ್ನಯ್ಯ, ಕೊಡಗು ಗೌಡ ವಿದ್ಯಾಸಂಸ್ಥೆ ಅಕಾಡೆಮಿ ಅಧ್ಯಕ್ಷರು, ಬೆಂಗಳೂರು
ಶ್ರೀ ದಂಬೆಕೋಡಿ ಎಸ್. ಆನಂದ, ಮಾಜಿ ನಿರ್ವಾಹಕ ನಿರ್ದೇಶಕರು, ಕೆ. ಎಸ್. ಎಫ್. ಸಿ. , ಬೆಂಗಳೂರು
ಶ್ರೀ ಅಮೆ ಕೃಷ್ಣಪ್ಪ ಶಿವರಾಯ್, ನಿವೃತ್ತ ಮೂಡಾ ಲೆಕ್ಕಾಧಿಕಾರಿ, ಮೈಸೂರು
ಶ್ರೀ ಪಟ್ಟಡ ಪ್ರಭಾಕರ, ಗೌರವ ಸಂಪಾದಕರು, ಕೊಡಗು ಸಂಗಾತಿ ಪತ್ರಿಕೆ, ಮೈಸೂರು
ಶ್ರೀ ರಾಮಚಂದ್ರ ಗೌಡ, ಅಧ್ಯಕ್ಷರು, ಒಕ್ಕಲಿಗ ಯಾನೆ ಗೌಡ ಸಮಾಜ, ಮಂಗಳೂರು
ಶ್ರೀ ಲೋಕಯ್ಯ, ಕಾರ್ಯದರ್ಶಿ, ಒಕ್ಕಲಿಗ ಯಾನೆ ಗೌಡ ಸಮಾಜ, ಮಂಗಳೂರು
ಶ್ರೀ ಕೋರಿಯಾರ್ ರವಿಕುಮಾರ್, ಶ್ರೀ ಭಾರತ ಗೌರವ, ರಾಷ್ಟ್ರಪತಿ ಪ್ರಶಸ್ತಿ ವಿಜೇತರು

ಕಾರ್ಯಕ್ರಮ : ಪ್ರಾರ್ಥನೆ, ಸ್ವಾಗತ, ಆಡಳಿತ ಮಂಡಳಿ ವರದಿ, ಅಭಿನಂದನಾ ಸನ್ಮಾನ, ಉದ್ಘಾಟನಾ ಭಾಷಣ, ಮುಖ್ಯ ಅತಿಥಿಗಳ ಭಾಷಣ, ಅಧ್ಯಕ್ಷರ ಭಾಷಣ, ವಂದನಾರ್ಪಣೆ, ಭೋಜನ, ಅಪರಾಹ್ನ : 2-30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ.

"ಸರ್ವರಿಗೂ ಆದರದ ಸುಸ್ವಾಗತ"

ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ, ಗೌಡ ಸಮಾಜ ವಿರಾಜಪೇಟೆ, (ಬೋಯಿಕೇರಿ)

ದೂರವಾಣಿ : 08274 / 255382

Reg. No. KA/SK/MYS/88/2003 - 05 RNI No. : 10-01-96 TCI Kar. 09592



ಸಮಾಜ ಬಂಧುಗಳಲ್ಲಿ ವಿನಂತಿ!

ಇದೀಗ ಬಂದಿದೆ ಸುವರ್ಣಾವಕಾಶ!!

ಕನ್ನಡ ಜಿಲ್ಲೆ ಹಾಗೂ ಕೊಡಗಿನ ಅಳಿಯಂದಿರಾದ

ಶ್ರೀ ದೇವರ ಗುಂಡ

ಡಿ. ವಿ. ಸದಾನಂದ ಗೌಡರು



ಕೊಡಗು, ಮಂಗಳೂರು ಲೋಕಸಭಾ ಕ್ಷೇತ್ರ ಅಭ್ಯರ್ಥಿಯಾಗಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. ಕೊಡಗು ಮತ್ತು ದಕ್ಷಿಣ ಕನ್ನಡದ ನಿಕಟ ಸಂಬಂಧಿಯಾದ ಡಿ.ವಿ. ಸದಾನಂದ ಗೌಡರು ಭಾ.ಜ.ಪ.ದ ಧುರೀಣರಾಗಿ, ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ಉಪ ನಾಯಕರಾಗಿ, ಅಡಿಕೆ ಬೆಳೆಗಾಗರಿಗೆ ನ್ಯಾಯ ಬೆಲೆ (ಬೆಂಬಲ ಬೆಲೆ) ಯನ್ನು ದೊರಕಿಸಿಕೊಟ್ಟು, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ದುಡಿದು ಜನಾನುರಾಗಿಯಾಗಿರುತ್ತಾರೆ.

ಸ್ವತಂತ್ರ್ಯ ಭಾರತದ 57 ವರ್ಷಗಳ ಚರಿತ್ರೆಯಲ್ಲಿ ನಮ್ಮವರನ್ನು ಜನಪ್ರತಿನಿಧಿಯಾಗಿ ದೆಹಲಿಗೆ ಕಳುಹಿಸಿ, ಭಾ.ಜ.ಪ.ದ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗುವ ಸಕಲ ಅರ್ಹತೆಗಳನ್ನುಪಡೆದಿರುವ ಏಕೈಕ ವ್ಯಕ್ತಿಯೆಂದರೆ ಡಿ. ವಿ. ಸದಾನಂದ ಗೌಡರು.

ಇವರಿಗೆ ತಮ್ಮೆಲ್ಲರ ಅಮೂಲ್ಯ ಮತ ನೀಡಿ ಅತೀ ಹೆಚ್ಚಿನ ಬಹುಮತದಿಂದ ಖಂಡಿತಾ ಗೆಲ್ಲಿಸಬೇಕಾಗಿ ಕೋರುವ.

ಶ್ರೀ ಅನಂತರಾಜು ಗೌಡ, ಪುತ್ತೂರು

Ex-Senior Manager, MICO, Bangalore

ಮಾಜಿ ಉಪಾಧ್ಯಕ್ಷ, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ,ಬೆಂಗಳೂರು.

C.O. Indian Oil Corporation Ltd., J.R.O. Nellyady (D.K.)

Sri Mahalingeshwara Bulk Carriersä Nellyady (D.K.)

Ph. : 08251 - 654677, 080 - 26785276 Mobile : 94483 48440

ಮತ್ತು ಕೋಟೆಕಾಡು ಎಸ್ಟೇಟ್, ಕರ್ಣಂಗೇರಿ ಗ್ರಾಮ

ಮಕ್ಕಂದೂರು, ಮಡಿಕೇರಿ.

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/2404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.